ದೇಸಿ ಕೃಷಿ ಜ್ಞಾನ

ಸಂಪುಟ 9

ಜಾನುವಾರು

ಡಾ. ಎಂ. ನಾರಾಯಣಸ್ವಾಮಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

DesiJaanuvaarugalu by **Dr. M. Narayana Swamy,** Professor & Head, Dept. of Veterinary Physiology, Veterinary College, KVAPSU, Hebbal, Bangalore-560 024. Published by **Ashok N. Chalawadi,** Administrative Officer, Kannada Pustaka Pradhikara, Kannada Bhavana, J.C. Road, Bangalooru-560 002.

ಮೊದಲ ಮುದ್ರಣ: ೨೦೦೮
ಪುಟಗಳು : xviii + ೧೧೦
ಬೆಲೆ : **ರೂ. ೫೦/-**
ಪ್ರತಿಗಳು : ೧೦೦೦

Print : 2008
Page : xviii + 110
Price : **Rs. 50/-**
Copies : 1000
ISBN : 81-7713-248-2

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨

ಮುಖಪುಟ ವಿನ್ಯಾಸ : **ಎಂ.ಎಸ್. ಮೂರ್ತಿ**
ಕರಡು ತಿದ್ದಿದವರು : ಡಾ. ಎಂ. ನಾರಾಯಣ ಸ್ವಾಮಿ

ಅಕ್ಷರ ಜೋಡಣೆ :
ಇಳಾ ಮುದ್ರಾ
ಬೆಂಗಳೂರು-೫೬೦ ೦೨೬, ದೂ: ೨೬೭೫೭೧೫೯

ಮುದ್ರಕರು :
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦ ೦೨೭, ದೂ: ೨೨೨೩೪೦೬೬

ಪ್ರಧಾನ ಸಂಪಾದಕರು

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಸಂಪಾದಕ ಸಲಹಾ ಮಂಡಳಿ

ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು
ನಾಗೇಶ್ ಹೆಗಡೆ
ಡಾ. ಕೆ. ಪುಟ್ಟಸ್ವಾಮಿ
ಡಾ. ಕೆ.ವೈ. ನಾರಾಯಣಸ್ವಾಮಿ
ಭರಮಗೌಡ
ಜಿ. ನಾರಾಯಣರೆಡ್ಡಿ

ಶ್ರೀ ಹೊರೆಯಾಲ ದೊರೆಸ್ವಾಮಿ   ಡಾ. ಕಾಶಿನಾಥ ಅಂಬಲಗಿ
ಡಾ. ಶರಣಮ್ಮ ಗೊರೆಬಾಳ   ಶ್ರೀಮತಿ ಶೀಲಾ ತಿವಾರಿ

ಪ್ರಕಾಶಕರು

ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು

ಲೇಖಕರು

೧.	ಮಣ್ಣು ಮತ್ತು ನೀರು	ಶ್ರೀಪಡ್ರೆ
೨.	ಅರಣ್ಯ	ಶಿವಾನಂದ ಕಳವೆ
೩.	ಬೀಜ	ಕೃಷ್ಣಪ್ರಸಾದ್
೪.	ಆಹಾರ / ಆರೋಗ್ಯ	ಬಿ.ಎಸ್. ಸೋಮಶೇಖರ್
೫.	ಕೃಷಿ ಆಚರಣೆ	ಮಲ್ಲಿಕಾರ್ಜುನ ಹೊಸಪಾಳ್ಯ
೬.	ಕೃಷಿ ಉಪಕರಣಗಳು	ಗಾಣದಾಳು ಶ್ರೀಕಂಠ
೭.	ನಿರ್ಮಾಣ ಕಲೆ	ಆನಂದತೀರ್ಥ ಪ್ಯಾಟಿ, ನರೇಂದ್ರ ರೈ ದೇರ್ಲ
೮.	ಕೀಟ / ರೋಗ	ವಿಜಯ ಅಂಗಡಿ
೯.	ಜಾನುವಾರು	ಡಾ. ಎಂ. ನಾರಾಯಣಸ್ವಾಮಿ
೧೦.	ಕುರಿಸಾಕಣೆ	ಡಾ. ಸಿ.ಎಸ್. ರಘುಪತಿ
೧೧.	ತೋಟಗಾರಿಕೆ	ಪೂರ್ಣಪ್ರಜ್ಞ ಬೇಳೂರು

ಅಧ್ಯಕ್ಷರ ಮಾತು

ಭಾರತ ಕೃಷಿ ಪ್ರಧಾನವಾದ ದೇಶವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದು ಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯಾ ಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟು ಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿಕಾಯಕವನ್ನೂ ಬಿಡಲೂ ಆಗದ, ಕಟ್ಟಿಕೊಳ್ಳಲೂ ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯ ಮಾನವಾಗಿದೆ. ಇದಕ್ಕೆ ಕೇವಲ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ; ಇದಕ್ಕೂ ಮುನ್ನ ಹಸಿರು ಕ್ರಾಂತಿಯ ಯೋಜನೆ ಕೃಷಿ ನೆಲವನ್ನು ಬಂಜೆಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿಪಂಡಿತರು ತುಂಬಾ ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಕೃಷಿಗೆ ಅಂಟಿಕೊಂಡಂತೆ ಗ್ರಾಮ ಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿ ಕೈಗಾರಿಕೆಗಳು ನಾಶವಾದವು. ನೆಲದ ಜೀವಸತ್ವ ಹಾಳಾಯಿತು, ನಿಸರ್ಗದ ಜೀವಸರಪಳಿ ಸಾಕಷ್ಟು ಹಾನಿಗೀಡಾಯಿತು. ಗುಂಡು ತೋಪುಗಳು ಇಲ್ಲವಾದವು. ಕೆರೆ ಕಟ್ಟೆ ಕುಂಟೆ ಬೆಂಚೆ ಪೆಂಚೆ ತಲಪರಿಗೆಗಳು ಕಣ್ಮರೆಯಾದವು. ಇವುಗಳು ಕೇವಲ ನೀರು ಸಂಗ್ರಹ ತಾಣಗಳಾಗಿ ಇರಲಿಲ್ಲ. ಜೀವ ಸಂಕುಲಗಳ ಬದುಕಿನ ಜೀವನಾಡಿಗಳಾಗಿದ್ದವು. ಇದೆಲ್ಲವನ್ನೂ ಪ್ರಗತಿಯೆನ್ನುವುದಾದರೆ ಇಂಥ ಪ್ರಗತಿಯನ್ನು ನಿಸರ್ಗ ವಿರೋಧಿಯೆನ್ನದೆ ವಿಧಿಯಿಲ್ಲ. ನಮ್ಮ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಆದ್ದರಿಂದಲೇ ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ ಕೃಷಿ ಒಂದು ನೆಲಮೂಲ ವಿಜ್ಞಾನ ಇಂದು ಕಳೆದುಹೋಗುತ್ತಿದೆ. ಆಧುನಿಕ ಕೃಷಿ ಪಂಡಿತರ ಹಾಗೂ ಕೃಷಿಯಾಧಾರಿತ ಕೈಗಾರಿಕೋದ್ಯಮಿಗಳ ಹುನ್ನಾರದಲ್ಲಿ ಅದು ಕಡೆಗಣನೆಗೆ ಒಳಗಾಯಿತು.

ಬೃಹತ್ತಿನ ಭ್ರಮೆಯಲ್ಲಿ ಕನಸಿದ ನಮ್ಮ ರಾಜಕೀಯ ಆರ್ಥಿಕ ನೀತಿ ಈ ನೆಲಮೂಲ ಜ್ಞಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿತು. ಅಧಿಕ ಇಳುವರಿಗೆ ಮೋಹಿತನಾದ ರೈತ ಕೈಗಾರಿಕೋದ್ಯಮಿಗಳ ತಾಳಕ್ಕೆ ಹೆಜ್ಜೆ ಹಾಕಿದ. ಭೂ ಅಭಿವೃದ್ಧಿಯ ಹೆಸರಿನ ಬ್ಯಾಂಕುಗಳ ರೈತನ ಭೂಮಿಕಾಣಿಯನ್ನು ಅಡವಿಟ್ಟುಕೊಂಡು ಸಾಲಕೊಟ್ಟವು. ಸಾಲ ಪಡೆದ ರೈತ ಬೋರು ಕೊರೆಸಿದ, ತಂತಿಬೇಲಿ ಹಾಕಿದ. ಸಿಕ್ಕ ನೀರಿಗೆ ಸಂಭ್ರಮಿಸಿದ. ಒಂದು ಬೋರು ಹೋಗಿ ನೂರಾರು, ಸಾವಿರಾರು ಆಗಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯಿತು. ಕುಡಿಯುವ ನೀರಿಗೆ ತತ್ವಾರವಾದ ದುಸ್ಥಿತಿಯನ್ನು ರೈತ ತನ್ನ ಮನೆ ಬಾಗಿಲಿಗೆ ಆಹ್ವಾನಿಸಿದ. ಸಾಲ ಕೊಟ್ಟ ಬ್ಯಾಂಕುಗಳು ಬಡ್ಡಿಗೆ ಬಡ್ಡಿ ಸೇರಿಸಿ ಅದನ್ನು ಅಸಲಾಗಿ ಪರಿವರ್ತಿಸಿ ಸುಸ್ತಿಯ ಸುಳಿಗೆ ಸಿಕ್ಕಿಸಿ ರೈತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದುವು. ಹಿಂದೆ ಎಂಥ ಬರದಲ್ಲೂ ರೈತ ತನ್ನ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಸಾಲ ತೀರಿಸಲಾರದ್ದಕ್ಕೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಎಂದೂ ಈ ಪ್ರಮಾಣದಲ್ಲಿ ಇಳಿದಿರಲಿಲ್ಲ, ಇಂದು ಹಳ್ಳಿಗಳಲ್ಲಿ ದುಡಿಯುವ ಯುವಕರ ಪಡೆ ಉಳಿದಿಲ್ಲ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಸಿಕ್ಕುವ ಮಾಸಿಕ ಎರಡು ಮೂರು ಸಾವಿರ ರೂಪಾಯಿಗಳ ಜೀತಕ್ಕೆ ಸೇರಿದ್ದಾರೆ. ಗುಟ್ಕಾ ಸಾರಾಯಿಗಳ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕಾರಣ ಬಿಡುವಿಲ್ಲದ ದುಡಿತದ ನಡುವೆ ಅವರಿಗೆ ಬಿಡುಗಡೆ ಕೊಡುವ ಚಟಗಳು ಇವಾಗಿವೆ. ಇವುಗಳ ಜೊತೆಗೆ ಮಚ್ಚು ಲಾಂಗುಗಳ ಉಪ್ಪಿ ಶಿವು ನಾರಾಯಣರು ಅವರನ್ನು ಸಿನಿಮಾ ಎಂಬ ಭ್ರಾಮಕ ಲೋಕದಲ್ಲಿ ಉದ್ರೇಕಿಸುತ್ತಿದ್ದಾರೆ. ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು ಕೈಲಾಗದವರು ಹಾಗೂ ಮಕ್ಕಳು. ಇವರ ಜೊತೆಗೆ ಕಳ್ಳುಬಳ್ಳಿಯ ಮೋಹಕ್ಕೆ ಬಿಡಲಾರದ ಬಂಧದಲ್ಲಿ ಅಲ್ಲಿಯೇ ಉಳಿದಿರುವವರು. ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು ಮಾತ್ರ ನಗರಕ್ಕೆ ಹೋದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಮಿಕ್ಕಂತೆ ಹಳ್ಳಿಗಳ ಬೀದಿಗಳು ಬಿಕೋ ಎನ್ನುತ್ತಿದೆ. ಕೃಷಿಕಾಯಕದಿಂದ ದೂರವಾಗುತ್ತಿರುವ ಹಳ್ಳಿಗಳ ಭೂಮಿಯನ್ನು ನಗರದ ಭೂ ಮಾಫಿಯಾ ಜಗತ್ತು ಕಬಳಿಸುತ್ತಿದೆ. ಇಂಥ ದಾರುಣತೆಯ ನಡುವೆ ಅಲ್ಲೊಬ್ಬ ಇಲ್ಲೊಬ್ಬ ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠನಾಗಿ ಕೃಷಿಕಾಯಕದಲ್ಲಿ ತತ್ಪರನಾಗಿದ್ದಾನೆ. ಆಧುನಿಕ ಕೃಷಿಗೆ ಹಂಬಲಿಸಿದರೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾದ ಅನಿವಾರ್ಯತೆಯಲ್ಲಿ ಹಲವರು ಸಾಂಪ್ರದಾಯಿಕ ಕೃಷಿಗೆ ಜೋತುಬಿದ್ದಿದ್ದಾರೆ. ಇವರ ನಡುವೆ ಆಧುನಿಕ ಪ್ರಯೋಗದ ಪ್ರಾತ್ಯಕ್ಷತೆಗೆ ಒಡ್ಡಿಕೊಂಡವರೂ ಸಾಗಿದ್ದಾರೆ. ಹೀಗಾಗಿ ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಇಂಥ ವಾತಾವರಣದಲ್ಲಿ ದೇಸಿ ಕೃಷಿ ಜ್ಞಾನದ ಹೆಸರು ಹೇಳುತ್ತಾ ಹಲವು ಜೈವಿಕ ಪದ್ಧತಿಯ ಹೊಸ ಪ್ರಯೋಗಗಳನ್ನು ನಡೆಸುವ ಅದನ್ನು ಎಲ್ಲ ಕಡೆಗೂ ಏಕ ಮಾದರಿಯಂತೆ ಪ್ರಚುರಪಡಿಸುವ ಜ್ಞಾನಿಗಳು ಹುಟ್ಟಿಕೊಂಡಿದ್ದಾರೆ. ಅದನ್ನು

ಅಲ್ಲಗಳೆಯುತ್ತಾ ಮತ್ತೊಂದು ರೀತಿಯಲ್ಲಿ ಪ್ರಯೋಗಶೀಲರಾಗಿ ಇದೇ ನಿಜವಾದ ದೇಸಿ ಪದ್ಧತಿ ಎಂದು ತಮ್ಮದೇ ಆದ ಮಾದರಿಯೊಂದನ್ನು ಹೇಳುತ್ತಾ ಪ್ರಾತ್ಯಕ್ಷತೆಗಳನ್ನು ತೋರುತ್ತಿರುವ ನೆಲನಿಷ್ಠೆಯಲ್ಲಿ ಮಾತನಾಡುವವರೂ ಇದ್ದಾರೆ. ಈ ಎಲ್ಲ ಪ್ರಯೋಗಗಳೂ ವಸ್ತುಸ್ಥಿತಿಗಿಂತ ಹೆಚ್ಚಾಗಿ ಉತ್ಪ್ರೇಕ್ಷಿತ ಮಾತುಗಳ ಸೂಕತದಲ್ಲಿ ರೈತರನ್ನು ದಿಕ್ಕು ತಪ್ಪಿಸುತ್ತಿವೆ ಎಂಬ ಅನುಮಾನ ದಟ್ಟವಾಗುತ್ತಿದೆ. ಏಕೆಂದರೆ ನೆಲಮೂಲ ವಿಜ್ಞಾನವೆಂಬುದು ಎಂದೂ ಏಕಮಾದರಿಯದಲ್ಲ. ಅದರ ಗುಣವೇ ಬಹುತ್ವ ಮೂಲದ್ದು. ಹಾಗೂ ಪ್ರದೇಶನಿಷ್ಠೆಯಲ್ಲಿ ಅನುಭವ ಜನ್ಯವಾದದ್ದು. ಈ ಹಿನ್ನೆಲೆಯಲ್ಲಿಯೇ ದೇಸಿ ಜ್ಞಾನ ಎನ್ನುವಾಗ 'ದೇಸಿ' ಪದವನ್ನು ವಿಶೇಷವಾಗಿ ಅರ್ಥೈಸಿಕೊಳ್ಳಬೇಕಾಗಿದೆ. ದೇಸಿ ಎಂಬುದು ಜನಪದಕ್ಕೆ ಸಮಾನಾರ್ಥಕವಾಗಿಯಾಗಲೀ ಪೂರಕವಾಗಿಯಾಗಲೀ ಪರ್ಯಾಯವಾಗಿಯಾಗಲೀ ಬಳಸುವ ಪದವಲ್ಲ. ಅದು ಮಾರ್ಗಕ್ಕೆ ವಿರುದ್ಧವಾಗಿ ಸಾಮಾನ್ಯೀಕರಿಸಿ ಪ್ರಯೋಗಿಸುವ ಪದವಾದರೂ ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಲೇ ಏಕ ಎಂಬುದನ್ನು ನಿರಾಕರಿಸುತ್ತ ಅನೇಕ ಎಂಬುದನ್ನು ತುಂಬಿಕೊಳ್ಳುತ್ತ ತನ್ನ ಅರ್ಥವ್ಯಾಪ್ತಿಯನ್ನು ಪ್ರತೀತಗೊಳಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಈ ಪದವನ್ನು ಪ್ರಯೋಗಿಸುವಾಗಲಂತೂ ಅದರ ಬಹುತ್ವದ ಶ್ರೀಮಂತಿಕೆ ಸಮೃದ್ಧವಾಗಿ ಕಾಣುವಂಥಾದ್ದು. ಉದಾಹರಣೆಗೆ ಕರ್ನಾಟಕವನ್ನು ಕೃಷಿಗೆ ಸಂಬಂಧಿಸಿ ನಾಲ್ಕು ನೆಲೆಗಳಲ್ಲಿ ವಿಂಗಡಿಸಬಹುದು. ಮಲೆನಾಡು, ಅರೆಮಲೆ ನಾಡು, ಬಯಲು ಸೀಮೆ, ಬೆಂಗಾಡುಸೀಮೆ. ಈ ನಾಲ್ಕು ಪ್ರದೇಶಗಳ ಭೂವೈಲಕ್ಷಣ್ಯ ಮಳೆ ಬಿಸಿಲಿನ ಹವಾಮಾನ ಪರಿಸ್ಥಿತಿ ತೀರ ವಿಭಿನ್ನವೂ ವಿಶಿಷ್ಟವೂ ಆದದ್ದು. ಆದರೆ ಮಲೆನಾಡು ಎಂದ ತಕ್ಷಣ ಅದನ್ನು ಏಕಮಾದರಿಯಲ್ಲಿ ಗ್ರಹಿಸುವುದು ತಪ್ಪು, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಈ ಪ್ರದೇಶಗಳು ಮಲೆನಾಡು ಪ್ರದೇಶಗಳಾದರೂ ಅವುಗಳ ವಿಭಿನ್ನತೆಗಳು ಆಯಾ ನೆಲದ ಗುಣವಿಶೇಷತೆಯ ಅಸ್ಮಿತೆಗಳು. ಹಾಗೆಯೇ ಬಯಲುಸೀಮೆಯೆಲ್ಲಾ ಒಂದೇ ಅಲ್ಲ, ಹೀಗಾಗಿ ದೇಸಿ ಎಂಬುದು ಐದು ಮೈಲಿಯ ಅಂತರದಲ್ಲಿ ತನ್ನ ವ್ಯತ್ಯಾಸವನ್ನು ಢಾಳಾಗಿ ಕಾಣಿಸುವ ಅನನ್ಯತೆಯಿಂದ ಕೂಡಿರುತ್ತದೆ. ಈ ಅನನ್ಯತೆಯ ಅರಿವೆಂಬುದು ಆಯಾ ನೆಲಮೂಲದ ಅನುಭವ ಮೂಸೆಯಲ್ಲಿ ಪರಿಪಾಕಗೊಂಡು ಮೂಡಿರುತ್ತದೆ. ಬಯಲುಸೀಮೆಯಲ್ಲಿ ಒಂದೇ ಪ್ರದೇಶದ ಕೆರೆ ಬಯಲಿಗೂ ಅಲ್ಲಿಂದ ಐದು ಮೈಲಿ ಆಚೆಗಿರುವ ಕುಂಟೆ, ಬೆಂಚೆ, ಕಟ್ಟೆಗಳನ್ನು ಮಾತ್ರ ಒಳಗೊಂಡ ಬಯಲಿಗೂ ವ್ಯತ್ಯಾಸವಿರುತ್ತದೆ, ಬಿತ್ತುವ ಬೀಜ, ಬಳಸುವ ಗೋಡುಗೊಬ್ಬರ ಉಪಕರಣ ಕೃಷಿ ಮಾಡುವ ವಿಧಾನ, ಕಾಲಮಾನ ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಪಕ್ವಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ. ಇದು ದೇಸಿವಿಜ್ಞಾನ. ಇಂಥ ಅರಿವನ್ನು ಗಂಭೀರವಾಗಿ ಸ್ವೀಕರಿಸಿ ಇದನ್ನು ಮೂಲ ಬೇರಾಗಿಸಿಕೊಂಡು ನಮ್ಮ

ಹೊಸ ಸಂಶೋಧನೆಗಳು ಬೆಳೆಯಬೇಕಾಗಿದೆ. ಒಗ್ಗದ ನೆಲಕ್ಕೆ ವೆನಿಲಾ ಹಾಕುವುದು ಮಿಡಿ ಸೌತೆ, ಬೀಟಿ ಹತ್ತಿಯ ಭ್ರಮೆಗೆ ಸಿಲುಕಿ ಹೊಂದಿಕೊಳ್ಳದ ಬೀಜ ಬಿತ್ತುವುದು ಆಗಬಾರದು. ನಿರ್ಬೀಜ ತಳಿಗಳನ್ನು ಮಾರುತ್ತಿರುವ ಬೀಜ ಗೊಬ್ಬರ ಔಷಧಿ ಕಂಪನಿಗಳ ಭ್ರಮಾತ್ಮಕ ಜಾಹೀರಾತಿನ ಮೋಸಜಾಲದಲ್ಲಿ ನಮ್ಮ ಬಡರೈತರು ಹಾಳಾಗಿರುವುದು ಹೀಗೆ. ನಮ್ಮ ಅಕ್ಷರ ಬುದ್ಧಿಯ ಕೃಷಿ ಪಂಡಿತರು ಇಂಥ ಹುನ್ನಾರಗಳಿಗೆ ಮುಖವಾಣಿಗಳಾಗಿ ಕೆಲಸ ಮಾಡುತ್ತಿರುವುದು ವಿಷಾದನೀಯ. ಇದು ತಪ್ಪಬೇಕು. ಜೊತೆಗೆ ಇವರ ದಂಧಾದುಂಧಿಯ ಆಕ್ರಮಣದಲ್ಲಿ ಹಾಳಾಗುತ್ತಿರುವ ಭೂಮಿ ಹಾಗೂ ಜೀವಜಗತ್ತು ರಕ್ಷಿತವಾಗಬೇಕು. ಭೂಮಿಯ ಧರ್ಮಕ್ಕೆ ಅಂದರೆ ಪಂಚಭೂತಗಳಿಗೆ ಎಂದೂ ವಂಚನೆಯೆಸಗದಂತೆ ರೂಪುಗೊಂಡ ದೇಸಿಜ್ಞಾನ ಪದ್ಧತಿ ಅಳಿದುಹೋಗಬಾರದು. ಅದನ್ನು ಪುನರುಜ್ಜೀವಿಸುತ್ತ ಆ ಪರಂಪರೆಯ ಮುಂದುವರಿಕೆಯಾಗಿ ಹೊಸ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ನಮ್ಮ ಕೃಷಿ ಸಂಶೋಧನೆಗಳು ನಡೆಯಬೇಕು. ಆಧುನಿಕ ಕೃಷಿಪಂಡಿತರು ಕೈಗಾರಿಕಾ ಉತ್ಪನ್ನಮುಖಿಗಳಾಗದೆ ಮಾನವ ಸಂಪನ್ಮೂಲ ಬಳಕೆಯ ಶ್ರಮ ಸಲಕರಣೆಗಳ ಸಾಧ್ಯತೆಗಳತ್ತ ಗಮನಹರಿಸಬೇಕು. ನೆಲಮೂಲ ತಳಿಗಳ ನಿರಾಕರಣೆಯನ್ನು ಬಿಟ್ಟು ಅವುಗಳ ಬಲವರ್ಧನೆಯ ಕಡೆಗೆ ಆಸಕ್ತಿ ವಹಿಸಬೇಕು. ಹಾಗೆಯೇ ದೇಸಿಯ ಬಹುತ್ವವನ್ನು ಮನಗಂಡು ನೆಲನಿಷ್ಠೆಯ ಜ್ಞಾನವನ್ನು ಗೌರವಿಸುವ ವಿಸ್ತರಿಸುವ ತಿಳುವಳಿಕೆ ನೀಡುವ ಕಡೆ ತೊಡಗಿಸಿಕೊಳ್ಳಬೇಕು, ಇದು ತುರ್ತಾಗಿ ಆಗಬೇಕಾದ ಕೆಲಸ.

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಬಗೆಯ ಕೃಷಿ ಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿ; ಸಾವಯವ ಕೃಷಿ ಪದ್ಧತಿ; ಸಹಜ ಕೃಷಿ ಪದ್ಧತಿ. ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ನೆಲಕ್ಕೆ ವಿಷ ಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು ಹಾಗೂ ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ

ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಹೊಸ ಹೊಸ ಆವಿಷ್ಕಾರಗಳು ಈ ಜೈವಿಕ ಕೃಷಿ ಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕು ತಪ್ಪಿರುವ ಕೃಷಿ ಬದುಕಿಗೆ ಒಂದು ನಿರ್ದಿಷ್ಟವೂ ಅತಿರೇಕಗಳ ಅವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನ ವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗ ಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ, ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿ ಕೊಳ್ಳುವ ಜೀವನಮಾರ್ಗ. ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿಕೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿವೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜ್ಞೆಗಳಿಗೆ ಒದಗಿಸುವ ಉದ್ದೇಶದಿಂದ ಈ ದೇಸಿಕೃಷಿ ಜ್ಞಾನ ಮಾಲಿಕೆಯನ್ನು ಪ್ರಾರಂಭಿಸಲಾಗಿದೆ.

ಈ ಮಾಲಿಕೆಯನ್ನು ಪುಸ್ತಕ ಪ್ರಾಧಿಕಾರ ಕೈಗೆತ್ತಿಕೊಂಡಾಗ ಹಲವು ರೀತಿಯ ಅಪಸ್ವರಗಳು ಕೇಳಿಬಂದವು. ಕೃಷಿಗೂ ಪುಸ್ತಕ ಪ್ರಾಧಿಕಾರಕ್ಕೂ ಎಲ್ಲಿಂದೆಲ್ಲಿಗೆ ಸಂಬಂಧ? ಎಂದು ಪ್ರಶ್ನಿಸಿದವರೂ ಇದ್ದಾರೆ. ಪುಸ್ತಕ ಹಾಗೂ ಪುಸ್ತಕ ಸಂಸ್ಕೃತಿ ಎಂದರೆ ಕೇವಲ ಸಾಹಿತ್ಯ, ಸಂಶೋಧನೆ ವಿಜ್ಞಾನ, ವಿಚಾರ ಇತ್ಯಾದಿ ಅಕ್ಷರ ಜಗತ್ತಿನ ವ್ಯವಹಾರಕ್ಕೆ ಮಾತ್ರ ಸಂಬಂಧಿಸಿದ್ದು ಎಂದು ನಂಬಿದವರಿಗೆ ಹಾಗನ್ನಿಸುವುದು ಸಹಜ. ನಮ್ಮ ಸಮಾಜದಲ್ಲಿ ಶ್ರಮಿಕ ಮೂಲಕ ಕಾಯಕ ಜೀವಿಗಳನ್ನು ಪುಸ್ತಕ ಸಂಸ್ಕೃತಿಯಿಂದ ದೂರವಿಟ್ಟು ಮಾತನಾಡುವ ಇಂಥ ಜಾಡ್ಯ ಇನ್ನೂ ಮುಂದುವರೆದಿದೆ. ಪುಸ್ತಕ ಚಿಂತನೆ ಇವರಿಗೆ ತಿಳಿಯಲಾರದ್ದು ಎನ್ನುವ ಮೇಲರಿಮೆಯ ಭಾವ ಅಕ್ಷರ ಜಗತ್ತಿನ ಜನರದ್ದಾದರೆ ಅದು ಸಮಾಜದ ಸ್ವಾಸ್ಥ್ಯ ಕೆಟ್ಟದ್ದರ ಸೂಚನೆ. ಸಂಸ್ಕೃತಿಯನ್ನು ವಿಸ್ತರಿಸುವ ಹೊಣೆಗಾರಿಕೆಯನ್ನು ಹೊತ್ತ ಅಕಾಡೆಮಿಗಳು, ಪ್ರಾಧಿಕಾರಗಳು, ಪ್ರಸಾರಾಂಗಗಳು ನಿರ್ದಿಷ್ಟ ವರ್ಗಗಳಿಗೆ ಸೀಮಿತಗೊಳಿಸಿಕೊಂಡ ಕಾರ್ಯಕ್ರಮಗಳಲ್ಲಿ ಪರ್ಯವಸಾನ ವಾಗುವ ಪರಿಪಾಠ ತಪ್ಪಬೇಕು. ಇವುಗಳು ನಮಗೆ ಏನು ಕೊಟ್ಟಿವೆ ಎಂದು ಪ್ರಶ್ನಿಸುವ ಶ್ರಮಿಕ ಸಮುದಾಯಗಳಿಗೆ ಉತ್ತರಿಸುವ ನೈತಿಕ ಹೊಣೆಗೆ ಇವುಗಳ ಭಾಜನವಾಗಬೇಕು. ಶ್ರಮಿಕ ಬಹುಸಮುದಾಯಗಳು ಈ ಎಲ್ಲ ಸಂಸ್ಥೆಗಳ

ನೇರ ಫಲಾನುಭವಿಗಳಾಗಬೇಕು. ಜನರ ಬೆವರಿನ ಸಂಪತ್ತು ಸಾಮಾಜಿಕ ನ್ಯಾಯದ ನೈತಿಕ ಎಚ್ಚರದಲ್ಲಿ ವಿನಿಯೋಗವಾಗಬೇಕು. ಪುಸ್ತಕ ಪ್ರಾಧಿಕಾರ ಇದನ್ನು ಕರ್ತವ್ಯವೆಂಬ ಭಾವದಲ್ಲಿ ಸ್ವೀಕರಿಸಿ ಕಾರ್ಯಮುಖಿಯಾಗಿದೆ. ಈ ಕಾರ್ಯಯೋಜನೆಗೆ ಕೈಜೋಡಿಸಿದ ಮನಸ್ಸುಗಳು ನೂರಾರು. ಅವುಗಳನ್ನು ಇಲ್ಲಿ ನೆನೆಯುವುದು ಕರ್ತವ್ಯದ ಒಂದು ಭಾಗವೆಂದು ಭಾವಿಸಿದ್ದೇನೆ.

ದೇಸಿ ಕೃಷಿ ಜ್ಞಾನವನ್ನು ದಾಖಲಿಸುವ ಆಶಯಕ್ಕೆ ಪ್ರಾಧಿಕಾರದ ಎಲ್ಲ ಸದಸ್ಯ ಬಂಧುಗಳು ಒಕ್ಕೊರಲಿನ ಸಹಮತ ನೀಡಿದ್ದು ಈ ಯೋಜನೆ ಕಾರ್ಯರೂಪಕ್ಕಿಳಿಯಲು ಕಾರಣವಾದ ಮೊದಲ ಹಂತ. ಅದಾದ ಮೇಲೆ ತೇಜಸ್ವಿಯವರು ನೀಡಿದ ಮಾರ್ಗದರ್ಶನ ಮರೆಯಲಾರದ್ದು. ಅವರನ್ನು ಈ ಕಾರ್ಯದಲ್ಲಿ ನೇರವಾಗಿ ಭಾಗವಹಿಸಲು ಮನವಿಮಾಡಿಕೊಂಡಾಗ ತಮ್ಮ ಸಹಜ ಒರಟು ಭಾಷೆಯಲ್ಲಿ ಬೈದು ನಿರಾಕರಿಸಿದ ಅವರ ಪ್ರೀತಿ ಅದು ತೋರಿದ ದಾರಿ ಶ್ರೀ ಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ ಮೊದಲಾದ ಸಾಧಕರ ಪರಿಚಯ ಮಾಡಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಜಿ.ಕೃಷ್ಣಪ್ರಸಾದರ ಆಸ್ಥೆ, ನೇತೃತ್ವ ಈ ಯೋಜನೆಯ ಸ್ವರೂಪಕ್ಕೆ ಚಾಲನೆ ನೀಡಿತು. ಗಾಣಧಾಳು, ಪ್ಯಾಟಿ, ಗೆಳೆಯರು ಈ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡು ಶಿಬಿರಗಳ ಹೊಣೆಹೊತ್ತು ಸಂಪರ್ಕ ಸೇತುಗಳಾಗಿ ಎಲ್ಲರನ್ನೂ ಕೂಡಿಸುವಲ್ಲಿ ನೆರವಾದರು. ಮೊದಲು ಶಿಬಿರವನ್ನು ಹಮ್ಮಿಕೊಳ್ಳಲು ಆಶ್ರಯ ಹಾಗೂ ನೈತಿಕ ಬೆಂಬಲವನ್ನು ನೀಡಿದವರು ಆತ್ಮೀಯ ಗುರುಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು. ಶಿಬಿರದಲ್ಲಿ ಚರ್ಚೆಯನ್ನು ಮಾಹಿತಿ ವಿಧಾನವನ್ನು ರೂಪುರೇಷೆ ಮಾಡಿದವರು ಶ್ರೀ ನಾಗೇಶ ಹೆಗಡೆ ಅವರು. ಇವರೆಲ್ಲರ ಜೊತೆಗೆ ಅನುಭವದ ಜ್ಞಾನ ಸಮೃದ್ಧಿಯನ್ನು ಧಾರೆ ಎರೆದು ಬೆಳೆಸಿದವರು ಶ್ರೀ ಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ, ಕಳವೆ ಹಾಗೂ ನಾಡಿನ ರೈತಬಂಧುಗಳು. ಎರಡನೆಯ ಶಿಬಿರವನ್ನು ಹಮ್ಮಿಕೊಳ್ಳಲು ಸ್ಥಳ ನೀಡಿದವರು ಸೂರಶೆಟ್ಟಿ ಕೊಪ್ಪದ ಬೈಫ್ ಬಳಗ. ಆ ಶಿಬಿರದಲ್ಲಿ ಭಾಗವಹಿಸಿದ ಆ ಸುತ್ತಲಿನ ರೈತಬಂಧುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗದ ರೈತಬಂಧುಗಳು ನೀಡಿದ ಮಾಹಿತಿಯನ್ನು ದಾಖಲಿಸುವಲ್ಲಿ ಶ್ರಮಿಸಿದವರು ಶ್ರೀಮತಿ ರೇಖಾ. ತಮ್ಮ ಜಾನಪದೀಯ ಅಧ್ಯಯನ ದೃಷ್ಟಿ ಸೂಕ್ಷ್ಮತೆಗಳಿಂದ ಚರ್ಚೆಗೆ ಹೊಸ ಆಯಾಮ ನೀಡುತ್ತಿದ್ದ ಗೆಳೆಯರು ಕೆ.ವೈ. ನಾರಾಯಣಸ್ವಾಮಿ, ಕೆ.ಪುಟ್ಟಸ್ವಾಮಿ, ಎಂ.ಎಸ್. ಮೂರ್ತಿ, ಬಿ. ಎಸ್. ಸೋಮಶೇಖರ್, ಡಾ. ರಘುಪತಿ, ಡಾ. ನಾರಾಯಣಸ್ವಾಮಿ, ಡಾ.ಮುರಳಿ, ಪೂರ್ಣಪ್ರಜ್ಞ, ದೇರ್ಲ, ಜಿ.ಎನ್. ಮೋಹನ್, ಬಸವರಾಜ ಸಂತೇಶಿವರ, ಶಿವನಹಳ್ಳಿ ರಮೇಶ್, ಪ್ರೊ. ಶಿವರಾಮಯ್ಯ, ಡಾ. ರಾಮಕೃಷ್ಣಯ್ಯ ಮೊದಲಾದ ಗೆಳೆಯರು. ಶಿಬಿರಗಳ ಮಾಹಿತಿಯನ್ನು, ಸಭೆಗಳ ನಡಾವಳಿಯನ್ನು ದಾಖಲಿಸಿ ಡಿ.ಟಿ.ಪಿ. ಮಾಡಿ ಒದಗಿಸುತ್ತಿದ್ದವರು ಶ್ರೀಮತಿ ಸತ್ಯವಾಣಿ,

ವಿಜಯ, ಮಂಜು, ಶಂಕರ, ರಾಮಯ್ಯ ಮೊದಲಾದವರು. ಶಿಬಿರದ ಆಯೋಜನೆಯಿಂದ ಹಿಡಿದು ಸಂಪೂರ್ಣ ನಿರ್ವಹಣೆಯವರೆಗೆ ಬದ್ಧತೆಯಿಂದ ದುಡಿದವರು ಆಡಳಿತಾಧಿಕಾರಿಗಳಾದ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಅಶೋಕ ಎನ್. ಚಲವಾದಿ ಅವರು. ಲಕ್ಷ್ಮಿ ಮುದ್ರಣಾಲಯ ಮತ್ತು ಇಳಾ ಮುದ್ರಣದ ಶ್ರಮಿಕ ಮಿತ್ರರ ಕಾರ್ಯಶೀಲತೆ. ಇವೆಲ್ಲದರ ಜೊತೆಗೆ ಈ ಯೋಜನೆ ಕಾರ್ಯಗತವಾಗಲು ಅವಕಾಶ ಕಲ್ಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರು, ಮನು ಬಳಿಗಾರ್, ಕಾ.ತ. ಚಿಕ್ಕಣ್ಣ, ಜೆ.ಎನ್. ಶಾಮರಾವ್, ಎಸ್.ಐ.ಭಾವಿಕಟ್ಟಿ, ಮುಂತಾದವರು. ಹೀಗೆ ಈ ಕೃತಿಗಳ ರೂಪಣದ ಹಿಂದೆ ನೂರಾರು ಮನಸ್ಸುಗಳ ಸಂಕಲ್ಪ ಶಕ್ತಿ ಕೆಲಸ ಮಾಡಿದೆ. ಇವರೆಲ್ಲರಿಗೆ ಆತ್ಮೀಯ ಕೃತಜ್ಞತೆಗಳು.

ಫೆಬ್ರವರಿ ೨೦೦೮
ಬೆಂಗಳೂರು

ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಅಧ್ಯಕ್ಷರು

ಲೇಖಕರ ಮಾತು

ಜನಪದರಿನಿಂದ ಕಣ್ಮರೆಯಾಗುತ್ತಿರುವ ದೇಸಿ ಪಶುಸಂಗೋಪನಾ ವಿಧಾನಗಳನ್ನು ದಾಖಲಿಸುವ ಮತ್ತು ದೇಸಿ ಜಾನುವಾರು ತಳಿಗಳ ವಿವರಗಳನ್ನು ಒಂದೆಡೆ ಹಿಡಿದಿಡುವ ವಿಶಿಷ್ಟ ಪ್ರಯತ್ನವಿದು.

ಕನ್ನಡ ಭಾಷಾ ಮಾಧ್ಯಮದಲ್ಲಿ ಇಂತಹ ಪ್ರಯತ್ನಗಳು ನಡೆದಿದ್ದರೂ ಅವು ಜಟಿಲತೆಗೆ ಹತ್ತಿರವಾಗಿ ಸರಳತೆಗೆ ದೂರವಾಗಿವೆ ಎನ್ನಬಹುದಾಗಿದೆ.

ದನಗಳ ತಳಿಗಳನ್ನು ವಿವರಿಸಿಕೊಳ್ಳುವಾಗ ಕೆಲವು ತಳಿಗಳಿಗೆ ವಿಭಿನ್ನ ಗುಣಗಳಿದ್ದರೂ ಕೆಲವು ಗುಣಗಳ ಹೋಲಿಕೆಯಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸಗಳಿರುವುದಿಲ್ಲ. ಈ ಕಾರಣಗಳಿಂದಾಗಿ ತಳಿಗಳ ವಿವರಣೆಯಲ್ಲಿ ಏಕತಾನತೆ ತಂತಾನೆ ಬಂದು ಬಿಡುತ್ತದೆ. ಕನ್ನಡದ ಸಾಮಾನ್ಯ ಓದುಗರಿಗೆ ಜಾನುವಾರು ತಳಿಗಳ ಪರಿಚಯ ಮಾಡಿಕೊಡುವಲ್ಲಿ ಇದೊಂದು ಸಾರ್ಥಕ ಪ್ರಯತ್ನವೆಂದು ಭಾವಿಸಲಾಗಿದೆ. ಹಾಗೆಯೇ, ದೇಸಿ ಪಶು ಸಂಗೋಪನಾ ವಿಧಾನಗಳು ಮತ್ತು ದೇಸಿ ಪಶುವೈದ್ಯ ಚಿಕಿತ್ಸಾ ಕ್ರಮಗಳನ್ನು ದಾಖಲಿಸುವ ಪ್ರಯತ್ನವೂ ಕೂಡ ಇಲ್ಲಿ ಜತೆಜತೆಗೆ ನಡೆದಿದೆ. ಆಧುನಿಕ ಚಿಕಿತ್ಸಾ ಕ್ರಮವಾದ ಅಲೋಪತಿ ವಿಜ್ಞಾನದಲ್ಲಿ ಎಲ್ಲಾ ಚಿಕಿತ್ಸಾ ಕ್ರಮಗಳು ನಾವು ತಿಳಿದಿರುವ ಮಟ್ಟಿಗೆ ಪೂರ್ಣ ಸತ್ಯಗಳಾದರೆ, ದೇಸಿ ಪಶುಚಿಕಿತ್ಸಾ ಕ್ರಮಗಳಲ್ಲಿ ಒಂದಷ್ಟು ಕ್ರಮಗಳು ಸತ್ಯವನ್ನು, ಒಂದಷ್ಟು ಕ್ರಮಗಳು ಅರ್ಧ ಸತ್ಯವನ್ನು ಒಳಗೊಂಡಿದ್ದರೆ, ಒಂದಷ್ಟು ಕ್ರಮಗಳು ಮೌಲ್ಯಮಾಪನವನ್ನು ಬೇಡುವಂತವುಗಳಾಗಿರುತ್ತವೆ.

ದೇಸಿ ಪಶು ಚಿಕಿತ್ಸಾ ವಿಧಾನಗಳನ್ನು ಸಂಶೋಧನೆಗೆ ಒಳಪಡಿಸಿ ಅವುಗಳ ಉಪಯುಕ್ತತೆಯನ್ನು ಮನಗಾಣಬೇಕೆಂಬುವುದು ಸರ್ಕಾರದ ಒತ್ತಾಸೆಯೂ ಆಗಿರುತ್ತದೆ. ಈ ನಿಟ್ಟಿನಲ್ಲಿ, ಭೌಗೋಳಿಕವಾಗಿ ಪಶು ಸಾಕಣೆಯ ರೈತರು ಅನುಸರಿಸುತ್ತಿರುವ ನಾಟಿ ಚಿಕಿತ್ಸಾ ಪದ್ಧತಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದರೂ ಕೆಲವನ್ನು ಮಾತ್ರ ಇಲ್ಲಿ ಹಿಡಿದಿಡಲಾಗಿದೆ.

ಎಲ್ಲೋ ಮಸುಕಾಗಿಬಿಡಬಹುದಾಗಿದ್ದ ರೈತರ ಅನುಭವಗಳನ್ನು ಹಿಡಿದಿಡುವ ಪ್ರಯತ್ನವಾಗಿ ಎರಡು ಸಂದರ್ಶನಗಳು ಮೂಡಿ ಬಂದಿವೆ. ಸಂದರ್ಶನದ ಪ್ರತಿ ಎಳೆಯೂ ಓದುಗರಲ್ಲಿ, ಮುಖ್ಯವಾಗಿ ರೈತರಲ್ಲಿ ಹೊಸ ಹುರುಪನ್ನು ಚಿಗುರಿಸುತ್ತದೆ ಎಂಬ ಭರವಸೆ ನನ್ನದು.

ಒಂದಷ್ಟು ಸಮಯವನ್ನು ಮೀಸಲಿಟ್ಟು ಈ ಕೃತಿ ರಚನೆಯಲ್ಲಿ ತೊಡಗಿಸಿಕೊಳ್ಳಲು ನನಗೆ ಅನುಮತಿ ನೀಡಿದ ಕರ್ನಾಟಕ ಪಶು ವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಆರ್.ಎನ್. ಶ್ರೀನಿವಾಸಗೌಡ ಮತ್ತಿತರೆ ಅಧಿಕಾರಿಗಳಿಗೆ ನನ್ನ ನಮನಗಳು.

ದೇಸಿ ಜಾನುವಾರುಗಳ ಈ ಕೃತಿಗೆ ಹೂರಣವನ್ನು ತುಂಬಲು ಒತ್ತಾಸೆಯಾಗಿ ನಿಂತ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಪತ್ರಕರ್ತರಾದ ನಾಗೇಶ್ ಹೆಗಡೆ, ಕವಿ ಮಿತ್ರರಾದ ಕೋಟಿಗಾನಹಳ್ಳಿ ರಾಮಯ್ಯ, ಪಶುವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಪ್ರೊ. ಎಂ. ಜಿ. ಗೋವಿಂದಯ್ಯ, ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನ ಮಾಜಿ ಡೀನ್‌ರವರಾದ ಡಾ. ಬಿ.ಎಸ್. ವೆಂಕಟರಾಮಿರೆಡ್ಡಿ, ಹಾಲಿ ಡೀನ್‌ರವರಾಧ ಡಾ. ಎಸ್. ಯತಿರಾಜ್, ಶಿವಮೊಗ್ಗ ಪಶುವೈದ್ಯಕೀಯ ಕಾಲೇಜಿನ ಡೀನ್‌ರವರಾದ ಡಾ. ಎಸ್. ಮಲ್ಲಿಕಾರ್ಜುನಪ್ಪ, ಶರೀರ ಕ್ರಿಯಾ ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಟಿ. ವೀಣಾ, ಆತ್ಮೀಯ ಮಿತ್ರರಾದ ಡಾ. ಕೆ ಜಯಕುಮಾರ್, ಡಾ. ಎಚ್. ಡಿ. ನಾರಾಯಣ ಸ್ವಾಮಿ, ಶ್ರೀಪಡ್ರೆ, ಕೃಷ್ಣಪ್ರಸಾದ್ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ.

ಜಾನುವಾರು ತಳಿಗಳ ಕೆಲವು ಚಿತ್ರಗಳನ್ನು ತಮ್ಮ ಬತ್ತಳಿಕೆಯ ಸಂಗ್ರಹಗಳಿಂದ ಒದಗಿಸಿಕೊಟ್ಟ ಪ್ರೊ. ಎಂ. ಜಿ. ಗೋವಿಂದಯ್ಯ, ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನ ಪ್ರಾಣಿ ತಳಿಶಾಸ್ತ್ರ ವಿಭಾಗದ ಪ್ರೊ. ಜಯಶಂಕರ್, ಡಾ. ಸಿ.ಎಸ್. ನಾಗರಾಜ್, ಡಾ. ಜಯಶ್ರಿ, ಶಿವಮೊಗ್ಗ ಪಶುವೈದ್ಯಕೀಯ ಕಾಲೇಜಿನ ಡಾ. ವಿಜಯಕುಮಾರ್ ಶೆಟ್ಟರ್ ಮತ್ತು ಡಾ. ಪ್ರದೀಪ್ ಹಾಗೂ ನನ್ನ ಶಿಷ್ಯ ವೃಂದಕ್ಕೆ ನಾನು ಅಭಾರಿ.

ಕರಡು ಪ್ರತಿ ತಯಾರಾಗುವಾಗ ಉಕ್ತಲೇಖನ ತೆಗೆದುಕೊಂಡು, ಬೆರಳಚ್ಚು ಮಾಡಿ, ಬರೆದಿದ್ದನ್ನು ತಿದ್ದಿ ತೀಡಲು ಅನುವು ಮಾಡಿಕೊಡುತ್ತಿದ್ದ ನನ್ನ ಶ್ರೀಮತಿಯವರಿಗೆ ನನ್ನ ವಂದನೆಗಳು.

ಡಾ. ಎಂ. ನಾರಾಯಣಸ್ವಾಮಿ

ಪರಿವಿಡಿ

ಅಧ್ಯಾಯ – 1

ತಲೆಮಾರಿನ ಜಾನುವಾರುಗಳು

ತಲೆಮಾರಿನಿಂದ ತಲೆಮಾರಿಗೆ ಹರಿದುಬಂದ ದೇಸಿ ಜ್ಞಾನ ಇಂದು ಅಳಿವಿನ ಅಂಚಿನಲ್ಲಿದೆ. ಕುಟುಂಬಗಳು ವಿಭಕ್ತವಾದಂತೆಲ್ಲಾ ಭೂಮಿ ಹಂಚಿಕೆಯಾಗಿ ದುಡಿವ ಕೈಗಳು ಕಮ್ಮಿಯಾಗಿ ದೇಸಿ ಜಾನುವಾರುಗಳ ಸಂಖ್ಯೆಯೂ ಅಗಾಧವಾಗಿ ಕ್ಷೀಣಿಸತೊಡಗಿದೆ. ರೈತನ ಮಗ ಇಂದು ರೈತನಾಗುತ್ತಿಲ್ಲ. ಅಪ್ಪ, ತಾತ, ಮುತ್ತಾತನ ದೇಸಿ ಜ್ಞಾನ ಕಣ್ಮರೆಯಾಗುತ್ತಿದೆ. ಇದರಿಂದಾಗಿ ದೇಸಿ ಜ್ಞಾನ ದಾಖಲಾಗಬೇಕಿದೆ.

ದೇಸಿ ಜ್ಞಾನದಲ್ಲಿ ವಿಜ್ಞಾನವೂ ಇದೆ. ಅದರಲ್ಲಿ ಉಪಯೋಗವಂತೂ ಇದ್ದೇ ಇದೆ. ಆದರೆ, ದೇಸಿ ಜ್ಞಾನದಲ್ಲಿನ ಜೊಳ್ಳಿನ ಅಂಶಗಳು ದಾಖಲೆಯಿಂದ ಹೊರಗುಳಿಯಬೇಕು. ಹಾಗಂತ, ಇಂತಹುದೇ ಅಂತ ಇರುವ ಒಂದು ಲಕ್ಷ್ಮಣ ರೇಖೆಯನ್ನು ಹಾಕಿಕೊಳ್ಳಲಾಗುವುದಿಲ್ಲ. ಇಂದು ದೇಸಿ ಜ್ಞಾನವೇ ಆಧುನಿಕ ಜ್ಞಾನವಾಗಿದೆ. ಆಧುನಿಕ ಜ್ಞಾನದ ತಡಕಾಟದಲ್ಲಿ ವಿಶ್ವವಿದ್ಯಾಲಯಗಳು ತೊಡಗಿ ಕೊಂಡಿವೆ. ಆಗೊಮ್ಮೆ ಈಗೊಮ್ಮೆ ವಿಶ್ವವಿದ್ಯಾಲಯಗಳ ತಜ್ಞರು ಮತ್ತೆ ರೈತರತ್ತ ತಿರುಗಿ ದೇಸಿ ಜ್ಞಾನವನ್ನು ದಾಖಲಿಸಿ, ಸಂಶೋಧಿಸುವ ಪ್ರಯತ್ನಗಳಲ್ಲೂ ತೊಡಗಿದ್ದಾರೆ. ಸರಕಾರಗಳೂ ಕೂಡ ಇಂತಹ ಪ್ರಯತ್ನಗಳಿಗೆ ಒತ್ತು ನೀಡುತ್ತಿವೆ.


ಹೊಲ, ತೋಟ, ಗದ್ದೆಯ ಕೆಲಸಗಳಿಗಾಗಿ ರೈತರು ಜಾನುವಾರುಗಳನ್ನು ಬಳಸುತ್ತಾರೆ. ಗ್ರಾಮೀಣ ಪ್ರದೇಶದ ಕೃಷಿ ಸಂಬಂಧೀ ಕೆಲಸವಾದ ಕೃಷಿ ಉತ್ಪನ್ನಗಳ ಸಾರಿಗೆ ವ್ಯವಸ್ಥೆಯು ಸಹ ಜಾನುವಾರುಗಳ ಶಕ್ತಿ ಮೂಲದಿಂದಲೇ ನಡೆಯುತ್ತದೆ.

ತಿಪ್ಪೆಗುಂಡಿಯಿಂದ ಕೃಷಿ ಭೂಮಿಗೆ ಗೊಬ್ಬರ ಸಾಗಾಣಿಕೆಗೆ, ಕೊಯಿಲಿನ ನಂತರ ಫಸಲನ್ನು ಕಣಕ್ಕೆ, ಅಲ್ಲಿಂದ ಮನೆಗೆ ಸಾಗಿಸಲು ಜಾನುವಾರುಗಳು ಉಪಯೋಗ ವಾಗುತ್ತಿವೆ. ಇದು ಶೂನ್ಯ ಬಂಡವಾಳದ ಸಾರಿಗೆ ವ್ಯವಸ್ಥೆ. ಆ ಕಾರಣದಿಂದಾಗಿ, ಇದನ್ನು ಎಂದೆಂದಿಗೂ ಲಾಭದಾಯಕ ಸುಸ್ಥಿರ ಸಾರಿಗೆ ವ್ಯವಸ್ಥೆ ಎನ್ನಬಹುದು.

ಮೇ, ಜೂನ್, ಜುಲೈ ತಿಂಗಳುಗಳು ಮಳೆಗಾಲದ ತಿಂಗಳುಗಳು. ಇವು ಉಳುಮೆಯ ತಿಂಗಳುಗಳೂ ಹೌದು. ಆಗಿನ್ನೂ ಬೇಸಿಗೆಯ ಬಿಸಿಲು ಮಾಸಿರುವುದಿಲ್ಲ.

ಹೊತ್ತೇರುವ ಹೊತ್ತಿಗೆ ಒಂದಷ್ಟು ಭೂಮಿಯನ್ನು ಉತ್ತು ಹಸನು ಮಾಡಿಕೊಳ್ಳುವ ಲೆಕ್ಕಾಚಾರದಲ್ಲಿರುವ ರೈತ ಮುಂಜಾವಿನ ಮಸುಕು ಕತ್ತಲೆಗೆ ಜೋಡಿ ಎತ್ತು ನೇಗಿಲು ನೊಗದೊಂದಿಗೆ ತನ್ನ ಭೂಮಿಯ ಕಡೆಗೆ ಹೆಜ್ಜೆಹಾಕುತ್ತಾನೆ. ಬೆಳಿಗ್ಗೆ ಆರು ಗಂಟೆಯಿಂದ ಮಧ್ಯಾಹ್ನದ ಬಿಸಿಲು ಝಳಪಿಸುವ ಹನ್ನೆರಡರವರೆಗೆ ಉತ್ತು ಹನ್ನೆರಡರಿಂದ ಮೂರರವರೆಗೆ ಮರದ ನೆರಳಲ್ಲಿ ಕಟ್ಟಿ ಮೇವು ಹಾಕಿ ಮತ್ತೆ ಸಂಜೆ ಮೂರರಿಂದ ಆರು ಘಂಟೆಯವರೆಗೆ ಉತ್ತು, ಹೀಗೆ ಒಟ್ಟು ದಿನಕ್ಕೆ ಸುಮಾರು ಎಂಟು ಘಂಟೆಗಳ ಕಾಲ ಮರದ ನೇಗಿಲು ಬಳಸಿದಲ್ಲಿ ಕಾಲು ಎಕರೆ ಭೂಮಿಯನ್ನು ಉತ್ತುಕೊಳ್ಳುತ್ತಾನೆ. ಬಿತ್ತುವ ಕೆಲಸವಾದರೆ ಇದೇ ಅವಧಿಯಲ್ಲಿ ನಾಲ್ಕು ಎಕರೆ ಭೂಮಿಯನ್ನು ಬಿತ್ತಿ ಕೊಳ್ಳಬಹುದು. ಕಬ್ಬಿಣದ ನೇಗಿಲು ಬಳಸಿದರೆ ಅರ್ಧ ಎಕರೆ ಉಳುಮೆ ಮಾಡಬಹುದು. ಎಂಟು ಎಕರೆ ಬಿತ್ತನೆ ಮಾಡಬಹುದು.

ನಮ್ಮ ನಾಡಿನ ಶ್ರಮದಾಯಕ ತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಕಿಲಾರ್, ಕೃಷ್ಣಾ ತೀರ, ದೇವಣಿ ಮತ್ತು ಮಲೆನಾಡು ಗಿಡ್ಡಾದಂತಹ ತಳಿಗಳು ಈ ಕೆಲಸಗಳಿಗೆ ಯೋಗ್ಯ ತಳಿಗಳು.



ಗ್ರಾಮೀಣ ಸಾರಿಗೆಯ ಜೀವಾಳ-ದೇಸಿ ದನಗಳು

ಸಾರಿಗೆಯ ಕೆಲಸದಲ್ಲಿ ಅತ್ಯಂತ ಚುರುಕಿನ ಹಳ್ಳಿಕಾರ್, ಅಮೃತ್ ಮಹಲ್ ತಳಿಗಳು ದಿನವೊಂದಕ್ಕೆ 25 ರಿಂದ 30 ಮೈಲಿಗಳಷ್ಟು ದೂರ ಸರಕು ಸಾಗಣೆ ಮಾಡುತ್ತವೆ.

ಪಶುಪಾಲನೆ, ಪಶು ಸಂವರ್ಧನೆ, ಬೇಸಾಯದಲ್ಲಿ ಅವುಗಳ ಬಳಕೆಯ ಜ್ಞಾನ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿದೆ. ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ಜೋಡಿ ಎತ್ತುಗಳನ್ನು ಕಟ್ಟಿಕೊಳ್ಳಲು ಆರ್ಥಿಕವಾಗಿ ಸಬಲರಲ್ಲದಿದ್ದರೆ ಹಳ್ಳಿಕಾರ್, ಅಮೃತ್ ಮಹಲ್ ತಳಿಯ ಹಸುಗಳನ್ನೇ ಉಳುಮೆಗೆ, ಸಾರಿಗೆಗೆ

ಮತ್ತಿತರ ಕೃಷಿ ಚಟುವಟಿಕೆಗಳಿಗೆ ಬಳಸುತ್ತಾರೆ. ಇಂತಹ ಹೆಣ್ಣು ಜಾನುವಾರುಗಳೂ ಕೂಡ ಗಂಡು ಜಾನುವಾರುಗಳಷ್ಟೇ ಛಲದಿಂದ ಕೆಲಸ ಕಾರ್ಯ ನಿರ್ವಹಿಸುತ್ತವೆ.

ಜಾಗತಿಕ ಮಟ್ಟದಲ್ಲಿ ಭಾರತೀಯ ಜಾನುವಾರು ತಳಿಗಳು ರೋಗ ನಿರೋಧಕ ಶಕ್ತಿ ಮತ್ತು ಬರ ನಿರೋಧಕ ಗುಣಕ್ಕೆ ಹೆಸರುವಾಸಿಯಾಗಿವೆ. ಭಾರತೀಯ ದನದ ತಳಿಗಳಲ್ಲಿ ಚರ್ಮದ ಪ್ರತಿ ಚದರ ಸೆಂಟಿ ಮೀಟರ್ ಭಾಗದಲ್ಲಿ 1600 ಸಂಖ್ಯೆಯ ಸೆಕೆಯ ಗ್ರಂಥಿಗಳಿರುತ್ತವೆ. ಅದೇ ವಿದೇಶಿ ತಳಿಗಳಾದರೆ ಸೆಕೆ ಗ್ರಂಥಿಗಳ ಸಂಖ್ಯೆ ಕೇವಲ 600 ಮಾತ್ರ. ಹೀಗೆ, ಹೆಚ್ಚಿನ ಸೆಕೆ ಗ್ರಂಥಿಗಳಿರುವುದರಿಂದ ದೇಸಿ ದನದ ತಳಿಗಳು ಯಾವುದೇ ತರಹದ ಹವಾಮಾನಕ್ಕೆ ಹೊಂದಿಕೊಳ್ಳಬಲ್ಲವು. ಸುಡು ಬೇಸಿಗೆಯನ್ನು ಸಹಿಸಿಕೊಳ್ಳಬಲ್ಲವು. ಹಾಗೆಯೇ ಚರ್ಮದ ಪದರಿನಲ್ಲಿ ಇರುವ ಲ್ಯಾಂಗರ್‌ಹ್ಯಾನ್ಸ್ ಕೋಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಇಂಟರ್‌ಲ್ಯೂಕಿನ್ಸ್ ಎಂಬ ರಾಸಾಯನಿಕ ತಯಾರಾಗುವುದರಿಂದ ಭಾರತೀಯ ದನದ ತಳಿಗಳು ಕ್ರಿಮಿ, ಕೀಟ ಮತ್ತು ಉಣ್ಣೆಗಳಿಗೆ ಹೆಚ್ಚಿನ ಪ್ರಮಾಣದ ರೋಗ ನಿರೋದಕ ಶಕ್ತಿಯನ್ನು ಹೊಂದಿವೆ. ಈ ಕಾರಣದಿಂದಾಗಿಯೇ, ನಮ್ಮ ದೇಸಿ ತಳಿಗಳನ್ನು ವಿದೇಶಗಳಿಗೆ ಕೊಂಡೊಯ್ದು ಅಲ್ಲಿನ ತಳಿಗಳೊಂದಿಗೆ ಸಂಕರಣಗೊಳಿಸಿಕೊಳ್ಳಲಾಗಿದೆ.

ಶೇ. 75ರಷ್ಟು ಭಾರತೀಯ ತಳಿಗಳ ಗುಣಗಳನ್ನು ಇನ್ನೂ ವಿವರಿಸಲಾಗಿಲ್ಲ. ಇವುಗಳನ್ನು 'ವಿವರಿಸಲಾಗದ ತಳಿ'ಗಳೆಂದೇ ಗುರುತಿಸಲಾಗುತ್ತಿದೆ. ನಮ್ಮ ನಾಡ ಭಾಷೆಯಲ್ಲಿ ಇವನ್ನು ನಾಟಿ ದನ ಅಥವಾ ದೇಸಿ ದನ ಅಥವಾ ಜವಾರಿ ದನಗಳೆಂದು ಕರೆಯಲಾಗುತ್ತಿದೆ.

2003ರಲ್ಲಿ ನಮ್ಮ ರಾಜ್ಯದಲ್ಲಿ 17 ನೇ ಜಾನುವಾರು ಗಣತಿ ನಡೆದಿದೆ. ಅದರಂತೆ, ನಮ್ಮ ರಾಜ್ಯದಲ್ಲಿರುವ ವಿವಿಧ ಜಾನುವಾರು ತಳಿಗಳ ಸಂಖ್ಯೆ ಕೋಷ್ಟಕ – 1 ರಲ್ಲಿದೆ.

ಕೋಷ್ಟಕ 1: **ಕರ್ನಾಟಕದ ಜಾನುವಾರುಗಳ ಅಂಕಿ ಅಂಶಗಳು**

(ಲಕ್ಷಗಳಲ್ಲಿ)

ಜಾನುವಾರು	1997ರ ಗಣತಿಯಂತೆ	2003ರ ಗಣತಿಯಂತೆ	ವ್ಯತ್ಯಾಸ
ದನಗಳು	108	95	–13
ಎಮ್ಮೆಗಳು	152	135	–17
ಕುರಿ	80	72.5	–7.5
ಮೇಕೆ	48.5	44.8	–3.7
ಹಂದಿ	40.5	31.2	–9.3
ನಾಯಿ	21.3	26.8	+5.5

ಭಾರತೀಯ ಜಾನುವಾರು ತಳಿಗಳಲ್ಲಿ ಮೂರನೇ ಒಂದು ಭಾಗದಷ್ಟು ತಳಿಗಳು ಅವಸಾನದ ಅಂಚಿನಲ್ಲಿವೆ ಎಂದು ವಿಶ್ವ ಆಹಾರ ಸಂಸ್ಥೆಯು 1992ರಲ್ಲಿಯೇ ಅಂದಾಜು ಮಾಡಿದೆ.

ವ್ಯವಸಾಯದ ದನಗಳನ್ನು ಕಳೆದು ಕೊಳ್ಳುತ್ತಾ, ವ್ಯವಸಾಯ ಯಾಂತ್ರೀಕೃತ ಗೊಳ್ಳುತ್ತಿದ್ದಂತೆ ಅದು ದುಬಾರಿ ವ್ಯವಸಾಯವಾಗಿ ಪರಿಣಮಿಸಿದೆ. ಉಳುಮೆಗೆ, ಬೀಜಕ್ಕೆ, ಗೊಬ್ಬರಕ್ಕೆ, ರಸಗೊಬ್ಬರಕ್ಕೆ, ಔಷಧಿಗೆ, ಕೂಲಿಗೆ ಎಂದೆಲ್ಲಾ ಖರ್ಚುಮಾಡಿ ರೈತ ಸಾಲಗಾರನಾಗಿದ್ದಾನೆ. ಸಾಲ ತೀರಿಸಲಾಗದೆ ಶೂಲಕ್ಕೆ ಮೊರೆ ಹೋಗುತ್ತಿದ್ದಾನೆ. ವ್ಯವಸಾಯದ ದನಗಳನ್ನು ಉಳುಮೆಗೆ ಬಳಸಿ ಉಳುಮೆಯ ಖರ್ಚನ್ನು ಉಳಿಸಿಕೊಂಡು, ಕೊಟ್ಟಿಗೆ ಗೊಬ್ಬರದಿಂದ ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡಿದ್ದರೆ, ರೈತರು ತಮ್ಮ ಅಮೂಲ್ಯ ಜೀವವನ್ನು ಉಳಿಸಿಕೊಳ್ಳ ಬಹುದಿತ್ತೇನೋ ಎಂಬ ನಿಟ್ಟಿನಲ್ಲಿ ಕೊಂಚ ಗಮನಹರಿಸಬೇಕಿದೆ. ಸುಸ್ಥಿರ ಕೃಷಿ ಇಂದು ಅಸ್ಥಿರ ಕೃಷಿ ಆಗಲು ಕೃಷಿ ಚಟುವಟಿಕೆಗಳಿಂದ ದನಗಳನ್ನು ಪ್ರತ್ಯೇಕಿಸಿದ್ದೂ ಕೂಡ ಒಂದು ಕಾರಣವಾಗಿದೆ.

ಒಂದು ಕಾಲದಲ್ಲಿ ಹಿಂಡು ಹಿಂಡು ದನಗಳು ರೈತರ ಸಿರಿತನದ ಸಂಕೇತವಾಗಿದ್ದವು. ಕೆಲವೊಂದು ಹಳ್ಳಿಗಳಲ್ಲಿ ಊರಿನ ಹಲವು ಸಿರಿವಂತರು ಸ್ಪರ್ಧಾತ್ಮಕವಾಗಿ ದನಗಳ ದೊಡ್ಡ ದೊಡ್ಡ ಹಿಂಡುಗಳನ್ನೇ ಸಂವರ್ಧನೆಗೊಳಿಸಿಕೊಳ್ಳುತ್ತಿದ್ದರು, ಇವರಿಗೆ ತಳಿ ಸಂವರ್ಧನಾ ವಿಜ್ಞಾನದ ಮೌಲ್ಯಯುತವಾದ ಜ್ಞಾನ ಇತ್ತೆಂದು ಹೇಳಬಹುದಾಗಿದೆ. ಜಾನುವಾರುಗಳನ್ನು ಕಟ್ಟಿಹಾಕಿಕೊಳ್ಳಲು ದೊಡ್ಡಿಗಳನ್ನು ತಮ್ಮ ಮನೆಗಳ ಪಕ್ಕ ಮಾಡಿಕೊಳ್ಳುತ್ತಿದ್ದರು. ಈ ಜಾಗಕ್ಕೆ ಹಟ್ಟಿ ಎಂದು ಕರೆಯುವ ಅಭ್ಯಾಸವೂ ಇತ್ತು. ಇಂತಹ ಧನಿಕ ದನಗಾರರನ್ನು ಗುರುತಿಸಲು ಅವರಿಗೆ ಹಟ್ಟೀಕಾರರು ಎಂಬ ಹೆಸರುಗಳು ಪ್ರಚಲಿತದಲ್ಲಿದ್ದವು. ಹಟ್ಟೀಕಾರರ ದನಗಳನ್ನು ಹಟ್ಟಿ ದನಗಳು ಎಂದೂ ಕರೆಯಲಾಗುತ್ತಿತ್ತು. ಕಾಲಕ್ರಮೇಣ ಇದೇ ದನಗಳಿಗೆ ಹಳ್ಳೀಕಾರ್ ಅಥವಾ ಹಳ್ಳಿಕಾರ್ ದನಗಳೆಂದು ಹೆಸರು ಬಂದಿರುವ ಸಾಧ್ಯತೆಗಳು ಇವೆ.

ದನದ ಹಿಂಡುಗಳು ಸಂವರ್ಧನೆಗೊಂಡು ಹಿಂಡಿನ ಗಾತ್ರ ದೊಡ್ಡದಾಗುತ್ತಿದ್ದಂತೆ ಅವುಗಳ ಮೇಯಿಸುವಿಕೆಗಾಗಿ ಮನುಷ್ಯ ಅಲ್ಲಲ್ಲಿ ಬಟಾಬಯಲಿನಲ್ಲಿ ನೆಲೆ ನಿಲ್ಲುತ್ತಾ ಅಲ್ಲಿಯೇ ಮನೆ ಕಟ್ಟಿ, ಕೃಷಿ ಮಾಡಿ, ಮನೆಯೇ ಹಟ್ಟಿಯಾಗಿ, ಹಟ್ಟಿಯೇ ಹಳ್ಳಿಯಾಗಿ, ಊರುಗಳು ರೂಪುಗೊಂಡಿವೆ. ಹೀಗೆ ಮಾನವನ ಬದುಕು ಮತ್ತು ಸಂಸ್ಕೃತಿಯ ವಿಕಸನಕ್ಕೆ ಜಾನುವಾರುಗಳು ಜತೆಗಾರರಾಗಿವೆ.

ಅಧ್ಯಾಯ - 2

ದನದ ತಳಿಗಳು

ವಿಶ್ವ ಆಹಾರ ಸಂಸ್ಥೆ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಂಸ್ಥೆಗಳು ವಿಭಿನ್ನವಾಗಿ ಪ್ರಕಟಿಸಿರುವಂತೆ ಒಟ್ಟಾರೆ ವಿಶ್ವದಲ್ಲಿ ಹಾಗೂ ನಮ್ಮ ದೇಶದಲ್ಲಿ ಕಂಡು ಬರುವ ವಿವಿಧ ನೆಲ ಮೂಲ ಪ್ರಾಣಿ ತಳಿಗಳ ಸಂಖ್ಯೆಯನ್ನು ಕೋಷ್ಟಕ-2ರಲ್ಲಿ ಕೊಡಲಾಗಿದೆ.

ಕೋಷ್ಟಕ 2. ಭಾರತ ದೇಶದ ಜಾನುವಾರು ತಳಿಗಳ ಸಂಖ್ಯೆ

ಪ್ರಾಣಿಗಳು	ಪ್ರಪಂಚದ ಒಟ್ಟು ತಳಿಗಳ ಸಂಖ್ಯೆ	ಭಾರತದಲ್ಲಿರುವ ತಳಿಗಳ ಸಂಖ್ಯೆ (ವಿಶ್ವ ಆಹಾರ ಸಂಸ್ಥೆಯ ವರದಿಯಂತೆ)	ಭಾರತದಲ್ಲಿರುವ ತಳಿಗಳ ಸಂಖ್ಯೆ (ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ, ಇವರ ವರದಿಯಂತೆ)
ದನಗಳು	787	30	30
ಎಮ್ಮೆಗಳು	72	19	15
ಕುರಿ	920	59	42
ಮೇಕೆ	351	29	20
ಹಂದಿ	353	3	3
ಕತ್ತೆ	77	3	3
ಕುದುರೆ	384	9	6
ಕೋಳಿ	606	–	18

ನಮ್ಮ ದೇಶದಲ್ಲಿ ಸುಮಾರು 30 ಬಗೆಯ ದನದ ತಳಿಗಳಿವೆ. 2003ರ ಜಾನುವಾರು ಗಣತಿಯಂತೆ ನಮ್ಮ ರಾಜ್ಯದ ದನಗಳ ಸಂಖ್ಯೆ 95.39 ಲಕ್ಷಗಳು. ರೈತರ ಕೊಟ್ಟಿಗೆಗಳಲ್ಲಿ ಇವು ಅಭಿವೃದ್ಧಿ ಕಾಣುತ್ತಿವೆ. ಜತೆಗೆ ಸರ್ಕಾರದ ಜಾನುವಾರು ತಳಿ ಸಂವರ್ಧನೆ ಮತ್ತು ಅಭಿವೃದ್ಧಿ ಕೇಂದ್ರಗಳಲ್ಲೂ ಇವುಗಳ ಸಂವರ್ಧನೆ, ಪೋಷಣೆ ಮತ್ತು ನಿರ್ವಹಣೆ ನಡೆಯುತ್ತಿದೆ.

ಬಳಕೆಯ ವಿಧಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ದೇಶದ ದನದ ತಳಿಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ಅವೆಂದರೆ:

1. ಹಾಲಿನ ತಳಿಗಳು : ಇವನ್ನು ಮುಖ್ಯವಾಗಿ ಹಾಲಿನ ಉತ್ಪಾದನೆಗೆ ಬಳಸಲಾಗುತ್ತದೆ.
2. ಉಭಯ ಉದ್ದೇಶದ ತಳಿಗಳು: ಇವುಗಳನ್ನು ಹಾಲು ಉತ್ಪಾದನೆಗೆ ಮತ್ತು ಶ್ರಮದ ಕೆಲಸಗಳಿಗೆ ಬಳಸಲಾಗುತ್ತದೆ.
3. ಶ್ರಮಜೀವಿ ತಳಿಗಳು: ಇವನ್ನು ಮುಖ್ಯವಾಗಿ ಶ್ರಮದ ಕೆಲಸ ಅರ್ಥಾತ್ ದುಡಿಮೆಯ ಕೆಲಸಗಳಿಗೆ ಬಳಸಲಾಗುತ್ತದೆ.

ಈ ಮೇಲಿನ ವಿಂಗಡನೆಯ ಗುಂಪಿಗೆ ಸೇರುವ ತಳಿಗಳು ಈ ಮುಂದಿನಂತಿವೆ.

ಹಾಲಿನ ತಳಿಗಳು: ಗಿರ್, ಸಾಹೀವಾಲ್, ಕೆಂಪು ಸಿಂಧಿ ಮತ್ತು ಥರಪಾರ್ಕರ್

ಉಭಯ ಉದ್ದೇಶದ ತಳಿಗಳು: ಹರಿಯಾಣ, ಒಂಗೋಲ್, ಕಾಂಕ್ರೇಜ್, ದೇವಣಿ, ನಿಮಾರಿ, ಡಾಂಗಿ, ಮೇವಾರಿ ಮತ್ತು ರತಿ.

ಶ್ರಮಜೀವಿ ದನದ ತಳಿಗಳು: ಹಳ್ಳೀಕಾರ್, ಅಮೃತ್ ಮಹಲ್, ಖಿಲ್ಲಾರಿ, ಕೃಷ್ಣಾ ತೀರ, ಬರಗೂರ್, ನಾಗೋರಿ, ಬಚೌರ್, ಮಾಳ್ವಿ, ಕೆಂಕಥ, ಖೇರಿಘರ್, ಪೊನ್ವಾರ್, ಸಿರಿ, ಗವಲೋ, ಇತ್ಯಾದಿ.

ದೇಶದ ದನಗಾರರು

ನಮ್ಮ ದೇಶದ ಹಲವಾರು ದನಗಾರರು ಹುಲ್ಲುಗಾವಲುಗಳನ್ನಿಟ್ಟುಕೊಂಡು ದನದ ಹಿಂಡುಗಳನ್ನು ಕಟ್ಟಿದ್ದಾರೆ. ಇವರಲ್ಲಿ ಅತಿ ಮುಖ್ಯ ಜನಾಂಗಗಳೆಂದರೆ, ರಾಜಸ್ಥಾನದ ರೈಕಾ ಮತ್ತು ಗುಜ್ಜಾರರು, ಗುಜರಾತಿನ ಮಾಲ್ಧಾರಿಗಳು, ಹಿಮಾಚಲದ ಗಡ್ಡಿ ಜನಾಂಗ, ಉತ್ತರಾಂಚಲದ ವನ ಗುಜ್ಜಾರರು, ತಮಿಳುನಾಡಿನ ಕೋನಾರರು, ಉತ್ತರಪ್ರದೇಶ ಮತ್ತು ಬಿಹಾರದ ಯಾದವರು ಹಾಗೂ ದಕ್ಷಿಣ ಭಾರತದ ತೋಡರು. ಈ ಎಲ್ಲಾ ಜನಾಂಗಗಳು ಕಾಂಕ್ರೇಜ್, ಗಿರ್, ನರಿ, ಮಲೈಮಡು ಹಾಗೂ ಪುಲಿಕ್ಕುಳಮ್ ದನಗಳನ್ನೂ, ನೀಲಿ ರವಿ ಹಾಗೂ ತೋಡಾ ಎಮ್ಮೆಗಳನ್ನೂ, ಕಛಕಟ್ಟಿ ಎಂಬ ಕಪ್ಪು ಕುರಿಗಳನ್ನೂ ಸಾಕುತ್ತಾ ಬಂದಿದ್ದಾರೆ.

ಈ ಜನಾಂಗಗಳು ಸಾಂಪ್ರದಾಯಕ ಪಶುಪಾಲನೆಯನ್ನು ಸಮತೋಲನದ ಪಶುಪಾಲನೆಯನ್ನಾಗಿಸಿಕೊಂಡಿದ್ದರು. ತಾವು ಸಾಕುತ್ತಿದ್ದ ತಳಿಗಳಲ್ಲಿ ಸಂತಾನೋತ್ಪತ್ತಿಯ ಖದರನ್ನು ಉಳಿಸಿಕೊಂಡು, ಚಳಿ–ಮಳೆ–ಬಿಸಿಲು– ಬಿರುಗಾಳಿಗೆ ಹೊಂದಿಕೊಳ್ಳುವ, ರೋಗ ನಿರೋಧಕ ಶಕ್ತಿಯಿರುವ ದನಗಳ ವಂಶಾಭಿವೃದ್ಧಿಯನ್ನು ಮಾಡಿಕೊಳ್ಳುತ್ತಿದ್ದರು.

ಅರಣ್ಯ ಪ್ರೇಮಿ ದನಗಾರರು

ಕಾಲು ಬಂಧ ಹಾಕುವುದರ ಮೂಲಕ ದನಗಳು ಕತ್ತೆತ್ತಿ ಮೇಯದಂತೆ ಮಾಡಿ ಅರಣ್ಯ ನಾಶವನ್ನು ತಡೆಯಬಹುದು. ಹಿಂಡಿಗೆ ಹಿಂಡೇ ಕಾಲು ಬಂಧ ಹಾಕಿಸಿಕೊಂಡು

ಅರಣ್ಯದಲ್ಲಿ ಮೇಯ್ದ ಉದಾಹರಣೆಗಳಿವೆ. ಕಾಲು ಬಂಧ ಹಾಕುವುದರಿಂದ ಹುಲ್ಲನ್ನಷ್ಟೇ ಮೇಯಲು ಅನುವು ಮಾಡಿಕೊಟ್ಟಂತಾಗಿ, ಬೆಳೆದ ಆಳೆತ್ತರದ ಮರಗಿಡಗಳಿಗೆ ಬಾಯಿ ಹಾಕಿ ಅರಣ್ಯ ನಾಶವಾಗುವುದನ್ನು ತಡೆಯಬಹುದು. ಇಂತಹ ಎಚ್ಚರ ಅರಣ್ಯಕ್ಕೂ ಅನುಕೂಲ – ಹಿಂಡುದಾರರಿಗೂ ಅನುಕೂಲ. ಅರಣ್ಯದಲ್ಲಿ ಬೆಳೆದ ಹುಲ್ಲನ್ನು ದನಗಳು ಮೇಯುವುದರಿಂದ ಆಕಸ್ಮಿಕವಾಗಿ ಬೆಂಕಿ ಬಿದ್ದಾಗ ಬೆಂಕಿ ಹರಡುವ ಸಾಧ್ಯತೆಗಳು ಕಡಿಮೆ. ವಿಷಪೂರಿತ ಮರದ ಎಲೆಗಳನ್ನು ತಿಂದು ಜಾನುವಾರುಗಳ ಜೀವಕ್ಕೆ ಒದಗಬಹುದಾದ ಅಪಾಯವನ್ನು ತಪ್ಪಿಸುವುದೂ ಕೂಡ ಕಾಲು ಬಂಧ ಹಾಕುವುದರ ಹಿಂದಿರುವುದರ ಜಾಣತನವಾಗಿದೆ.

ಅರಣ್ಯ ಪ್ರದೇಶಗಳಲ್ಲಿ ಹುಲ್ಲು ಮೇಯಿಸುತ್ತಿದ್ದ ಈ ಜನಾಂಗಗಳು, ಅರಣ್ಯಕ್ಕೆ ಬೆಂಕಿ ಬಿದ್ದರೆ ಅದು ಹರಡದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ಅಲ್ಲಲ್ಲಿ, ಸಾಲುಸಾಲಾಗಿ ದನಗಳನ್ನು ಬಿಟ್ಟು ಹುಲ್ಲು ಮೇಯಿಸುತ್ತಿದ್ದರು.

ವಿಶ್ವ ಆಹಾರ ಸಂಸ್ಥೆಯ ದೃಷ್ಟಿಕೋನದಲ್ಲಿ ತಳಿ ಸಂರಕ್ಷಣೆ

ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯ ಒಂದು ಅಂದಾಜಿನಂತೆ ದೇಸಿ ತಳಿಗಳು ಮೂರನೇ ಒಂದು ಭಾಗದಷ್ಟು ಅವನತಿಯನ್ನು ಕಂಡಿವೆ.

ಜನಾಂಗಗಳೊಂದಿಗೆ ಬೆಸೆದುಕೊಂಡಿರುವ ದನಸಾಕುವ ಕಾಯಕ ಜನಾಂಗಗಳೊಂದಿಗಿದ್ದರೇ ಚಂದ. ಹಟ್ಟಿಗಳಲ್ಲೇ ದೇಸಿ ತಳಿಗಳ ಅಭಿವೃದ್ಧಿ ಫಲದಾಯಕ. ಅದಕ್ಕಾಗಿ ರಾಜಕೀಯದ ಒತ್ತಾಸೆಗಳು ಅತ್ಯಗತ್ಯ. ಹಟ್ಟಿಗಳಲ್ಲದೆ, ಸರ್ಕಾರದ ದನಾಲಯಗಳಲ್ಲಿ ದೇಸಿ ತಳಿಗಳ ಅಭಿವೃದ್ಧಿ ಒಂದು ಪರಿಪೂರ್ಣ ಪ್ರಮಾಣದ್ದೇನೂ ಅಲ್ಲ. ಅದೊಂದು ಪೂರಕ ಪ್ರಕ್ರಿಯೆ ಮಾತ್ರ ಎನ್ನುತ್ತದೆ, ಅದೇ ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ.

ಹಳ್ಳಿಕಾರ್

ತಳಿಯ ಹೆಸರು : ಹಳ್ಳಿಕಾರ್

ಉಗಮ ಸ್ಥಳ :

ಈ ದನಗಳನ್ನು ಮೂಡಲ ತಳಿ, ಮೂಡ್ಲಿ ತಳಿ ಮತ್ತು ಮೂಡಲ ಜಾತಿ ತಳಿ ಎಂದು ರಾಜ್ಯದ ವಿವಿಧ ಜಿಲ್ಲೆಗಳ ರೈತರು ಗುರುತಿಸುತ್ತಾರೆ. ಕರ್ನಾಟಕದ ಪೂರ್ವ ಭಾಗದ ಜಿಲ್ಲೆಗಳು ಈ ತಳಿಯ ಉಗಮ ಸ್ಥಾನವಾಗಿರಬಹುದಾದ್ದರಿಂದ ಹೀಗೆ ಕರೆಯುತ್ತಿರಬಹುದು. ದಕ್ಷಿಣ ಭಾರತದ ಬಹುತೇಕ ಗೋತಳಿಗಳು ಹಳ್ಳಿಕಾರಿನ ಮೂಲವನ್ನು ಹೊಂದಿವೆ. ಇದು ಕರ್ನಾಟಕದ ಹೆಮ್ಮೆಯ ತಳಿ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು:

ಇದನ್ನೇ ಮೂಲ ತಳಿಯೆಂದು ಪರಿಗಣಿಸಲಾಗಿದೆ. ಮೈಸೂರು, ಮಂಡ್ಯ,

ಚಾಮರಾಜನಗರ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ತಳಿಯ ಜಾನುವಾರುಗಳು ಕಂಡುಬರುತ್ತವೆ. ನಮ್ಮ ರಾಜ್ಯದ ಹಳ್ಳಿಕಾರ ದನಗಳ ಸಂಖ್ಯೆ 21.08 ಲಕ್ಷ.

ಬಳಕೆಯ ವಿಧ:

ಇವು ದುಡಿಮೆಯ ದನ, ಮುತ್ತಿನಂಥ ತಳಿ. ಕರ್ನಾಟಕದ ಮಣ್ಣಿನ ತಳಿ. ವಯಸ್ಸು ಮತ್ತು ಲಿಂಗ ಆಧರಿಸಿ ಕೃಷಿಕರು ಇವನ್ನು ಹಳ್ಳಿಕಾರ್ ಪಡ್ಡೆ, ಹಳ್ಳಿಕಾರ್ ಹೋರಿ, ಹಳ್ಳಿಕಾರ್ ಹಸು, ಹಳ್ಳಿಕಾರ್ ಎತ್ತು ಎಂದು ಗುರುತಿಸಿಕೊಳ್ಳುತ್ತಾರೆ. ಹಳ್ಳಿಕಾರ್ ಹಸು ಕೂಡ ದುಡಿಮೆಯ ದನ. ಹೊಲದ ಕೆಲಸ, ಕಣದ ಕೆಲಸ, ಗಾಡಿಯ ಕೆಲಸ, ಭಾರ ಎಳೆಯುವ ಕೆಲಸಗಳಲ್ಲಿ ಇವುಗಳ ಸಾಧನೆ ಹೆಚ್ಚು, ದುಡಿಮೆಯಲ್ಲಿ ಇದೊಂದು ಛಲದ ತಳಿ. ಸಣ್ಣ ರೈತರ ಕೃಷಿ ಚಟುವಟಿಕೆಗಳಿಗೆ ನೆರವಾಗುತ್ತಿರುವ ಜತೆಗಾರ ತಳಿಗಳಿವು. ಸಣ್ಣ ರೈತರು ಸಾಮಾನ್ಯವಾಗಿ ಒಂದು ಜೊತೆ ಹಳ್ಳಿಕಾರ್ ಎತ್ತುಗಳು ಅಥವಾ ಹಸುಗಳನ್ನಿಟ್ಟುಕೊಂಡರೆ ಮಧ್ಯಮ ಮತ್ತು ದೊಡ್ಡ ರೈತರು ನಾಲ್ಕಾರು ಜೋಡಿ ಎತ್ತುಗಳನ್ನು ಇಟ್ಟುಕೊಳ್ಳತ್ತಾರೆ. ಜತೆಗೆ ಸಣ್ಣ ರೈತರು ಪ್ರತ್ಯೇಕವಾದ ದನದ ಮನೆಗಳನ್ನು ಹೊಂದಿಲ್ಲದಿರುವುದರ ಕಾರಣ, ತಾವು ವಾಸವಿರುವ ಮನೆಯಲ್ಲಿಯೇ ದನದ ಕೊಟ್ಟಿಗೆಗೆ ಸ್ಥಳಾವಕಾಶ ಮಾಡಿಕೊಳ್ಳುವುದರಿಂದ ಚಿಕ್ಕ ವಯಸ್ಸಿನ ಹಾಗೂ ಕಡಿಮೆ ಗಾತ್ರದ ಜೋಡಿ ಎತ್ತುಗಳನ್ನು ಕಟ್ಟಿಕೊಳ್ಳಲು ಆಧ್ಯತೆ ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಮನೆಗಳ ಬಾಗಿಲು ಚಿಕ್ಕದಾಗಿರುವುದರಿಂದ ಅಂತಹ ಬಾಗಿಲಲ್ಲಿ ಒಳಹೊಕ್ಕಬಹುದಾದ ಗಾತ್ರದ ದನಗಳನ್ನು ಆಯ್ಕೆ ಮಾಡಿ ಕೊಂಡುಕೊಳ್ಳುತ್ತಾರೆ.

ಹಳ್ಳಿಕಾರ್ ಹಸುಗಳ ದಿನದ ಹಾಲು ಉತ್ಪಾದನೆ 0.5 ರಿಂದ 3 ಲೀಟರ್ ಗಳವರೆಗಿರುತ್ತದೆ. ಗಂಡು ಕರು ಹುಟ್ಟಿದರೆ ಎಲ್ಲಾ ಹಾಲನ್ನು ಆ ಎಳೆಗರುವೇ ಕುಡಿದು ಭರ್ಜರಿ ಎತ್ತಾಗಲಿ ಎಂದು ಹಾಲನ್ನು ಕರೆದುಕೊಳ್ಳುವುದಿಲ್ಲ. ಹಳ್ಳಿಕಾರ್ ದನಗಳು ದಿನವೊಂದಕ್ಕೆ ಎತ್ತಿನ ಗಾಡಿಗಳಲ್ಲಿ 5 ಟನ್ ತೂಕವನ್ನು 15 ಕಿಲೋ ಮೀಟರ್‌ಗಳವರೆಗೆ ಎಳೆಯುತ್ತವೆ.


ದೇಹ ಲಕ್ಷಣಗಳು:

ಈ ದನಗಳು ಬೂದು ಬಣ್ಣದವುಗಳು. ರೈತರು ಇವುಗಳನ್ನು ರೂಪಾಯಿ ಬಣ್ಣದ ಹಸುಗಳು ಎಂದು ಕರೆಯುತ್ತಾರೆ. ಮೈಮೇಲೆ ಪ್ರತಿ ಒಂದು ಕರಿ ಕೂದಲಿಗೆ ಒಂದು ಬಿಳಿ ಕೂದಲು ಇರುತ್ತದೆ. ಹೀಗಾಗಿಯೇ ಇದನ್ನು ಒಂದು ರೂಪಾಯಿ ನೋಟಿನ ಬಣ್ಣಕ್ಕೆ ಹೋಲಿಸಿ ರೂಪಾಯಿ ಬಣ್ಣದ ದನ ಎಂದು ಕರೆಯಲಾಗಿದೆ. ಹೀಗೆ ಮೈಮೇಲೆ ಕರಿ ಕೂದಲು ಮತ್ತು ಬಿಳಿ ಕೂದಲಿನ ಅನುಪಾತಗಳು ಹೆಚ್ಚು ಕಡಿಮೆಯಾದಂತೆಲ್ಲಾ ಈ ದನಗಳ ಬಣ್ಣ ಬದಲಾಗುತ್ತಾ ಬೂದು ಬಣ್ಣ, ತಿಳಿ-ಬೂದು ಬಣ್ಣ, ರೂಪಾಯಿ ಬಣ್ಣ, ಬಿಳಿ ಬಣ್ಣ, ಕಪ್ಪು ಬಣ್ಣಗಳಲ್ಲಿಯೂ ಕಾಣಸಿಗುತ್ತವೆ.

ಹಳ್ಳಿಕಾರ್ ಗಂಡು ಕರುವಿಗೂ ಬೆಲೆ ಇದೆ. ಹೆಣ್ಣು ಕರುವಿಗೂ ಬೆಲೆ ಇದೆ. ಹೋರಿ ಕರು ಆದರೆ ಹೆಚ್ಚು ಬೆಲೆ. ಗಂಡು ಕರು ಹುಟ್ಟಲಿ ಎಂದು ರೈತರು ಇಷ್ಟಪಡುತ್ತಾರೆ. ಹೋರಿಯಾದರೆ 'ಕೀರುತಿಗೊಬ್ಬ ಮಗನಂತೆ', ಹೆಣ್ಣಾದರೆ 'ಆರತಿಗೊಬ್ಬ ಮಗಳಂತೆ'. ಆದರೆ ವಿದೇಶಿ ಮತ್ತು ಮಿಶ್ರತಳಿಗಳಲ್ಲಿ ಗಂಡು ಕರು ಬೇಡ, ಹೆಣ್ಣು ಕರು ಬೇಕು ಎಂಬ ಹಂಬಲವೇ ಹೆಚ್ಚು.

ಹಳ್ಳಿಕಾರ್‌ನ ಕರುಗಳನ್ನು "ಚಿಗರೆಯಂತಹ ಚೂಟಿಯ ಕರುಗಳು" ಎಂದು ಕರೆಯಲಾಗಿದೆ. ಕಣ್ಣಿನ ಹುಬ್ಬಿನ ಮೇಲೆ ಅಳಿಲಿಗೆ ಬೆನ್ನ ಮೇಲಿರುವಂತೆ ಒಂದು ಬಿಳಿಯ ಪಟ್ಟೆಯಿರುತ್ತದೆ. ಇದನ್ನು ಕಣ್ಣುಸೋಗೆ ಎನ್ನಲಾಗಿದೆ.

ಉದ್ದವಾದ ಮುಖ ಮತ್ತು ಉದ್ದವಾದ ಮೂಗಿರುತ್ತದೆ. ಬೇರೆ ದನಕ್ಕೆ ಬೇಕಾಗುವ ಮೂಗುದಾರದ ಒಂದೂವರೆಯಷ್ಟು ಉದ್ದವಾದ ಮೂಗುದಾರ ಈ ದನಕ್ಕೆ ಬೇಕು. ಕಪ್ಪು ಮುಸುಡಿ, ಈಚೆಗೆ ಹೊರಟು, ಹಿಂದಕ್ಕೆ ಹೋಗಿರುತ್ತದೆ. ಸ್ವಲ್ಪ ಮುಂಬಾಗಿ ಎತ್ತರಕ್ಕೆ ಬೆಳೆದು, ಬಿಲ್ಲಿನ ಆಕಾರ ತಳೆದ ಕೊಂಬು ಸರ್ವೇ ಸಾಮಾನ್ಯ. ಕೊಂಬಿನ ತುದಿ ಚೂಪು. ಕಿರಿದಾದ ಹಣೆ. ಹಣೆಯ ಮೇಲೆ ತಿಲಕದಂತೆ ಒಂದು ಸಣ್ಣ ಹುಬ್ಬು, ಸಣ್ಣ ಕತ್ತು, ಗಂಗೆದೊಗಲು ಚಿಕ್ಕದು, ನಿಚ್ಚಳವಾದ ಎದೆ, ತೆಳ್ಳಗಿನ ಮತ್ತು ಎತ್ತರವಾದ ಕಾಲುಗಳು ಈ ತಳಿಯ ಇತರ ಲಕ್ಷಣಗಳು. ವಯಸ್ಕ ದನಗಳ ದೇಹತೂಕವು 250 ರಿಂದ 400 ಕಿಲೋ ಗ್ರಾಂಗಳಷ್ಟಿರುತ್ತದೆ.



ಹಳ್ಳಿಕಾರ್ ಜೋಡಿ ಎತ್ತುಗಳು

ವಿಶೇಷ ಗುಣಗಳು:

ನೀಳವಾದ ಹೊಟ್ಟೆ, ಮೊಟಕಾದ ಬಾಲ, ಪುಟ್ಟದಾದ ಮತ್ತು ಗಟ್ಟಿಯಾದ ಗೊರಸುಗಳು, ಚಿಕ್ಕದಾದ ಬೀಜದ ಚೀಲ, ಪುಟ್ಟ ಕೆಚ್ಚಲು ಕೂಡ ತಳಿಯ ಇತರೆ ಲಕ್ಷಣಗಳು. ದಿನವೊಂದಕ್ಕೆ ಸರಾಸರಿ ಎರಡು ಸೇರು ಹಾಲು ಕೊಡುತ್ತದೆ. ಹಣೆಯ ಮೇಲೆ ತಲೆ ಬುರುಡೆಯಲ್ಲಿ ನಿಂಬೆಹಣ್ಣಿನ ಗಾತ್ರದ ಉಬ್ಬಿದ ಗಂಟಿರುತ್ತದೆ. ಈ ಉಬ್ಬನ್ನು "ನಿಂಬೂರಿ" ಎಂದು ಕರೆಯಲಾಗಿದೆ.

ವರ್ತನೆಯಲ್ಲಿ ಇದು ಸಾಧುತನದ ತಳಿಯಲ್ಲ. ಎತ್ತುಗಳು ಮತ್ತು ಹೋರಿಗಳು ಹೆಚ್ಚು ರೋಷದ ಪ್ರಾಣಿಗಳು. ಅವುಗಳನ್ನು ಹಿಡಿದು ಕಟ್ಟಿ, ಮೇವುಣಿಸಿ, ನೀರುಣಿಸಿ, ಅಭ್ಯಾಸವಿರುವ, ಪರಿಚಯವಿರುವ ಜನರೊಂದಿಗೆ ಮಾತ್ರ ಸೌಮ್ಯ ಸ್ವಭಾವವನ್ನು ತೋರುತ್ತವೆ. ಅಪರಿಚಿತರನ್ನು ಕಂಡರೆ ಹಾಯುತ್ತವೆ, ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ ಕಡೆಯೇ ರೋಷದಿಂದ ಬುಸುಗುಟ್ಟುತ್ತವೆ. ಹಸುಗಳಿಗೂ ಕೂಡ ಹೆಚ್ಚು ರೋಷ. ಕರುಗಳು ಮಾತ್ರ ಸೌಮ್ಯ ಸ್ವಭಾವದವುಗಳಾಗಿರುತ್ತವೆ.

ಪರ್ಯಾಯ ಹೆಸರುಗಳು: ಹಳ್ಳಿಕಾರ್ ಜಾನುವಾರುಗಳಿಗಿರುವ ಇತರ ಹೆಸರುಗಳೆಂದರೆ ಮೂಡಲ ತಳಿ, ಮೂಡ್ಲಿ ತಳಿ ಮತ್ತು ಮೂಡಲ ಜಾತಿ ತಳಿ.

ಇತರೆ ಚಾರಿತ್ರಿಕ ಮಾಹಿತಿ:

ಹಳ್ಳಿಕಾರ ದನಗಳು ಅತ್ಯಂತ ಪ್ರಾಚೀನ ತಳಿಗಳಲ್ಲೊಂದು. ಆರ್ಯರ ಆಗಮನಕ್ಕಿಂತ ಮೊದಲೇ ದಕ್ಷಿಣ ಭಾರತದಲ್ಲಿದ್ದ ತಳಿಯಿದು. ಈ ದನಗಳನ್ನು ಮೈಸೂರು ದನಗಳ ಗುಂಪು ಅಥವಾ ದ್ರಾವಿಡ ದನಗಳ ಗುಂಪಿಗೆ ಸೇರುವ ದನಗಳೆಂದು ತಿಳಿಯಲಾಗಿದೆ.

ಹಳ್ಳಿಕಾರ್ ತಳಿಯಿಂದ ಅಮೃತ್ ಮಹಲ್ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ವಿಜಯನಗರದ ಅರಸ ಕೃಷ್ಣದೇವರಾಯ (1509– 1529) ಈ ತಳಿಯ ಅಭಿವೃದ್ಧಿಗೆ ಗಮನ ಹರಿಸಿದ ದಾಖಲೆಗಳಿವೆ. ವಿಜಯನಗರದಿಂದ ತಂದ ಹಳ್ಳಿಕಾರ್ ಕರುಗಳನ್ನು ಶ್ರೀರಂಗಪಟ್ಟಣದ ಬಳಿ "ಕರುಹಟ್ಟಿ" ಹೆಸರಿನಲ್ಲಿ ಪೋಷಿಸಿ, ಕಾಲಾನಂತರದಲ್ಲಿ ಅಮೃತ್ ಮಹಲ್ ತಳಿಯನ್ನು ಹಳ್ಳಿಕಾರ್ ತಳಿಯಿಂದ ರೂಪಿಸಲಾಗಿದೆ.

ಹಳ್ಳಿಕಾರ ತಳಿಯ ಉಪಜಾತಿ ತಳಿಯೊಂದು ನಾಗಮಂಗಲದ ಸುತ್ತಮುತ್ತ ಇದೆ. ಇದನ್ನು ಗುಜ್ಜಮಾವು ತಳಿ ಎಂದು ಕರೆಯಲಾಗಿದೆ. ಹಾಗೆಯೇ, ತುಮಕೂರು ಜಿಲ್ಲೆಯಲ್ಲಿರುವ ಕಾರೆಹಳ್ಳಿ ಗಿಡ್ಡಾ ಎಂಬ ತಳಿಯೂ ಹಳ್ಳಿಕಾರ ತಳಿಯ ಉಪಜಾತಿಯೆಂದು ಪರಿಗಣಿಸಲಾಗಿದೆ. ಮಹದೇಶ್ವರ ಬೆಟ್ಟದ ದನವೂ ಕೂಡ ಹಳ್ಳಿಕಾರನ ಉಪಜಾತಿ ತಳಿ.

ವಿದೇಶಿ ತಳಿಗಳಾದ ಹೋಲ್‌ಸ್ಟೈನ್ ಫ್ರೀಸಿಯನ್ ಮತ್ತು ಜರ್ಸಿ ತಳಿಗಳನ್ನು ಮಿಶ್ರತಳೀಕರಣಕ್ಕೆ ಒಳಪಡಿಸಿ ಇಲ್ಲಿನ ಹವಾಗುಣಕ್ಕೆ ಹೊಂದಿಕೊಳ್ಳುವಂತಹ, ಉತ್ತಮ

ರೋಗ ನಿರೋದಕ ಶಕ್ತಿಯ ಹಾಗೂ ಹೆಚ್ಚು ಹಾಲು ಉತ್ಪಾದನೆಯ ಮಿಶ್ರತಳಿಗಳನ್ನು ರೂಪಿಸಲು ಹಳ್ಳಿಕಾರ್ ದನಗಳು ಅಪಾರ ಪ್ರಮಾಣದ ಕೊಡುಗೆ ನೀಡಿವೆ.

ಅಮೃತ ಮಹಲ್

ತಳಿಯ ಹೆಸರು : ಅಮೃತ ಮಹಲ್

ಇದಕ್ಕಿಟ್ಟಿರುವ ಹೆಸರೇ ಅಮೃತದಂತಹ ಹೆಸರು. ಅದು ಸೊಗಸಾದ ಹೆಸರು. ಟಿಪ್ಪು ಸುಲ್ತಾನ್ ಇವಕ್ಕೆ ಅಮೃತ್ ಮಹಲ್ ಎಂದು ನಾಮಕರಣ ಮಾಡಿದ. ಇದು ಸಣ್ಣ ಮತ್ತು ಅತಿಸಣ್ಣ ರೈತರ ನೆಚ್ಚಿನ ದನ. ಇದು ಕರ್ನಾಟಕದ ಇನ್ನೊಂದು ಹೆಮ್ಮೆಯ ತಳಿ.

ಮೈಸೂರಿನ ಅರಸರ ಬೆಣ್ಣೆ ಚಾವಡಿಯ ತಳಿ ಇದು. ಅರಮನೆಗೆ ಹಾಲು ಒದಗಿಸಲು ಅಭಿವೃದ್ಧಿ ಪಡಿಸಲಾದ ಜಾನುವಾರು ತಳಿ ಅಮೃತ ಮಹಲ್.

ಉಗಮ ಸ್ಥಳ :

ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ತುಮಕೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಾಗಿ ಸಾಕಲಾದ ದನಗಳಿವು. ಚಳ್ಳಕೆರೆ, ಹೊಸದುರ್ಗ, ಸಾಸಲು, ಬಳ್ಳಾರಿ, ರಾಯಚೂರು, ಗದಗ, ಧಾರವಾಡ, ಹುಬ್ಬಳ್ಳಿ ಕಡೆಗಳಲ್ಲೆಲ್ಲ ಈ ತಳಿಯ ದನಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಇವುಗಳನ್ನು ಕೃಷ್ಣಾ ನದಿ ತೀರದಿಂದ ಕಾವೇರಿ ನದಿ ತೀರದವರೆಗಿನ ದನ ಎಂದು ಉಲ್ಲೇಖಿಸಿದ ಸಂದರ್ಭಗಳೂ ಇವೆ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು:

ಹಳ್ಳಿಕಾರ್, ಹಾಗಲವಾಡಿ ಮತ್ತು ಚಿತ್ರದುರ್ಗ ತಳಿಗಳಿಂದ ಅಮೃತ್ ಮಹಲ್ ತಳಿ ರೂಪುಗೊಂಡಿದೆ.

ಕಂಡು ಬರುವ ಪ್ರದೇಶಗಳು:

ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ತುಮಕೂರು, ಬೆಂಗಳೂರು, ಕೋಲಾರ, ಬಳ್ಳಾರಿ, ರಾಯಚೂರು, ಗದಗ, ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ತಳಿಯ ದನಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ನಮ್ಮ ರಾಜ್ಯದಲ್ಲಿ ಇವುಗಳ ಸಂಖ್ಯೆ 68 ಸಾವಿರ.

ಬಳಕೆಯ ವಿಧ:

ಅಮೃತ ಮಹಲ್ ದನಗಳು ದುಡಿಮೆಯ ದನಗಳು. ಎತ್ತುಗಳು ಅತ್ಯಂತ ಶ್ರಮಜೀವಿಗಳು. ಗಂಡು ಕರುಗಳಿಗೆ ಬಾಲ್ಯದಲ್ಲಿ ಪೂರ್ಣಹಾಲು ಕೊಟ್ಟೇ ಬೆಳೆಸುತ್ತಾರೆ. ತಾಯಿ ಹಸುವಿನಿಂದ ಹಾಲನ್ನು ಹಿಂಡಿಕೊಳ್ಳುವುದಿಲ್ಲ. ಕೆಚ್ಚಲಿನ ಎಲ್ಲ ಹಾಲನ್ನು ಗಂಡು ಕರುವೇ ಕುಡಿಯಲಿ ಎಂದು ಬಿಡುತ್ತಾರೆ. ಗಂಡು ಕರುವು ಚೆನ್ನಾಗಿ ಹಾಲು


ಕುಡಿದು ಭರ್ಜರಿ ಎತ್ತಾಗಲಿ ಎಂದು ಈ ಕ್ರಮವನ್ನು ಅನುಸರಿಸುತ್ತಾರೆ. ಹಸುಗಳು ಹಾಗೂ ಪಡ್ಡೆಗಳನ್ನೂ ಕೃಷಿ ಚಟುವಟಿಕೆಗಳಿಗೆ ಬಳಸುತ್ತಾರೆ. ಹಳ್ಳೀಕಾರ್ ಹಸುಗಳಂತೆಯೇ ಅಮೃತ ಮಹಲ್ ಹಸುಗಳನ್ನು ಹೋಲ್‌ಸ್ಟೈನ್ ಫ್ರೀಸಿಯನ್ ಮತ್ತು ಜರ್ಸಿ ತಳಿಗಳ ಮಿಶ್ರತಳೀಕರಣಕ್ಕೆ ಬಳಸಲಾಗಿದೆ. ಇದರಿಂದಾಗಿ ಹೆಚ್ಚಿನ ಹಾಲು ಉತ್ಪಾದನೆ ಸಾಧ್ಯವಾಗಿದೆ.

ದೇಹ ಲಕ್ಷಣಗಳು:

ಸಾಮಾನ್ಯವಾಗಿ ಬಿಳಿ, ಬೂದು, ಕಪ್ಪು ಬಣ್ಣದ ದನಗಳಿವು. ಗಾತ್ರದಲ್ಲಿ ಹಳ್ಳಿಕಾರ್ ದನಕ್ಕಿಂತ ದೊಡ್ಡವು. ಮೈಕಟ್ಟು ಅದ್ಬುತ. ಗಂಗೆದೊಗಲು ಕೂಡ ದೊಡ್ಡದು. ಕೊಂಬುಗಳು ಸಹ ದೊಡ್ಡವು. ಈ ಕಾರಣಕ್ಕಾಗಿಯೇ ಜನತೆ ಇವುಗಳನ್ನು "ದೊಡ್ಡದನ" ಎನ್ನುತ್ತಾರೆ. ಎತ್ತುಗಳ ಗಾತ್ರ ದೊಡ್ಡದು. ರೈತರ ಚಿಕ್ಕ ಮನೆಗಳಲ್ಲಿ ಕಟ್ಟಿಹಾಕಿಕೊಳ್ಳಲು ಕೊಂಚ ಅನಾನುಕೂಲವೇ.

ಈ ತಳಿಯನ್ನು ಕಂಡರೆ ಹುಲಿಗೂ ಹೆದರಿಕೆ. ಹುಲಿಯನ್ನು ತಿವಿದು ಓಡಿಸಿಬಿಡುವ ತಳಿ ಇದು ಎಂದು ಹೇಳುತ್ತಾರೆ. ಇದರ ಬುಸುಗುಟ್ಟುವ ನೋಟ ಎಂತಹ ಗಂಡೆದೆಯವರನ್ನೂ ನಡುಗಿಸಿಬಿಡುತ್ತದೆ. ಮೇಯಲು ಬಿಟ್ಟಾಗ ಈ ಜಾನುವಾರುಗಳು ಸಾಮಾನ್ಯವಾಗಿ ಹಿಂಡಿನಲ್ಲಿ ಇರಬಯಸುತ್ತವೆ.

ಮುಖ ಮತ್ತು ಕೊಂಬುಗಳ ಚಹರೆಯಿಂದಲೇ ಅಮೃತ್ ಮಹಲ್ ತಳಿಗಳನ್ನು ಗುರುತಿಸಿಕೊಳ್ಳಬಹುದು. ಮುಖ ನೀಳವಾಗಿದ್ದು ನಡುವಿನಲ್ಲಿ ಆಳವಾಗಿರುತ್ತದೆ. ಮುಖವು ಮುಸುಡಿಯತ್ತ ಎತ್ತಿಕೊಂಡಿರುತ್ತದೆ. ಒಟ್ಟಿನಲ್ಲಿ ಅಚ್ಚುಕಟ್ಟಾದ ಮುಖವಿರುತ್ತದೆ.



ಅಮೃತ್ ಮಹಲ್ ಎತ್ತು

ಕಪ್ಪಾದ ಕೊಂಬುಗಳು ನೀಳವಾಗಿ ಬೆಳೆದು ಹಿಂದಕ್ಕೆ ಹೋಗಿ ಮತ್ತೆ ಮುಂದಕ್ಕೆ ಬಾಗಿ ಬಿಲ್ಲಿನಾಕಾರವನ್ನು ಪಡೆದುಕೊಂಡಿರುತ್ತವೆ.

ಗೊರಸುಗಳು ಗಟ್ಟಿಯಾಗಿರುತ್ತವೆ. ಮುಸುಡಿ, ಗೊರಸು ಮತ್ತು ಬಾಲ ಸಾಮಾನ್ಯವಾಗಿ ಕಪ್ಪಾಗಿರುತ್ತದೆ. ಈ ತಳಿಗಳ ಗಂಗೆದೊಗಲು (ಕತ್ತಿನ ಕೆಳ ಭಾಗದಲ್ಲಿ ನೇತಾಡುವ ಚರ್ಮದ ಪದರ) ತೆಳುವಾಗಿರುತ್ತದೆ. ಅಷ್ಟೇನೂ ನೀಳವಾಗಿರುವುದಿಲ್ಲ. ಡುಬ್ಬ (ಗೋಪುರ, ಹೆಗಲು, ಹಿಣಿ, ಹಿಣಿಲು) ಹೆಚ್ಚು ಎತ್ತರವಾಗಿ ಇರುತ್ತದೆ. ಎತ್ತುಗಳಲ್ಲಿ ಡುಬ್ಬದ ಉದ್ದ 8 ಇಂಚುಗಳಿರುತ್ತದೆ. ಡುಬ್ಬ ಉದ್ದವಿದ್ದಷ್ಟೂ ಉಳುವಾಗ ಗಾಡಿ ಎಳೆಯುವಾಗ ಮೇಲಿನ ನೊಗ ಜಾರಿಹೋಗುವುದಿಲ್ಲ. ಕಾಲುಗಳ ಉದ್ದ ಮಧ್ಯಮ ಪ್ರಮಾಣದ್ದಾಗಿರುತ್ತದೆ.

ಕಟ್ಟುಮಸ್ತಾದ ದೇಹ, ಅಚ್ಚುಕಟ್ಟಾದ ಭುಜ, ಅಚ್ಚುಕಟ್ಟಾದ ಹಿಂಭುಜಗಳು ಈ ತಳಿಯ ವಿಶೇಷ ಗುಣಗಳು. ಈ ಕಾರಣದಿಂದಾಗಿಯೇ ಇವು ಅತ್ಯಂತ ಶ್ರಮಜೀವಿ ದನಗಳು.

ಮೈ ಮೇಲಿನ ಕೂದಲು ಸದಾ ಹೊಳಪಿನಿಂದ ಕೂಡಿರುತ್ತದೆ. ಅಪರಿಚಿತರಿಗೆ ಅಮೃತ್ ಮಹಲ್ ದನಗಳು ಅಪಾಯಕಾರಿ ದನಗಳು. ಹೊಸಬರನ್ನು ಕಂಡರೆ ಹಾಯುತ್ತವೆ. ಹೊಲದ ಬಳಿ ಈ ತಳಿಯ ದನಗಳು ಇದ್ದರೆ ಕಳ್ಳಕಾಕರ ಭಯ ಕಡಿಮೆ. ಮನೆಯ ಹಟ್ಟಿಯ ಬಳಿ ಕಟ್ಟಿಹಾಕಿದಾಗಲೂ ಕಳ್ಳಕಾಕರು ಹೆದರಲೇಬೇಕು. ಅಪರಿಚಿತರನ್ನು ಕೆಕ್ಕರಿಸಿಕೊಂಡು ನೋಡುತ್ತವೆ.

ಅಮೃತ್ ಮಹಲ್ ತಳಿಯ ದನಗಳು ಹೆಚ್ಚಿನ ಭಾರವನ್ನು ಬಹುದೂರದ ಸ್ಥಳಗಳಿಗೆ ಎತ್ತಿನ ಬಂಡಿಯಲ್ಲಿ ಕೊಂಡೊಯ್ಯಬಲ್ಲವು. ಮನುಷ್ಯರೂ ಕೂಡ ಹಿಂಡು ಹಿಂಡಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಯಾಣಿಸಲು ಮದುವೆ ಮುಂಜಿ ಕಾರ್ಯಕ್ರಮಗಳಿಗೆ ಬೇರೆ ಊರುಗಳಿಗೆ ಹೋಗಲು ಅಮೃತ್ ಮಹಲ್ ಎತ್ತಿನ ಬಂಡಿಯನ್ನು ಅವಲಂಬಿಸುತ್ತಾರೆ.

ಕಣ್ಣುಗಳು ಪ್ರಕಾಶಿಸುತ್ತಿರುತ್ತವೆ. ಕಿವಿಗಳ ಗಾತ್ರ ಚಿಕ್ಕದು. ಈ ತಳಿಯ ಸರಾಸರಿ ಎತ್ತರ 125 ಸೆಂಟಿಮೀಟರ್‌ಗಳು. ಹೊಳಪಿನ ಚರ್ಮದ ಮೇಲೆ ಹೊಳೆಯುವ ಕೂದಲಿರುತ್ತದೆ. ಪಡ್ಡೆಗಳನ್ನು 24 ರಿಂದ 30 ತಿಂಗಳಾದ ಮೇಲೆ ಸಂತಾನೋತ್ಪತ್ತಿಗೆ ಬಳಸಿಕೊಳ್ಳಬಹುದು. ವಯಸ್ಕ ದನಗಳ ತೂಕ 300 ರಿಂದ 500 ಕಿಲೋ ಗ್ರಾಂಗಳವರೆಗೆ ಇರುತ್ತದೆ.

ವಿಶೇಷ ಗುಣಗಳು:

ಹೆಚ್ಚು ರೋಷದ ಮತ್ತು ಶ್ರಮಜೀವಿ ದನಗಳು.

ಪರ್ಯಾಯ ಹೆಸರುಗಳು:

ಬೆಣ್ಣೆ ಚಾವಡಿ ಎಂಬುದು ತೀರಾ ಹಳೆಯ ಹೆಸರು. ಇದು ಟಿಪ್ಪುವಿನ ಕಾಲಕ್ಕಿಂತ ಹಿಂದೆ ಇದ್ದ ಹೆಸರು. ಟಿಪ್ಪು ಸುಲ್ತಾನನೇ ಈ ದನಗಳಿಗೆ ಅಮೃತ್ ಮಹಲ್ ಎಂಬ ಹೆಸರನ್ನಿಟ್ಟನು.

ಇತರೆ ಚಾರಿತ್ರಿಕ ಮಾಹಿತಿ:

ಹೈದರಾಲಿ (1704–1784) ಮತ್ತು ಟಿಪ್ಪು ಸುಲ್ತಾನ್‌ರವರು (1784–1799) ಮೆಚ್ಚಿಕೊಂಡ ತಳಿಯಿದು. ಸೈನ್ಯದಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸಲು ಬಳಸಿಕೊಂಡ ತಳಿ. ಮೈಸೂರ ಅರಸರ ಸೈನ್ಯದಲ್ಲಿದ್ದ 250 ಅಮೃತ್ ಮಹಲ್ ತಳಿಯ ಹೋರಿಗಳು ನಿಜಾಮನ ಸೈನ್ಯದ 3000 ಸೈನಿಕರನ್ನು ಹಿಮ್ಮೆಟ್ಟಿಸಿದ್ದವಂತೆ. ಮೈಸೂರ ಅರಸರು ಈ ತಳಿಯನ್ನು ಉಳಿಸಿ ಬೆಳೆಸಿದರು. ಯುದ್ಧದ ಸಾಮಗ್ರಿ ಸಾಗಾಟಕ್ಕೆ ಬಳಕೆ ಮಾಡಲಾಗಿದೆ.

ಅಮೃತ್ ಮಹಲ್ ಎಂದರೆ ಹಾಲಿನ ಇಲಾಖೆ ಎಂಬ ಅರ್ಥವಿತ್ತು. ಈ ಇಲಾಖೆ ಅಸ್ತಿತ್ವಕ್ಕೆ ಬಂದದ್ದು ಟಿಪ್ಪುವಿನ ಕಾಲದಲ್ಲಿ. ಅಮೃತ್ ಮಹಲ್ ತಳಿಯು ಹತ್ತೊಂಬತ್ತನೇ ಶತಮಾನದಲ್ಲಿ ಪ್ರಾಮುಖ್ಯ ಪಡೆದುಕೊಂಡ ತಳಿಗಳಲ್ಲೊಂದು. ಇದು ಶ್ರಮದಾಯಕ ಮತ್ತು ವೇಗದ ನಡಿಗೆಯ ತಳಿ. ಹತ್ತೊಂಬತ್ತನೇ ಶತಮಾನದಲ್ಲಿ ನಡೆದ ಹಲವಾರು ಯುದ್ಧಗಳಲ್ಲಿ ಯುದ್ಧ ಸಾಮಗ್ರಿ ಸಾಗಿಸಲು ಬಳಸಲಾಗಿದೆ. ಯುದ್ಧ ಸಾಮಗ್ರಿಗಳನ್ನು ಹೊತ್ತು ಎರಡು ದಿನಗಳಲ್ಲಿ ನೂರಾರು ಮೈಲಿ ಕ್ರಮಿಸಿದ ಉದಾಹರಣೆಗಳಿವೆ.

1860ರಲ್ಲಿ ಆರ್ಥಿಕ ಕಾರಣಗಳಿಂದಾಗಿ ಮೈಸೂರು ಸಂಸ್ಥಾನದಲ್ಲಿದ್ದ ಅಮೃತ್ ಮಹಲ್ ಹಿಂಡುಗಳನ್ನು ಮಾರಲಾಗಿದೆ. ಅದರೆ ನಂತರ ಈ ತಳಿಗಳ ಅಗತ್ಯವನ್ನು ಮನಗಂಡ ರಾಜ ವಂಶಸ್ಥರು 1866ರಲ್ಲಿ ಈ ಹಿಂಡುಗಳನ್ನು ಪುನರ್ ಸ್ಥಾಪಿಸಿ ಅಮೃತ್ ಮಹಲ್ ತಳಿಯನ್ನು ಪೋಷಿಸಿಕೊಂಡು ಬಂದರು.

ಮೈಸೂರು ಅರಸರು ಈ ತಳಿಯನ್ನು ಸಾಕಲು ಹಾಗೂ ಅಭಿವೃದ್ಧಿಪಡಿಸಲು ವಿಶಾಲವಾದ ಹುಲ್ಲುಗಾವಲುಗಳನ್ನು ಮೀಸಲಾಗಿಟ್ಟಿದ್ದರು. ಇಂತಹ ಬಯಲುಗಳನ್ನು ಅಮೃತ್ ಮಹಲ್ ಕಾವಲುಗಳು ಎಂದು ಕರೆಯಲಾಗುತ್ತಿತ್ತು. ಒಂದು ಅಂದಾಜಿನಂತೆ 17ನೇ ಶತಮಾನದಲ್ಲಿ ಸುಮಾರು 1,72,800 ಹೆಕ್ಟೇರ್‌ಗಳಷ್ಟು ಪ್ರದೇಶವು ಅಮೃತ್ ಮಹಲ್ ಕಾವಲು ಭೂಮಿಯಾಗಿತ್ತು. ಒಂದೊಂದು ಪ್ರದೇಶದಲ್ಲಿ 60,000 ಅಮೃತ್ ಮಹಲ್ ದನಗಳು ಹಿಂಡು ಹಿಂಡಾಗಿ ಮೇಯುತ್ತಿದ್ದವು. ಇಂದು ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದಲ್ಲಿ ಇಂತಹ ಅಮೃತ್ ಮಹಲ್ ಕಾವಲು ಇದೆ.

ಭಾರವಾದ ಯುದ್ಧದ ಫಿರಂಗಿಗಳನ್ನು ಸಾಗಿಸಲು ಬಳಸಲಾಗುತ್ತಿತ್ತು. 1840ನೇ ಇಸವಿಯ ಸುಮಾರಿಗೆ ಬ್ರಿಟೀಷರು ಅಫಘಾನಿಸ್ಥಾನದಲ್ಲಿ ಯುದ್ದ ಪಿರಂಗಿಗಳ ಸಾಗಾಣಿಕೆಗೆ ಈ ದನಗಳನ್ನು ಬಳಸಿದ್ದಾರೆ.

ಇಡೀ ಪ್ರಪಂಚದಲ್ಲೇ ಪ್ರಪ್ರಥಮ ಬಾರಿಗೆ ಹೊಚ್ಚ ಹೊಸದಾಗಿ ಅಭಿವೃದ್ಧಿ ಪಡಿಸಲಾದ ದನಗಳ ತಳಿಯೆಂದರೆ ಅಮೃತಮಹಲ್ ತಳಿ (ಹಳೆಯ ಹೆಸರು ಬೆಣ್ಣೆ ಚಾವಡಿ). ಮೈಸೂರು ಅರಸರಿಗೆ ಈ ಕೀರ್ತಿ ಸಲ್ಲುತ್ತದೆ. 1572ರ ಸುಮಾರಿಗೆ ಈ ತಳಿ ರೂಪುಗೊಂಡಿದೆ. ಇದು ಇಂಗ್ಲೆಂಡಿನಲ್ಲಿ ಮೊಟ್ಟ ಮೊದಲಿಗೆ ರೂಪುಗೊಂಡ ಹೊಸ ತಳಿ ಶಾರ್ಟ್ ಹಾರ್ನ್ ಎಂಬ ತಳಿಗಿಂತ ಮೊದಲೇ ಸಂಕರಣಗೊಂಡ ತಳಿಯಾಗಿದೆ.

ಮೈಸೂರಿನ ಅರಸರಾದ ಚಾಮರಾಜ ಒಡೆಯರ್ (1617–1704) ಶ್ರೀ ಕಂಠೀರವ ನರಸರಾಜ ಒಡೆಯರ್ (1638–1658) ಮತ್ತು ಶ್ರೀ ಚಿಕ್ಕದೇವರಾಜ ಒಡೆಯರ್ (1672–1704) ರವರು ಬೆಣ್ಣೆ ಚಾವಡಿ ತಳಿಯ ಸಂತಾನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಆನಂತರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ (1799–1831) ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ (1895–1940) ರವರು ಈ ತಳಿಗಳ ಸಂಗೋಪನೆಯನ್ನು ಕಾಪಾಡಿಕೊಂಡು ಬರಲು ನೆರವಾಗಿದ್ದಾರೆ.

ಅಂದಿನ ಕಾಲದಲ್ಲಿ ಅಮೃತ್ ಮಹಲ್ ಎತ್ತುಗಳನ್ನು ಬಂದೂಕು ಹೊರುವ ಎತ್ತುಗಳು, ಸರಕು ಸಾಗಣೆಯ ಎತ್ತುಗಳು ಮತ್ತು ಉಳುಮೆಯ ಎತ್ತುಗಳು ಎಂದು ವಿಂಗಡಿಸಿಕೊಳ್ಳಲಾಗಿತ್ತು.

ಹೈದರಾಲಿಯು ದಿನವೊಂದಕ್ಕೆ 100 ಕಿಲೋ ಮೀಟರ್‌ಗಳಿಗೂ ಹೆಚ್ಚು ಕ್ರಮಿಸಲು ಅಮೃತ್ ಮಹಲ್ ತಳಿಗಳನ್ನೇ ಬಳಸುತ್ತಿದ್ದ. ಮೊದಲ ಜಾಗತಿಕ ಯುದ್ಧದಲ್ಲಿ ಮೆಸಪೊಟೋಮಿಯಾದ ಪರ್ವತ ಶ್ರೇಣಿಗಳಲ್ಲಿ ಪಯಣಿಸಲು ಬಳಸಲಾಗಿದೆ. ಹೈದರಾಲಿಯು ಮೈಸೂರು ಪ್ರಾಂತ್ಯದ ಅಕ್ಕಪಕ್ಕದ ಪ್ರಾಂತ್ಯಗಳಾದ ಚಿತ್ರದುರ್ಗ ಮತ್ತು ತರೀಕೆರೆಯ ಪಾಳೇಗಾರರಿಂದ ಅಮೃತ್ ಮಹಲ್ ತಳಿಗಳನ್ನು ಪಡೆದುಕೊಂಡಿದ್ದಾರೆ.

1863ರಲ್ಲಿ ಅಮೃತ್ ಮಹಲ್ ತಳಿಗಳ ಸಂಖ್ಯೆ ಕ್ಷೀಣಗೊಳ್ಳುತ್ತಿರುವುದನ್ನು ಗಮನಿಸಿದ ಬ್ರಿಟೀಷ್ ಅಧಿಕಾರಿಗಳು, ಕ್ಯಾಪ್ಟನ್ ಹಾರ್ವೆ ಎಂಬುವವನನ್ನು ಇವುಗಳ ಅಭಿವೃದ್ಧಿಯ ಉಸ್ತುವಾರಿಗೆ ನೇಮಿಸಿ, ಕೇವಲ ಹತ್ತು ವರ್ಷಗಳಲ್ಲಿ ಅಮೃತ್ ಮಹಲ್ ದನಗಳ ಸಂಖ್ಯೆಯನ್ನು ಬ್ರಿಟಿಷರು ಇಮ್ಮಡಿಗೊಳಿಸಿಕೊಂಡರು.

ಕೃಷ್ಣಾ ತೀರ

ತಳಿಯ ಹೆಸರು: ಕೃಷ್ಣಾ ತೀರ

ಉಗಮ ಸ್ಥಳ:

ಕರ್ನಾಟಕದಲ್ಲಿ ಹರಿಯುವ ಕೃಷ್ಣಾ ನದಿ ಪಾತ್ರದಲ್ಲಿ ಉಗಮಗೊಂಡ ತಳಿಯಿದು. ಆದುದರಿಂದಲೇ ಇದರ ಹೆಸರು ಕೃಷ್ಣಾ ತೀರ ಎಂಬುದಾಗಿದೆ. ಮಲಪ್ರಭಾ ಮತ್ತು ಘಟಪ್ರಭಾ ನದಿಗಳ ಕಪ್ಪು ಜಿಗುಟು ಮಣ್ಣಿನ ಪ್ರದೇಶವೂ ಕೂಡ ಇವುಗಳ ಉಗಮ ಸ್ಥಳ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು:

ಗುಜರಾತಿನ ಗಿರ್ ತಳಿ, ಆಂಧ್ರಪ್ರದೇಶದ ಒಂಗೋಲ್ ತಳಿ, ಗುಜರಾತ್ ಹಾಗೂ ರಾಜಸ್ಥಾನದ ಕಾಂಕ್ರೇಜ್ ತಳಿ ಮತ್ತು ಕರ್ನಾಟಕದ ಹಳ್ಳಿಕಾರ್ ತಳಿಗಳ ಮಿಶ್ರಣದಿಂದ ಈ ತಳಿಯನ್ನು ಪಡೆದುಕೊಳ್ಳಲಾಗಿದೆ.

ಕಂಡು ಬರುವ ಪ್ರದೇಶಗಳು:

ಕೃಷ್ಣಾನದಿ ಪಾತ್ರದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಧಾರವಾಡ ಜಿಲ್ಲೆ. ಮಹಾರಾಷ್ಟ್ರದ ಸತಾರ, ಮೀರಜ್ ಮತ್ತು ಕೊಲ್ಲಾಪುರ ಜಿಲ್ಲೆಗಳು. ಕರ್ನಾಟಕಕ್ಕೆ ಅಂಟಿಕೊಂಡ ಆಂಧ್ರ ಪ್ರದೇಶದ ಕೆಲವು ಭಾಗಗಳು. ನಮ್ಮ ರಾಜ್ಯದಲ್ಲಿ ಈ ತಳಿ ಅವನತಿಯ ಹಂತದಲ್ಲಿದೆ. 2003 ರ ದನಗಣತಿಯಂತೆ ನಮ್ಮ ರಾಜ್ಯದಲ್ಲಿ ಕೇವಲ 281 ಕೃಷ್ಣಾ ತೀರ ದನಗಳಿವೆ.

ಬಳಕೆಯ ವಿಧ:

ಕೃಷಿಗಾಗಿ ಬಳಸುವ ದುಡಿಮೆಯ ತಳಿಯಿದು. ಜತೆಗೆ ಸಾಕಷ್ಟು ಹಾಲನ್ನೂ ಕೊಡುತ್ತವೆ. ಬಿಗಿದುಕೊಂಡಿರುವ ಕಪ್ಪು ಮಣ್ಣಿನ ಉಳುಮೆ ಕೆಲಸದಲ್ಲಿ ಗೇಯುವ ಕಷ್ಟ ಸಹಿಷ್ಣು ದನಗಳಿವು. ಹೆಚ್ಚಿನ ಭಾರವನ್ನೂ ಎಳೆಯುತ್ತವೆ. ಗಿರ್ ಮತ್ತು ಒಂಗೋಲ್ ತಳಿಯ ಗುಣಗಳು ಕೃಷ್ಣಾ ತೀರ ತಳಿಯಲ್ಲಿ ಸಮ್ಮಿಶ್ರಣಗೊಂಡಿರುವುದರಿಂದ ಕೃಷಿಕರ ಮನೆಗೆ ಸಾಕಾಗುವಷ್ಟು ಹಾಲನ್ನೂ ಕರೆಯುತ್ತವೆ.

ದೇಹ ಲಕ್ಷಣಗಳು:

ಇದರ ಮೈ ಬಣ್ಣ ಬೂದು, ಕಂದು, ಕಪ್ಪು ಅಥವಾ ಬಿಳಿ ಇವುಗಳಲ್ಲಿ ಯಾವುದಾದರೂ ಆಗಿರುತ್ತದೆ. ದೊಡ್ಡ ಗಾತ್ರದ ಮೈ ಈ ತಳಿಯ ವಿಶೇಷ. ಗಂಡು ತಳಿಗಳಲ್ಲಿ ಮುಂಗಾಲು ಮತ್ತು ಹಿಂಗಾಲುಗಳ ಹೊದಿಕೆಯ ಬಣ್ಣ ಕಪ್ಪು. ಗಂಗೆತೊಗಲು ನೀಳವಾಗಿ ಬೆಳೆದಿದ್ದು ಜೋತಾಡುತ್ತಿರುತ್ತದೆ. ಕಿವಿಗಳು ಚಿಕ್ಕವು ಮತ್ತು ತುದಿ ಚೂಪು. ದೇಹದ ಉದ್ದ ಚಿಕ್ಕದು. ಆದರೆ ಹೊಟ್ಟೆಭಾಗ ದೊಡ್ಡದು. ಕಾಲುಗಳೂ ಚಿಕ್ಕವು.


ಆದರೆ ದಪ್ಪ ಗೊರಸುಗಳು ಇರುತ್ತವೆ. ಕೊಂಬುಗಳು ನೀಳವಾಗಿ ಮೇಲಕ್ಕೆ ಬೆಳೆದಿರುತ್ತವೆ. ದೇಹ ತೂಕವು 350 ರಿಂದ 550 ಕಿಲೋ ಗ್ರಾಂಗಳಷ್ಟಿರುತ್ತದೆ.

ವಿಶೇಷ ಗುಣಗಳು: ಕಣ್ಣಿನ ಸುತ್ತಲೂ ಕಪ್ಪು ಪಟ್ಟೆ ಇರುತ್ತದೆ. ಇದು ಕಣ್ಣಿಗೆ ಕಾಡಿಗೆ ಹಚ್ಚಿದಂತೆ ಕಾಣುತ್ತದೆ. ಈ ಕಾರಣದಿಂದಾಗಿ ಕೃಷ್ಣಾ ತೀರ ಎಂದರೆ ಕಾಡಿಗೆ ಕಣ್ಣಿನ ದನ ಎಂಬಂತಾಗಿದೆ.

ಪರ್ಯಾಯ ಹೆಸರುಗಳು: ಹೊಳೆಸಾಲ ದನಗಳು, ಕೃಷ್ಣಾ ವ್ಯಾಲಿ.

ಇತರೆ ಚಾರಿತ್ರಿಕ ಮಾಹಿತಿ: ಕೃಷ್ಣಾ ನದಿ ಹರಿವಿನ ಆಸುಪಾಸಿನ ಪ್ರದೇಶದಲ್ಲಿ ಈ ತಳಿ ಕಂಡುಬರುವುದರಿಂದ ಈ ತಳಿಯನ್ನು ಕೃಷ್ಣಾತೀರ ಎಂದು ಕರೆಯಲಾಗಿದೆ. ಕೃಷ್ಣಾ ನದಿಯ ಜತೆಗೆ ಅದರ ಉಪನದಿಗಳಾದ ಘಟಪ್ರಭಾ ಮತ್ತು ಮಲಪ್ರಭಾ ನದಿಗಳಲ್ಲಿ ಹರಿದ ನೀರು, ಅದರಿಂದ ಬೆಳೆದ ಹಚ್ಚ ಹಸಿರು ಹುಲ್ಲು ಈ ತಳಿಗಳನ್ನು ಒಂದು ಕಾಲದಲ್ಲಿ ಕಾಪಾಡಿದೆ. ಆದರೆ, ಇದೀಗ ಈ ತಳಿಯ ದನಗಳ ಸಂಖ್ಯೆ ಅತೀವವಾಗಿ ಕುಸಿದಿದೆ. ಹೆಚ್ಚಿನ ಪ್ರಮಾಣದ ಆಹಾರ ಮತ್ತು ಹಸಿರು ಹುಲ್ಲು ಈ ತಳಿಗೆ ಬೇಕು.

ಕೃಷ್ಣಾ ನದಿ ಪಾತ್ರದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ತಳಿಯ ದನಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು.



ಕೃಷ್ಣಾ ತೀರ

ಬರಲಾಗಿದೆ.

ಅಮೆರಿಕಾ ಮತ್ತು ಬ್ರೆಜಿಲ್ ದೇಶಗಳಿಗೆ ಕೃಷ್ಣಾ ತೀರ ತಳಿ ರಫ್ತಾಗಿದೆ.

ದೇವಣಿ ತಳಿ

ದೇವಣಿ ತಳಿ ಅಥವಾ 'ದೇವನಿ' ತಳಿಯ ಉಗಮ ಸ್ಥಳ ಮಹಾರಾಷ್ಟ್ರದ ಉದಗಿರ್ ತಾಲ್ಲೂಕಿನ ದೇವಣಿ ಎಂಬ ಗ್ರಾಮ, ಅದರ ಸುತ್ತಮುತ್ತಲಿನ ಗ್ರಾಮಗಳು, ಬೀದರ್ ಜಿಲ್ಲೆ ಹಾಗೂ ಆಂಧ್ರ ಪ್ರದೇಶದ ಪಶ್ಚಿಮ ಭಾಗಕ್ಕಿರುವ ಜಿಲ್ಲೆಗಳು (ಕರ್ನಾಟಕದ ಗಡಿಗೆ ಅಂಟಿಕೊಂಡ ಆಂಧ್ರ ಪ್ರದೇಶದ ಜಿಲ್ಲೆಗಳು).

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು:


ಸುಮಾರು 50 ವರ್ಷಗಳ ಹಿಂದೆ ಗುಜರಾತಿನ ಗಿರ್ ಮತ್ತು ಮಹಾರಾಷ್ಟ್ರದ ನಾಸಿಕ್ ಮತ್ತು ಅಹಮದ್ ನಗರ ಭಾಗಗಳಲ್ಲಿರುವ ಡಾಂಗಿ ಮತ್ತು ಸ್ಥಳೀಯ ಜವಾರಿ ತಳಿಯಿಂದ ರೂಪುಗೊಂಡ ತಳಿಯಿದು.

ಕಂಡು ಬರುವ ಪ್ರದೇಶಗಳು:

ಕರ್ನಾಟಕದ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಈ ತಳಿಯಿದೆ. ಮಹಾರಾಷ್ಟ್ರದ ಲಾತೂರ್, ಪರಬಾನಿ ಮತ್ತು ಉದ್ಗೀರ್ ಜಿಲ್ಲೆಗಳಲ್ಲಿಯೂ ಕಂಡು ಬರುವ ತಳಿಯಿದು. ಜತೆಗೆ ಆಂಧ್ರ ಪ್ರದೇಶದ ಸಂಗಾರೆಡ್ಡಿ, ರಂಗಾರೆಡ್ಡಿ ಮತ್ತು ಮೇಡಕ್ ಜಿಲ್ಲೆಗಳಲ್ಲಿಯೂ ಈ ತಳಿ ಹರಡಿಕೊಂಡಿದೆ. ಕೆಲವು ಸಂಸಾರಗಳು ಈ ತಳಿಯನ್ನು ಸಾಕುವುದನ್ನು ಹಿರಿಮೆ, ಅಂತಸ್ತಿನ ವಿಷಯವನ್ನಾಗಿಸಿಕೊಂಡಿವೆ. ನಮ್ಮ ರಾಜ್ಯದಲ್ಲಿ ಇವುಗಳ ಸಂಖ್ಯೆ ಸುಮಾರು 35 ಸಾವಿರ.

ಬಳಕೆಯ ವಿಧ:

ಇದು ದುಡಿಯುವ ತಳಿಯೂ ಹೌದು. ಹಾಲು ಕೊಡುವ ತಳಿಯೂ ಹೌದು. ಒಂದು ಕರಾವಿಗೆ 750 ರಿಂದ 1250 ಲೀಟರ್‌ಗಳಷ್ಟು ಹಾಲು ಕೊಡುವುದು. ಕೆಲಹಸುಗಳು 1800 ಸೇರುಗಳವರೆಗೆ ಹಾಲು ಕರೆದ ಉದಾಹರಣೆಗಳಿವೆ. ಬೀದರ್‌ನ ಕಲ್ಲು ಭೂಮಿಯಲ್ಲಿ ಹಾಗೂ ಜಿಗುಟು ಮಣ್ಣಿನಲ್ಲಿ ಉಳುಮೆ ಮಾಡಲು ಶಕ್ತವಾಗಿರುವ ತಳಿಯಿದು.



ದೇವಣಿ ಹಸು

ದೇಹ ಲಕ್ಷಣಗಳು:

ಹಣೆ ಚಿಕ್ಕದಾದರೂ ಉಬ್ಬಿರುತ್ತದೆ. ಮೈಮೇಲೆ ಕಪ್ಪು ಬಿಳುಪು ಮಚ್ಚೆಗಳಿರುತ್ತವೆ. ನೇತಾಡುವ ಚಿಕ್ಕ ಕಿವಿ, ಕಿವಿಯ ಒಳಭಾಗ ಕಪ್ಪು ಬಣ್ಣದಿಂದ ಕೂಡಿರುತ್ತವೆ. ಇವುಗಳ ಗೊರಸು, ಕಣ್ಣು, ಮೊಲೆ, ಬಾಲದ ತುದಿ ಇವೆಲ್ಲಾ ಕಪ್ಪುಮಯ. ಕೊಂಬುಗಳು ಸಣ್ಣವು. ಸುಮಾರು 400 ರಿಂದ 700 ಕಿಲೋ ಗ್ರಾಂಗಳವರೆಗೆ ದೇಹತೂಕವಿರುವ ಭಾರೀ ಗಾತ್ರದ ದನಗಳಿವು.

ಇದರ ತಲೆ, ಕಿವಿ, ಕೊಂಬುಗಳು ಗಿರ್ ತಳಿಗೆ ಹೆಚ್ಚು ಹೋಲುತ್ತವೆ. ಮೈಕಟ್ಟು ಡಾಂಗಿ ತಳಿಯಂತೆ ಇರುತ್ತದೆ. ಚರ್ಮವು ದಪ್ಪ ಮಧ್ಯಮ ಗಾತ್ರದ್ದಾಗಿದ್ದು ಸಡಿಲವಾಗಿ ಜೋತಾಡುತ್ತಿರುತ್ತದೆ. ಹಸುಗಳಲ್ಲಿ ಕೆಚ್ಚಲಿನ ಗಾತ್ರ ದೊಡ್ಡದಿರುತ್ತದೆ.

ಈ ತಳಿಯಲ್ಲಿ ಮೂರು ವಿಧಗಳಿವೆ.

1. ಶೆವೆರಾ – ಬಿಳಿ ಬಣ್ಣದಲ್ಲಿ ಕಪ್ಪು ಚುಕ್ಕೆಗಳು.
2. ಬಲಿಂಕ್ಯ – ಇದರ ಮೈ ಸಂಪೂರ್ಣ ಬಿಳಿ ಬಣ್ಣದಿಂದ ಕೂಡಿರುತ್ತದೆ.
3. ವನ್ನೇರಾ – ಮೈಭಾಗ ಬಿಳಿಯ ಬಣ್ಣದಲ್ಲಿರುತ್ತದೆ. ಮುಖ ಮಾತ್ರ ಕಪ್ಪು.

ವಿಶೇಷ ಗುಣಗಳು: ದೊಡ್ಡ ದೇಹ, ಗಟ್ಟಿ ಪಾದಗಳು ಈ ತಳಿಯ ಮುಖ್ಯ ಗುಣಗಳು.

ಪರ್ಯಾಯ ಹೆಸರುಗಳು: ದೇವಣಿ, ದಿಯೋನಿ, ದೊಂಗರಪಟ್ಟಿ, ದೊಂಗಾರಿ, ದೇವನಿ.

ಮಲೆನಾಡು ಗಿಡ್ಡ

ತಳಿಯ ಹೆಸರು : ಮಲೆನಾಡು ಗಿಡ್ಡ

ಉಗಮ ಸ್ಥಳ : ಕರ್ನಾಟಕದ ಮಲೆನಾಡು ಪ್ರದೇಶ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು:

ಕರ್ನಾಟಕದ ಮಲೆನಾಡು ಪ್ರದೇಶದ ಜಿಲ್ಲೆಗಳಾದ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಹಾವೇರಿ, ದಾವಣಗೆರೆ, ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ತಳಿ ಕಂಡು ಬರುತ್ತದೆ. 2003 ರಲ್ಲಿ ಜರುಗಿದ 17ನೇ ಜಾನುವಾರು ಗಣತಿಯಂತೆ ನಮ್ಮ ರಾಜ್ಯದಲ್ಲಿ ಸುಮಾರು 14.41 ಲಕ್ಷ ಮಲೆನಾಡು ಗಿಡ್ಡ ತಳಿಯ ಜಾನುವಾರುಗಳಿವೆ.

ಬಳಕೆಯ ವಿಧ:

ದುಡಿಮೆಗೆ ಹೆಸರಾದ ತಳಿ. ಹಾಲಿನ ಇಳುವರಿಯೂ ತೃಪ್ತಿದಾಯಕ. ದಿನದ ಗರಿಷ್ಠ ಹಾಲಿನ ಇಳುವರಿ 2 ರಿಂದ 3 ಲೀಟರ್. ಮೂರರಿಂದ ಮೂರುವರೆ



ಎಲ್ಲೆಂದರಲ್ಲಿ ಓಡಾಡಿ ಮೇಯುವ ಮಲೆನಾಡು ಗಿಡ್ಡಾ ಹಸುಗಳು

ವರ್ಷ ವಯಸ್ಸಾದಾಗ ಪ್ರಾಯಕ್ಕೆ ಬರುತ್ತವೆ. ಇವುಗಳ ಆಯಸ್ಸು ಸುಮಾರು ಇಪ್ಪತ್ತು ವರ್ಷಗಳು.

ದೇಹ ಲಕ್ಷಣಗಳು:

ಇದು ಸಣ್ಣ ಗಾತ್ರದ ತಳಿ. ಇವುಗಳ ದೇಹ ತೂಕ ಸುಮಾರು 120 ರಿಂದ 180 ಕಿಲೋ ಗ್ರಾಂಗಳು. ಕಪ್ಪು, ಕಂದು, ಕೆಂಪು, ಬಿಳಿ ಮತ್ತು ಇವುಗಳ ಮಿಶ್ರ ಬಣ್ಣಗಳಲ್ಲಿ ಈ ತಳಿಯ ಮೈಬಣ್ಣವಿರುತ್ತದೆ. ಇದರಿಂದಾಗಿ ಬಣ್ಣದ ವಿಧಗಳನ್ನು ಪಂಚವರ್ಣೀಯ ವಿಧಗಳೆಂದು ವರ್ಣಿಸಲಾಗಿದೆ. ಕಡಿಮೆ ಆಹಾರ ತಿಂದು ಹೆಚ್ಚು ಪೌಷ್ಟಿಕಾಂಶದ ಹಾಲನ್ನು ಕೊಡುತ್ತವೆ. ಸಣ್ಣ ಗಾತ್ರದ ದೇಹ. ಮುಖ ಸಪೂರವಾಗಿ ಉದ್ದವಾಗಿರುತ್ತದೆ. ಕುರುಚಲು ಕೊಂಬುಗಳು, ನೆಲಕ್ಕೆ ತಾಗುವಷ್ಟು ಬಾಲ ಈ ತಳಿಯ ಇತರ ಗುಣಗಳು.

ವಿಶೇಷ ಗುಣಗಳು:

ಕಾಲು ಬಾಯಿ ರೋಗ, ದೊಡ್ಡ ರೋಗ, ಕೆಚ್ಚಲು ಬಾವು ಮುಂತಾದ ಕಾಯಿಲೆಗಳು ಈ ತಳಿಗಳನ್ನು ಅಷ್ಟಾಗಿ ಬಾಧಿಸುವುದಿಲ್ಲ. ಹೆಚ್ಚಿನ ರೋಗಗಳಿಗೆ ನಿರೋಧಕ ಶಕ್ತಿಯನ್ನು ಹೊಂದಿವೆ.

ತಿಪ್ಪೆ ಅಥವಾ ಕಸದತೊಟ್ಟಿಯ ಬಳಿ ಮೇಯ್ದರೂ ಕೆಚ್ಚಲು ಬಾವು ಬರುವುದಿಲ್ಲ. ಅಷ್ಟೊಂದು ಅಗಾಧವಾದ ರೋಗನಿರೋಧಕ ಶಕ್ತಿಯು ಈ ತಳಿಗಳಲ್ಲಿದೆ. ಮಲೆನಾಡಿನ ಮಳೆಯಲ್ಲಿ ಹೆಚ್ಚೆಚ್ಚು ತೋಯ್ದರೂ ಇದರ ಆರೋಗ್ಯಕ್ಕೆ ಕುಂದುಂಟಾಗುವುದಿಲ್ಲ. ಬೇಸಿಗೆಯ ಬಿಸಿಲಿನ ಝಳಕ್ಕೆ ಸೊರಗಿಹೋಗುವುದಿಲ್ಲ.

ಕಾಲುಗಳು ಶಕ್ತಿಯುತವಾಗಿರುವುದರಿಂದ ಬೆಟ್ಟ, ಗುಡ್ಡ, ಹಳ್ಳ ಕೊಳ್ಳಗಳನ್ನು ಸುಲಭವಾಗಿ ಏರಿಳಿಯುತ್ತವೆ. ದೇಹ ತೂಕ ಕಡಿಮೆಯಿರುವುದೂ ಕೂಡ ಇಂತಹ ಸಂಚಾರಕ್ಕೆ ಈ ತಳಿಗೆ ಅನುಕೂಲಕರವಾಗಿದೆ.

ಸಾಧಾರಣ ಗಾತ್ರದ ಮಲೆನಾಡು ಗಿಡ್ಡಾ ಹಸುವಿನ ದೇಹತೂಕ ಸುಮಾರು 70 ರಿಂದ 150 ಕಿಲೋ ಗ್ರಾಂಗಳು ಮಾತ್ರ.

ಪರ್ಯಾಯ ಹೆಸರುಗಳು: ಇಲ್ಲ.

ಇತರೆ ಚಾರಿತ್ರಿಕ ಮಾಹಿತಿ:

ತಲೆತಲಾಂತರದಿಂದ ಮಲೆನಾಡಿನ ಸಣ್ಣ ಹಿಡುವಳಿದಾರರ ಭೂಮಿಯನ್ನು ಉಳಲು ಬಳಸಿ ಸುಸ್ಥಿರ ಕೃಷಿಗೆ ಕಾರಣವಾದ ತಳಿ. ಇವುಗಳ ನಿರ್ವಹಣೆ ತುಂಬಾ ಸುಲಭ. ಕೊಡಬೇಕಾದ ಆಹಾರ ಕಡಿಮೆ. ರೈತ ಸಮುದಾಯಕ್ಕೆ ಮಲೆನಾಡಿನ ನಿಸರ್ಗ ಒದಗಿಸಿಕೊಟ್ಟ ತಳಿಯೇನೋ ಇದು ಎಂದರೂ ತಪ್ಪಾಗಲಾರದು.

ಜವಾರಿ

ತಳಿಯ ಹೆಸರು : ಜವಾರಿ

ಉಗಮ ಸ್ಥಳ : ಉತ್ತರ ಕರ್ನಾಟಕದ ಜಿಲ್ಲೆಗಳಾದ ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಗದಗ, ಹಾವೇರಿ, ಬೆಳಗಾವಿ ಮತ್ತು ಧಾರವಾಡ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು: ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು. ಜನರಾಡುವ ವಾಡಿಕೆಯ ಮಾತಿನಂತೆ ಇದನ್ನು 'ಗುಲ್ಬರ್ಗದ ಜೇವರ್ಗಿಯ ಜವಾರಿ ತಳಿ' ಎಂದು ಕರೆಯಲಾಗಿದೆ.

ಬಳಕೆಯ ವಿಧ:

ಇದು ದುಡಿಮೆಯ ದನ.

ದೇಹ ಲಕ್ಷಣಗಳು:

ಇವು ಮಧ್ಯಮ ಗಾತ್ರದಿಂದ ಸಣ್ಣ ಗಾತ್ರದ ದನಗಳು. ರೋಗ ನಿರೋಧಕ ಶಕ್ತಿ ಅಧಿಕ. ವಾತಾವರಣದ ವೈಪರೀತ್ಯಗಳಿಗೆ ಹೊಂದಿಕೊಳ್ಳುವಂತಹ ದನಗಳು.

ಇವುಗಳ ಮೈಬಣ್ಣ ಕೆಂಪು, ಕಪ್ಪು, ಬೂದು ಅಥವಾ ಇವೆಲ್ಲವುಗಳ ಮಿಶ್ರಣ. ಕೊಂಬು ಚಿಕ್ಕದು. ಕಾಲುಗಳು ಶಕ್ತಿಯುತವಾಗಿರುತ್ತವೆ. ಹೋಲಿಕೆಯಲ್ಲಿ ಖಿಲಾರಿ ದನಗಳ ರೀತಿಯಲ್ಲಿಯೇ ಕಂಡುಬರುತ್ತವೆ. ಖಿಲಾರಿಗಿಂತ ಹೆಚ್ಚು ಶ್ರಮದಾಯಕ ತಳಿ.

ವಿಶೇಷ ಗುಣಗಳು: ಚಿಕ್ಕದಾದ ಮುಖ

ಪರ್ಯಾಯ ಹೆಸರುಗಳು: ದೇಸಿ ತಳಿ, ನಾಟಿ ತಳಿ.

ಇತರೆ ಚಾರಿತ್ರಿಕ ಮಾಹಿತಿ:

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡು ಬರುವ ದೇಸಿ ದನಗಳ ತಳಿಯನ್ನು ಜವಾರಿ ಎಂದು ಕರೆಯಲಾಗಿದೆ.

ಈ ತಳಿಯ ನಿರ್ದಿಷ್ಟ ಗುಣಲಕ್ಷಣಗಳನ್ನು ವಿಜ್ಞಾನಿಗಳು ಅಧ್ಯಯನ ಮಾಡಿ ಆಧುನಿಕ ಪಠ್ಯ ಪುಸ್ತಕಗಳಲ್ಲಿ ಸ್ಥಾನವನ್ನು ಕಲ್ಪಿಸಿಕೊಡಬೇಕಿದೆ.


ಖಿಲಾರಿ

ತಳಿಯ ಹೆಸರು : ಖಿಲಾರಿ

ಉಗಮ ಸ್ಥಳ : ಮಹಾರಾಷ್ಟ್ರದ ಶೋಲಾಪುರ ಮತ್ತು ಸಿತಾಪುರ ಜಿಲ್ಲೆಗಳು ಹಾಗೂ ಸಾತ್ಪುರ ಬೆಟ್ಟ ಪ್ರದೇಶ. ಹೀಗಾಗಿ ಈ ತಳಿಯನ್ನು 'ಮಹಾರಾಷ್ಟ್ರದ ಖಿಲಾರ್' ಎಂದೇ ಕರೆಯಲಾಗುತ್ತದೆ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಈ ತಳಿಯು ಕರ್ನಾಟಕದ ಹಳ್ಳಿಕಾರ್ ತಳಿಯಿಂದ ಸಂಕರಣಗೊಂಡ ತಳಿಯೂ ಆಗಿರಬಹುದು ಎಂಬ ಅಂದಾಜು ಇದೆ.

ಕಂಡು ಬರುವ ಪ್ರದೇಶಗಳು: ಕರ್ನಾಟಕದ ಬೆಳಗಾವಿ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ನಮ್ಮ ರಾಜ್ಯದಲ್ಲಿ ಇವುಗಳ ಸಂಖ್ಯೆ 2.90 ಲಕ್ಷಗಳು. ಕರ್ನಾಟಕಕ್ಕೆ ಅಂಟಿಕೊಂಡಿರುವ ಮಹಾರಾಷ್ಟ್ರದ ಕೆಲವು ಜಿಲ್ಲೆಗಳಲ್ಲಿ ಇವು ಹರಡಿಕೊಂಡಿವೆ.



ಖಿಲಾರಿ ಹೋರಿ

ಬಳಕೆಯ ವಿಧ: ಖಿಲಾರಿ ಒಂದು ದುಡಿಮೆಯ ತಳಿ. ಕೃಷಿ ಚಟುವಟಿಕೆಗಳಿಗೆ ಈ ತಳಿಯಿಂದಾಗುವ ಉಪಯೋಗಗಳು ಅಧಿಕ. ಸಿಟ್ಟಿನ ಸ್ವಭಾವದ ಈ ತಳಿಗಳು ಶ್ರಮದಾಯಕ ಕೆಲಸಗಳನ್ನು ನಿರ್ವಹಿಸುತ್ತವೆ. ಹಳ್ಳಿಕಾರ್ ಹಸುವಿಗಿಂತ ಕೊಂಚ ಹೆಚ್ಚು ಹಾಲನ್ನು ಕೊಡುತ್ತವೆ. ಅತ್ಯುತ್ತಮ ಹಸುಗಳು ಒಂದು ಕರಾವಿನಲ್ಲಿ 900 ರಿಂದ 1000 ಲೀಟರುಗಳಷ್ಟು ಹಾಲನ್ನು ಕೊಡುತ್ತವೆ.

ದೇಹ ಲಕ್ಷಣಗಳು:

ಇದರ ಬಣ್ಣ ಬಿಳಿ ಮಿಶ್ರಿತ ಬೂದು ಬಣ್ಣ. ಹೊಟ್ಟೆ ಕೊಳವೆಯಾಕಾರದಲ್ಲಿರುತ್ತದೆ. ದುಂಡಗಿನ ಮೈಕಟ್ಟು, ತೆಳ್ಳನೆಯ ಉದ್ದದ ಮುಖ, ಚಿಕ್ಕದಾದ ಕಣ್ಣುಗಳು ಮತ್ತು ಕುರುಚು ಕತ್ತಿನ ತಳಿಯಿದು. ಚರ್ಮ ಮೈಗೆ ಬಿಗಿಯಾಗಿ ಅಂಟಿಕೊಂಡಿರುತ್ತದೆ. ಹಿಂಗಾಲುಗಳು ಹೆಚ್ಚು ಸ್ನಾಯುಯುತವಾದವುಗಳು. ಹೊಳಪಿನ ನವಿರು ರೋಮಗಳು ಖಿಲಾರಿ ತಳಿಯ ವಿಶೇಷ.

ಮುಖ ಉಬ್ಬಿರುತ್ತದೆ. ಕಿವಿಗಳು ಸಣ್ಣವು. ಕಿವಿಯ ತುದಿ ಚೂಪಾಗಿರುತ್ತವೆ. ಗೊರಸುಗಳು ಕಪ್ಪು. ಬಾಲದ ತುದಿಯೂ ಕಪ್ಪು. ಉದ್ದವಾದ ಕಾಲುಗಳು ಬಲವಾದ ಸ್ನಾಯುಗಳಿಂದ ಕೂಡಿರುತ್ತವೆ. ದೇಹ ತೂಕ 300ರಿಂದ 600 ಕಿಲೋ ಗ್ರಾಂಗಳವರೆಗಿರುತ್ತದೆ.

ವಿಶೇಷ ಗುಣಗಳು: ಈ ತಳಿಯ ಕರುಗಳು ಹುಟ್ಟಿದಾಗ ನೆತ್ತಿಯ ಭಾಗ ಕೆಂಪಾಗಿದ್ದು ಕ್ರಮೇಣ ಬಿಳಿಯಾಗುತ್ತದೆ. ಇದರ ನಡಿಗೆ ಅತ್ಯಂತ ಬಿರುಸಿನ ನಡಿಗೆ

ಪರ್ಯಾಯ ಹೆಸರುಗಳು: ಕಿಲಾರಿ, ಶಿಕಾರಿ, ಮಂದೇಶಿ ಮತ್ತು ತಿಲ್ಲಾರಿ. ಮಹಾರಾಷ್ಟ್ರ ರಾಜ್ಯದಲ್ಲಿ ಈ ತಳಿಯ ನಾಲ್ಕು ಬಗೆಗಳಿವೆ. ಅವೆಂದರೆ:

1. ಹನಂ ಖಿಲಾರ್ ಅಥವಾ ಹತ್ವಡಿ ಮಹಲ್
2. ಮಾಸ್ವಾಡ್ ಖಿಲಾರಿ
3. ತಪಿ ಖಿಲಾರಿ ಅಥವಾ ತಿಲ್ಲಾರಿ
4. ನಕಲಿ ಖಿಲಾರಿ : ಇದು ಇತ್ತೀಚೆಗೆ ಸಂಕರಣಗೊಂಡಿರಬಹುದಾದ ತಳಿ.

ಇತರೆ ಚಾರಿತ್ರಿಕ ಮಾಹಿತಿ: ಈ ದನಗಳನ್ನು ಕಿಲಾರರು ಎಂಬ ಗೊಲ್ಲರು ಮೊದಲು ಸಾಕುತ್ತಿದ್ದುದರಿಂದ ಈ ದನಕ್ಕೆ ಕಿಲಾರಿ ಎಂಬ ಹೆಸರು ಬಂದಿರಬಹು ದೆಂಬುದು ಒಂದು ಅಂದಾಜು. ಮಹಾರಾಷ್ಟ್ರದ ಸಾತ್ಪುರ ಬೆಟ್ಟಸಾಲುಗಳಲ್ಲಿ ತಿಲ್ಲಾರಿ ಎಂಬ ಗಿರಿಜನರು ಈ ತಳಿಗಳನ್ನು ಸಾಕಿ ಪೋಷಿಸಿ ಕಾಪಾಡಿಕೊಂಡು ಬಂದಿರುವು ದರಿಂದ ಇದಕ್ಕೆ ಅಲ್ಲಿ ತಿಲ್ಲಾರಿ ಎಂಬ ಹೆಸರು ಕೂಡ ಬಂದಿದೆ. ಕೃಷಿಕರು ಈ ತಳಿಗಳನ್ನು ಸಂತಾನೋತ್ಪತ್ತಿಗೆ ಒಳಪಡಿಸುತ್ತಾ ಅವುಗಳ ಹಿಂಡುಗಳನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಶ್ರೀಲಂಕಾದಲ್ಲಿನ ಜಾನುವಾರು ತಳಿಗಳ ಅಭಿವೃದ್ಧಿಗಾಗಿ ಇವುಗಳನ್ನು ಅಲ್ಲಿಗೆ ಆಮದು ಮಾಡಿಕೊಳ್ಳಲಾಗಿದೆ.


ಪುಂಗನೂರು ದನ

ತಳಿಯ ಹೆಸರು : ಪುಂಗನೂರು

ಉಗಮ ಸ್ಥಳ : ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು : ಇಲ್ಲ

ಕಂಡು ಬರುವ ಪ್ರದೇಶಗಳು: ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಪಲಮನೇರು, ಮದನಪಲ್ಲಿ, ವೇಯಲ ಪಾಡುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಅಲ್ಲೊಂದು, ಇಲ್ಲೊಂದು ಪುಂಗನೂರು ತಳಿಯ ದನಗಳು ಕಾಣಸಿಗುತ್ತವೆ. ತಮಿಳು ನಾಡಿನ ವೇಲೂರು ಮತ್ತು ತಿರುವಣ್ಣಾಮಲೈ ಪ್ರಾಂತ್ಯಗಳಲ್ಲಿ ಹಾಗೂ ಕರ್ನಾಟಕದ ಮುಳಬಾಗಿಲು ತಾಲ್ಲೂಕಿನಲ್ಲಿ ಕೂಡ ಕಂಡುಬರುತ್ತವೆ.



ಪುಂಗನೂರು ದನ

ಬಳಕೆಯ ವಿಧ: ದುಡಿಮೆಯ ದನ, ಒಂದು ಕರಾವಿನಲ್ಲಿ 750 ರಿಂದ 1500 ಕಿಲೋಗ್ರಾಂ ಹಾಲು ಕೊಡುವುದು. ಹಾಲಿನ ಜಿಡ್ಡಿನ ಅಂಶ ಶೇ. 4.

ದೇಹ ಲಕ್ಷಣಗಳು: ಇದೊಂದು ಪುಟ್ಟದನ. ಮಲೆನಾಡು ಗಿಡ್ಡಾ ಹಾಗೂ ಕಾಸರಗೋಡು ಗಿಡ್ಡ ತಳಿಯಂತೆ ದೇಹ ಚಿಕ್ಕದು. ಎತ್ತರದಲ್ಲಿ 3 ರಿಂದ 4 ಅಡಿಯವರೆಗಿರುತ್ತವೆ. ದೇಹ ತೂಕ ಸುಮಾರು 150 ರಿಂದ 175 ಕಿಲೋ ಗ್ರಾಂಗಳು. ಮೈಬಣ್ಣವು ಕಪ್ಪು, ಬೂದು ಅಥವಾ ಕಂದು ಬಣ್ಣದಲ್ಲಿರುತ್ತದೆ.

ವಿಶೇಷ ಗುಣಗಳು: ಇದೊಂದು ಗಿಡ್ಡ/ಗುಜ್ಜ ತಳಿ.
ಪರ್ಯಾಯ ಹೆಸರುಗಳು: ಪುಂಗನೂರು ಗಿಡ್ಡಾ.
ಇತರೆ ಮಾಹಿತಿ: ಇಲ್ಲ.

ಕಾಸರಗೋಡು ತಳಿ

ತಳಿಯ ಹೆಸರು : ಕಾಸರಗೋಡು ತಳಿ
ಉಗಮ ಸ್ಥಳ : ಕೇರಳ ರಾಜ್ಯದ ಕಾಸರಗೋಡು ಜಿಲ್ಲೆ.
ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು:

ಈ ತಳಿಯು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಮತ್ತು ಪಕ್ಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಕರ್ನಾಟಕದ ಮಲೆನಾಡು ಗಿಡ್ಡಾ ತಳಿಯ ಸಂತತಿಯೇ ಕೇರಳ ರಾಜ್ಯದಲ್ಲಿ ಮುಂದುವರೆದು

ಹರಡಿಕೊಂಡಿದ್ದು, ಭೌಗೋಳಿಕ ಪ್ರದೇಶದ ಆಧಾರದ ಮೇಲೆ ಕಾಸರಗೋಡು ತಳಿ ಎಂದು ಕರೆಯಲಾಗಿದೆ.

ಬಳಕೆಯ ವಿಧ: ದುಡಿಮೆಯ ತಳಿ

ದೇಹ ಲಕ್ಷಣಗಳು:

ಇದು ಗಾತ್ರದಲ್ಲಿ ಚಿಕ್ಕದು. ಗಿಡ್ಡ ಅಥವಾ ಕುಬ್ಜ ತಳಿ. ಮಲೆನಾಡು ಗಿಡ್ಡಾ ತಳಿಯಂತೆ ಇದೂ ಕೂಡ ದುಡಿಮೆಯ ತಳಿ. ಹಾಗೆಯೇ, ಹೆಚ್ಚಿನ ರೋಗ ನಿರೋಧಕ ಶಕ್ತಿಯನ್ನು ಹೊಂದಿವೆ. ಸೌಮ್ಯ ಸ್ವಭಾವದ ಈ ದನಗಳು ಆಚೀಚೆ ಸಿಗುವ ಹುಲ್ಲು ಕಡ್ಡಿಗಳನ್ನು ತಿಂದು ಬದುಕುತ್ತವೆ. ಕಪ್ಪು, ಕಂದು, ಬೂದು ಬಣ್ಣ ಸರ್ವೇ ಸಾಮಾನ್ಯ. ಅಷ್ಟೇನೂ ಉದ್ದವಲ್ಲದ ಬಾಲ, ಕೊಂಬು ಚಿಕ್ಕದು.

ವಿಶೇಷ ಗುಣಗಳು: ಇದೊಂದು ಗಿಡ್ಡ ತಳಿ.

ಪರ್ಯಾಯ ಹೆಸರುಗಳು: ಕಾಸರಗೋಡು ಗಿಡ್ಡಾ

ಇತರೆ ಚಾರಿತ್ರಿಕ ಮಾಹಿತಿ: ಇಲ್ಲ

ಇತರೆ ರಾಜ್ಯಗಳ ತಳಿಗಳು

ಸಾಹೀವಾಲ ತಳಿ

ತಳಿಯ ಹೆಸರು : ಸಾಹೀವಾಲ

ಉಗಮ ಸ್ಥಳ

ಸಾಹೀವಾಲ ತಳಿಯ ಮೂಲ ಭೌಗೋಳಿಕ ಪ್ರಾಂತ್ಯ ಪಾಕಿಸ್ತಾನದಲ್ಲಿರುವ ಸಾಹೀವಾಲ ಜಿಲ್ಲೆ ಮತ್ತು ಭಾರತದ ಪಂಜಾಬ್ ಜಿಲ್ಲೆ. ಸಾಮಾನ್ಯವಾಗಿ 'ಪಂಜಾಬಿನ ಸಾಹೀವಾಲ' ಎಂದು ಸಂಬೋಧಿಸಲಾಗುವುದು.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇದು ಒಂದು ಮೂಲ ತಳಿ.

ಕಂಡು ಬರುವ ಪ್ರದೇಶಗಳು:

ಪಾಕಿಸ್ತಾನದಲ್ಲಿರುವ ಸಾಹೀವಾಲ ಜಿಲ್ಲೆ ಮತ್ತು ಭಾರತದ ಪಂಜಾಬ್ ಜಿಲ್ಲೆ, ದೆಹಲಿ, ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯ ಪ್ರದೇಶ.

ಬಳಕೆಯ ವಿಧ:

ಇದು ಉತ್ತರ ಭಾರತದ ಅತಿ ಮುಖ್ಯ ಹೈನು ದನದ ತಳಿ. ಹೈನು ದನಗಳೆಂದರೆ ಹಾಲಿನ ಇಳುವರಿಯನ್ನು ಗಮನದಲ್ಲಿಟ್ಟುಕೊಂಡು ಸಾಕಲಾಗುವ ತಳಿಗಳು. ಇಂತಹ ತಳಿಗಳು ಹೆಚ್ಚು ಹಾಲನ್ನು ಕೊಡುತ್ತವೆ.

ಸಾಹಿವಾಲ ತಳಿಯ ಹಸುಗಳು ಒಂದು ಕರಾವಿನಲ್ಲಿ 2,300ರಿಂದ 2,500 ಲೀಟರ್‌ಗಳಷ್ಟು ಹಾಲು ಕೊಡುತ್ತವೆ. ಈ ತಳಿಯ ದನಗಳು ಸೌಮ್ಯ ಸ್ವಭಾವವುಳ್ಳವುಗಳು. ಹೀಗಾಗಿ ದುಡಿಮೆಯ ಕೆಲಸಕ್ಕೂ ಒಗ್ಗಿಕೊಳ್ಳುತ್ತವೆ.


ದೇಹ ಲಕ್ಷಣಗಳು:

ಗಾತ್ರದಲ್ಲಿ ಇವು ಅತ್ಯಂತ ದೊಡ್ಡ ಗಾತ್ರದ ತಳಿಗಳು. ಎತ್ತುಗಳು 500 ರಿಂದ 550 ಕಿಲೋ ಗ್ರಾಂ ಮತ್ತು ಹಸುಗಳು 350 ರಿಂದ 400 ಕಿಲೋ ಗ್ರಾಂ ತೂಗುತ್ತವೆ.

ಇವು ಇರುವ ಪ್ರಾಂತ್ಯದಲ್ಲಿ ಹೆಚ್ಚಿನ ನೀರಾವರಿ ಭೂಪ್ರದೇಶವಿರುವುದರಿಂದ ಇವುಗಳನ್ನು ವ್ಯವಸಾಯಕ್ಕೂ ಬಳಸಲಾಗುತ್ತಿದೆ. ವಿದೇಶಿಯರು ಭಾರತದಿಂದ ಆಮದು ಮಾಡಿಕೊಂಡ ಮುಖ್ಯ ತಳಿಗಳಲ್ಲೊಂದು ಸಾಹಿವಾಲ್. ಭಾರತದ ವಿವಿಧ ತಳಿಗಳನ್ನು ವಿದೇಶಿಗರು ಕೆಲವೊಮ್ಮೆ ಬ್ರಾಹ್ಮನ್ ತಳಿ ಎಂಬ ಸಾಮಾನ್ಯ ಹೆಸರಿನಿಂದ ಕರೆದಿದ್ದಾರೆ.

ಕೆಂಪು ಮಿಶ್ರಿತ ಕಂದು ಬಣ್ಣ ಮತ್ತು ಕೆಂಪು ಬಣ್ಣದ ದನಗಳಿವು. ಕೆಲವುಗಳಲ್ಲಿ ಕತ್ತಿನ ಭಾಗ ಮತ್ತು ಹೊಟ್ಟೆಯ ತಳಭಾಗದಲ್ಲಿ ಬಿಳಿ ಬಣ್ಣದ ಚುಕ್ಕೆಗಳಿರುತ್ತವೆ. ಗಂಡು ದನಗಳಲ್ಲಿ ತಲೆ, ಕಾಲು ಮತ್ತು ಬಾಲದ ಕಡೆ ಬಣ್ಣ ಮಂದಗಾಗುತ್ತಾ ಹೋಗುತ್ತದೆ.

ಕತ್ತಿನ ಕೆಳಭಾಗದಲ್ಲಿ ನೇತಾಡುವ ಗಂಗೆದೊಗಲು ಹೆಚ್ಚು ನೀಳವಾಗಿರುತ್ತದೆ. ಇವು ಹೈನು ತಳಿಗಳಾದ್ದರಿಂದ ಕೆಚ್ಚಲು ದೊಡ್ಡದಾಗಿರುತ್ತದೆ. ಹವಾಮಾನದ ವೈಪರೀತ್ಯಗಳನ್ನು ತಡೆದುಕೊಳ್ಳುವ ಶಕ್ತಿ ಈ ತಳಿಯ ದನಗಳಿಗಿದೆ. ಕರುಗಳು ಅತಿ ಶೀಘ್ರವಾಗಿ ಬೆಳೆಯುತ್ತವೆ.



ಸಾಹೀವಾಲ ಹಸು

ವಿಶೇಷ ಗುಣಗಳು:

ಸಾಹೀವಾಲ್ ತಳಿಯ ದನಗಳು ಕೆಂಪು ಸಿಂಧಿ ತಳಿಯ ರೀತಿಯೇ ಕಂಡು ಬರುತ್ತವೆ. ಅದರೆ ಮುಸುಡಿಯ ಬಣ್ಣದಿಂದ ಕೆಂಪು ಸಿಂಧಿ ಮತ್ತು ಸಾಹೀವಾಲ ತಳಿಗಳನ್ನು ಬೇರ್ಪಡಿಸಿ ಪತ್ತೆ ಹಚ್ಚಿಕೊಳ್ಳಬಹುದು. ಕೆಂಪು ಸಿಂಧಿಗೆ ಕಪ್ಪು ಬಣ್ಣದ ಮುಸುಡಿಯಿದ್ದರೆ ಸಾಹೀವಾಲ ತಳಿಗೆ ಹಗುರ ಅಥವಾ ತಿಳಿ ಬಣ್ಣದ ಮುಸುಡಿ ಯಿರುತ್ತದೆ.

ಪರ್ಯಾಯ ಹೆಸರುಗಳು:

ಶಾಹಿವಾಲ್, ಸಾಹಿವಾಲ್, ಮುಲ್ತಾನಿ, ಮಾಂಟ್ಗೋಮೆರಿ, ಲಂಬಿ ಬಾರ್ ಮತ್ತು ಲೋಲಾ ಎಂಬ ಹೆಸರುಗಳೂ ಈ ತಳಿಗಿವೆ. ಪಾಕಿಸ್ತಾನದ ಮಾಂಟ್ಗೋಮೇರಿ ಜಿಲ್ಲೆ ಈ ತಳಿಯ ಮುಖ್ಯ ತವರು. ಅದಕ್ಕೆಂದೇ ಆ ಹೆಸರು. ಮೈಚರ್ಮ ಜಗ್ಗಿ, ಜೋತಾಡುವುದರಿಂದ 'ಲೋಲಾ' ಎಂದು ಕರೆಯಲಾಗಿದೆ.

ಇತರೆ ಚಾರಿತ್ರಿಕ ಮಾಹಿತಿ:

ಈ ತಳಿಗಳನ್ನು ಜಂಗಲರು (ಜಂಗಾಲಿಗರು) ಎಂಬ ವೃತ್ತಿಪರ ದನಗಾರರು ದೊಡ್ಡ ದೊಡ್ಡ ಹಿಂಡುಗಳನ್ನು ಕಟ್ಟಿಕೊಂಡು ಪಾಲನೆ, ಪೋಷಣೆ, ತಳಿ ಸಂವರ್ಧನೆ ಮಾಡಿದ್ದಾರೆ.

ಬ್ರಾಹ್ಮನ್ ತಳಿಗಳನ್ನು ವಿದೇಶಿಯರು ಅಲ್ಲಿಯ ದನಗಳೊಂದಿಗೆ ಸಂಕರಣ ಮಾಡಿಕೊಂಡು ಉತ್ತಮ ರೋಗ ನಿರೋಧಕ ತಳಿಗಳನ್ನು ರೂಪಿಸಿಕೊಂಡಿದ್ದಾರೆ. ಉದಾಹರಣೆಗೆ, ಭಾರತದ ಬ್ರಾಹ್ಮನ್ ದನವು ಅಮೇರಿಕಾದ ಆಂಗಸ್ ದನದೊಂದಿಗೆ ಸಂಕರಣಗೊಂಡು ಹೊಸದಾದ ಬ್ರಾಂಗಸ್ ತಳಿಯಾಗಿದೆ. ಹೀಗೆ ನಮ್ಮ ತಳಿಗಳು ದೇಶ ವಿದೇಶಗಳಲ್ಲಿಯ ದನದ ತಳಿಗಳಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳಲಾಗುವ ದನಗಳಾಗಿವೆ.

ಇದೇ ತಳಿಯನ್ನು ಜಮೈಕಾದ ಸ್ಥಳೀಯ ತಳಿಯೊಂದಿಗೆ ಸಂಕರಣಗೊಳಿಸಿ ಅದಕ್ಕೆ ಜಮೈಕಾ ಹೋಪ್ ಬ್ರೀಡ್ (ಜಮೈಕಾ ಆಶಯ ತಳಿ) ಎಂಬ ಹೆಸರನ್ನಿಡಲಾಗಿದೆ.

ಹರಿಯಾಣ ತಳಿ

ತಳಿಯ ಹೆಸರು : ಹರಿಯಾಣ

ಉಗಮ ಸ್ಥಳ :

ಹರಿಯಾಣ ರಾಜ್ಯ ಇದರ ತವರು ರಾಜ್ಯ. ಹರಿಯಾಣ ರಾಜ್ಯದ ಹಿಸ್ಸಾರ್, ರೋಹ್ಟಕ್, ಕರ್ನಾಲ್ ಮತ್ತು ಗುರ್‌ಗಾನ್ ಜಿಲ್ಲೆಗಳು ಈ ತಳಿಯ ತವರು ಜಿಲ್ಲೆಗಳು. ಸಿಂಧೂ ಮತ್ತು ಗಂಗಾ ನದಿ ಪಾತ್ರದ ತಳಿ ಇದು.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು:

ಈ ತಳಿಗಳು ಹರ್‍ಯಾಣ ರಾಜ್ಯದ ರೋಹ್ಟಕ್, ಗುರ್‌ಗಾಂವ್ ಮತ್ತು ಹಿಸ್ಸಾರ್ ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿವೆ. ಜತೆಗೆ ಪಂಜಾಬ್, ಉತ್ತರ ಪ್ರದೇಶ, ದೆಹಲಿ, ಮಧ್ಯ ಪ್ರದೇಶ ರಾಜ್ಯಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿವೆ.


ಬಳಕೆಯ ವಿಧ:

ಹರಿಯಾಣ ತಳಿಯ ದನಗಳನ್ನು ವ್ಯವಸಾಯದ ಚಟುವಟಿಕೆಗಳಿಗೆ ಮತ್ತು ಹಾಲು ಉತ್ಪಾದನೆಗೆ ಬಳಸುವುದರಿಂದ ಉಭಯ ಉದ್ದೇಶದ ತಳಿಗಳೆಂದು ವರ್ಗೀಕರಿಸ ಲಾಗಿದೆ. ಸರಾಸರಿ ಒಂದು ಕರಾವಿನಲ್ಲಿ 1400 ಲೀಟರ್ ಹಾಲು ಕರೆಯುತ್ತವೆ.

ದೇಹ ಲಕ್ಷಣಗಳು:

ಇವು ಸಾಧಾರಣದಿಂದ ದೊಡ್ಡ ಗಾತ್ರದ ದನಗಳು. ಒಂದು ಹಸುವಿನ ತೂಕ 300 ರಿಂದ 350 ಕಿಲೋ ಗ್ರಾಂ ಇದ್ದರೆ ಎತ್ತಿನ ತೂಕ 400 ರಿಂದ 450 ಕಿಲೋ ಗ್ರಾಂ ಇರುತ್ತದೆ. ಹರಿಯಾಣ ದನಕ್ಕೆ ಕುರುಚಾದ ಕೊಂಬುಗಳು ಇರುತ್ತವೆ.

ಮೈ ಬಣ್ಣವು ಬಿಳಿ ಅಥವಾ ಬೂದು. ಹೋರಿಗಳಲ್ಲಿ ಕತ್ತಿನ ಭಾಗ ಕಪ್ಪಾಗಿರುತ್ತದೆ. ಕೆಲ ಹೋರಿಗಳಲ್ಲಿ ಹಿಂಗಾಲುಗಳ ಚಪ್ಪೆಯ ಭಾಗವು ಕಪ್ಪು. ಇದರ ಮೂತಿ, ಕಣ್ಣು ಮತ್ತು ಬಾಲದ ತುದಿ ಇನ್ನಷ್ಟು ಕಪ್ಪು.



ಹರಿಯಾಣ ತಳಿಯ ಹಸು

ಉದ್ದ ಹಾಗೂ ನೀಳ ಮುಖ, ಚಿಕ್ಕ ಕಿವಿಗಳು, ಉದ್ದವಾದ ಹಾಗೂ ತೆಳ್ಳನೆಯ ಕಾಲುಗಳು, ಮತ್ತು ಚಿಕ್ಕ ಬಾಲ ಈ ತಳಿಯ ಬಾಹ್ಯ ದೇಹ ಗುಣಗಳು.

ವಿಶೇಷ ಗುಣಗಳು: ಕುರುಚಲು ಬಾಲ.

ಪರ್ಯಾಯ ಹೆಸರುಗಳು: ಇಲ್ಲ.

ಇತರೆ ಚಾರಿತ್ರಿಕ ಮಾಹಿತಿ: ಹರಿಯಾಣ ದನಗಳು ಉತ್ತರ ಭಾರತದಲ್ಲೆಲ್ಲಾ ಕಂಡುಬರುತ್ತವೆ.

ಒಂಗೋಲ್ ತಳಿ

ತಳಿಯ ಹೆಸರು : ಒಂಗೋಲ್


ಉಗಮ ಸ್ಥಳ :

ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ಒಂಗೋಲ್ ತಾಲ್ಲೂಕಿನಲ್ಲಿ ಪ್ರಮುಖವಾಗಿ ಕಂಡು ಬರುವ ತಳಿಗಳು ಇವು. ನಮ್ಮ ಪಕ್ಕದ ರಾಜ್ಯವಾದ ಆಂಧ್ರ ಪ್ರದೇಶದ ತಳಿ ಇದು. ಆಂಧ್ರದ ನೆಲ್ಲೂರು ಜಿಲ್ಲೆ ಕೂಡ ಈ ತಳಿಯ ಉಗಮ ಸ್ಥಾನ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು:

ಕೃಷ್ಣಾ ಮತ್ತು ಗೋದಾವರಿ ನದಿ ಪಾತ್ರದ ತಳಿಗಳು ಈ ಒಂಗೋಲ್ ತಳಿಗಳೆಂದು ಹೆಸರುವಾಸಿಯಾಗಿವೆ. ಆಂಧ್ರಪ್ರದೇಶದ ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ಒಂಗೋಲ್ ತಳಿಗಳ ಸಂಖ್ಯೆ ಹೆಚ್ಚಿಗಿವೆ.



ಒಂಗೋಲ್ ತಳಿ

ಬಳಕೆಯ ವಿಧ:

ಇದು ದುಡಿಮೆಯ ತಳಿ. ಮೈ ಬಣ್ಣ ಅಚ್ಚ ಬಿಳಿಯ ಬಣ್ಣ. ಹೆಚ್ಚು ಹಾಲು ಕೊಡುವ ತಳಿಯೂ ಹೌದು ಮತ್ತು ಉತ್ತಮ ಕೆಲಸಗಾರ ತಳಿಯೂ ಹೌದು.

ದಿನಕ್ಕೆ 10 ಲೀಟರ್‌ವರೆಗೆ ಹಾಲು ಕೊಡುತ್ತವೆ. ಒಂದು ಕರಾವಿನ ಹಾಲಿನ ಇಳುವರಿ

1200 ರಿಂದ 2200 ಕಿಲೋ ಗ್ರಾಂಗಳವರೆಗೆ ಇರುತ್ತದೆ. ಕರು ಹಾಕಿದ ಮೇಲೆ 180 ದಿನಗಳವರೆಗೆ ಹಾಲು ಕೊಡುತ್ತವೆ. ನೆಲ್ಲೂರು ತಳಿ ಎಂದೂ ಇದನ್ನು ಗುರುತಿಸಲಾಗುತ್ತದೆ.

ದೇಹ ಲಕ್ಷಣಗಳು:

ಇವುಗಳ ಗಂಗೆ ದೊಗಲು ದೊಡ್ಡದು, ಕಾಲುಗಳು ಚಿಕ್ಕವು. ಕುರುಚಾದ ಕತ್ತು. ಉದ್ದವಾದ ಮತ್ತು ಜೋತಾಡುವ ಕಿವಿಗಳು. ಕೊಂಬುಗಳು ಸಣ್ಣವು. ಹೆಗಲು ಚೆನ್ನಾಗಿ ಬೆಳೆದಿರುತ್ತದೆ. ದಪ್ಪವಾದ ದೇಹ, ಎತ್ತರವಾದ ಭುಜ ಈ ತಳಿಯ ಇತರ ಗುಣಗಳು. ಮಾಂಸ ಖಂಡಗಳಿಂದ ಮೈ ತುಂಬಿದ ದೇಹ.

ಈ ತಳಿಗಳನ್ನು ಬೇಸಾಯ ಮತ್ತು ಹಾಲು ಉತ್ಪಾದನೆಗಾಗಿ ಸಾಕಲಾಗುತ್ತದೆ. ಇವು ಮೃದು ಸ್ವಭಾವದ ದನಗಳಾದರೂ ಚುರುಕಿನ ಮತ್ತು ಶಕ್ತಿಯುತ ಹುಮ್ಮಸ್ಸಿನ ಗುಣಗಳನ್ನು ಹೊಂದಿವೆ.

ಹವಾಮಾನದ ವೈಪರೀತ್ಯಗಳಲ್ಲಿ ತಮ್ಮ ದೇಹ ಕ್ರಿಯೆಗಳನ್ನು ಸಮತೋಲನದಲ್ಲಿ ಇಟ್ಟುಕೊಳ್ಳುವ ದಕ್ಷತೆ ಈ ದನಗಳಿಗಿದೆ. ಸೆಕೆ ಗ್ರಂಥಿಗಳ ಸಂಖ್ಯೆ, ಗಾತ್ರ ಮತ್ತು ಅವುಗಳ ಕ್ರಿಯಾಶೀಲತೆ ಹೆಚ್ಚಾಗಿರುವುದರಿಂದ ಹವಾಮಾನದ ವೈಪರೀತ್ಯಗಳನ್ನು ನಿಭಾಯಿಸಿಕೊಳ್ಳುತ್ತವೆ. ದೇಹ ತೂಕ 400ರಿಂದ 650 ಕಿಲೋ ಗ್ರಾಂಗಳವರೆಗೆ ಇರುತ್ತದೆ.

ವಿಶೇಷ ಗುಣಗಳು:

ಒಂಗೋಲ್ ತಳಿಗಳು ಕಣ್ಣಿನ ಕ್ಯಾನ್ಸರ್‌ಗೆ ನಿರೋಧಕತೆಯನ್ನು ಹೊಂದಿವೆ.

ಪರ್ಯಾಯ ಹೆಸರುಗಳು:

ನೆಲ್ಲೂರ್ ದನ ಮತ್ತು ಪದಾಕತೀರು.

ಇತರೆ ಚಾರಿತ್ರಿಕ ಮಾಹಿತಿ:

ಮಧ್ಯ ಏಷ್ಯಾದ ಹುಲ್ಲುಗಾವಲುಗಳಿಂದ ಭಾರತಕ್ಕೆ ಬಂದ ಆರ್ಯನ್ನರು ತಮ್ಮ ಮಾರ್ಗ ಮಧ್ಯೆ ಬಿಟ್ಟು ಹೋದ ತಳಿಗಳಿವು ಎಂಬ ನಂಬಿಕೆಯನ್ನು ಇಟ್ಟುಕೊಳ್ಳಲಾಗಿದೆ.

ಬ್ರೆಜಿಲ್‌ನಲ್ಲಿ ಹೆಚ್ಚು ಹೆಸರುವಾಸಿಯಾದ ಮಾಂಸ ಉತ್ಪಾದನೆಯ ತಳಿ. ಬ್ರೆಜಿಲ್‌ನಲ್ಲಿ ಇಂದಿಗೂ ಒಂಗೋಲ್ ತಳಿಯ ನಿಜ ದನಗಳು ದೊಡ್ಡ ದೊಡ್ಡ ಹಿಂಡುಗಳಲ್ಲಿ ಲಭ್ಯ.

ಹತ್ತೊಂಬತ್ತನೇ ಶತಮಾನದಲ್ಲಿ ಈ ತಳಿಯ ದನಗಳು ವಿದೇಶಗಳಾದ ಅಮೆರಿಕಾ, ಬ್ರೆಜಿಲ್, ಫಿಜಿ, ಜಮೈಕಾ, ಆಸ್ಟ್ರೇಲಿಯಾ, ಮಲೇಶಿಯಾ, ಶ್ರಿಲಂಕಾ ಮುಂತಾದ ದೇಶಗಳಿಗೆ ರಫ್ತಾಗಿವೆ.

ಥರಪಾರ್ಕರ್

ತಳಿಯ ಹೆಸರು : ಥರಪಾರ್ಕರ್

ಉಗಮ ಸ್ಥಳ : ಪಾಕಿಸ್ತಾನದ ಹೈದರಾಬಾದ್ ಪ್ರಾಂತ್ಯದ ಥರಪಾರ್ಕರ್ ಜಿಲ್ಲೆ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಈ ತಳಿಯನ್ನು ಕಾಂಕ್ರೇಜ್, ಸಿಂಧಿ, ಗಿರ್ ಮತ್ತು ನಾಗೋರಿ ತಳಿಗಳ ಸಂಕರಣದಿಂದ ಪಡೆದುಕೊಳ್ಳಲಾಗಿದೆ.

ಕಂಡು ಬರುವ ಪ್ರದೇಶಗಳು: ರಾಜಾಸ್ಥಾನದ ಥಾರ್ ಮರುಭೂಮಿಯ ದನವೇ ಥಾರ್‌ಪಾರ್ಕರ್ ಎಂದೂ ಹೇಳಲಾಗುತ್ತದೆ.

ಬಳಕೆಯ ವಿಧ: ಇದು ಹಾಲಿನ ತಳಿ. ಈ ತಳಿಯ ದನಗಳು ಅಧಿಕ ಹಾಲು ಕೊಡುತ್ತವೆ. ಶ್ರಮದ ಕೆಲಸವನ್ನು ನಿಭಾಯಿಸುತ್ತವೆ. ಒಂದು ಕರಾವಿನ ಸರಾಸರಿ ಹಾಲಿನ ಇಳುವರಿ 1500 ಕಿಲೋ ಗ್ರಾಂಗಳು.



ಥರಪಾರ್ಕರ್

ದೇಹ ಲಕ್ಷಣಗಳು:

ಮೈ ಬಣ್ಣವು ಬೂದು ಅಥವಾ ಬಿಳಿಯ ಬಣ್ಣದ್ದಾಗಿರುತ್ತದೆ. ಮಧ್ಯಮ ಗಾತ್ರದ ತಳಿಯಿದು. ಕಾಲುಗಳು ಚಿಕ್ಕವು ಮತ್ತು ಶಕ್ತಿಯುತವಾದವುಗಳು. ಅಗಲವಾದ ಹಣೆ, ಚಿಕ್ಕ ಕೊಂಬುಗಳು, ಜೋತಾಡುವ ಗಂಗೆದೊಗಲು, ಕಪ್ಪು ಕುಚ್ಚಿನ ಬಾಲ ಈ ತಳಿಯ ಇತರೆ ವಿಶೇಷಗಳು. ದೇಹತೂಕವು 300 ರಿಂದ 500 ಕಿಲೋ ಗ್ರಾಂಗಳವರೆಗೆ ಇರುತ್ತದೆ.

ವಿಶೇಷ ಗುಣಗಳು: ಉದ್ದವಾದ ಮುಖ.

ಪರ್ಯಾಯ ಹೆಸರುಗಳು: ಥಾರ್ ಪಾರ್ಕರ್, ಥರಿ, ಕಂದು ಸಿಂಧಿ ಮತ್ತು ಬಿಳಿ ಸಿಂಧಿ.

ಇತರೆ ಚಾರಿತ್ರಿಕ ಮಾಹಿತಿ:

ಇರಾಕ್, ಶ್ರೀಲಂಕಾ, ಝ್ಯುರೆ, ಫಿಲಿಪ್ಪೈನ್ಸ್‌ನಂತಹ ರಾಷ್ಟ್ರಗಳಿಗೆ ರಫ್ತಾಗಿರುವ ತಳಿಯಿದು.

ಡಾಂಗಿ

ತಳಿಯ ಹೆಸರು : ಡಾಂಗಿ

ಉಗಮ ಸ್ಥಳ :

ನೆರೆಯ ಮಹಾರಾಷ್ಟ್ರದ ನಾಸಿಕ್ ಮತ್ತು ಅಹಮದ್‌ನಗರ ಜಿಲ್ಲೆಗಳ ಬೆಟ್ಟ ಗುಡ್ಡ ಪ್ರದೇಶಗಳಲ್ಲಿರುವ ದುಡಿಮೆಗೆ ಹೆಸರಾದ ತಳಿ. ಅತಿ ಹೆಚ್ಚು ಮಳೆ ಬೀಳುವ ಈ ಪ್ರದೇಶಗಳಲ್ಲಿ ಕಠಿಣ ಕೆಲಸವನ್ನು ಚುರುಕಿನಿಂದ ಮಾಡುತ್ತವೆ. ಈ ತಳಿಯು 'ಮಹಾರಾಷ್ಟ್ರದ ಡಾಂಗಿ' ಎಂದು ಪ್ರಸಿದ್ಧಿ ಪಡೆದಿದೆ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು: ಮಹಾರಾಷ್ಟ್ರದ ಕೆಲ ಜಿಲ್ಲೆಗಳು.

ಬಳಕೆಯ ವಿಧ:

ಉಭಯ ಉದ್ದೇಶದ ತಳಿ. ಗದ್ದೆ ಬಯಲುಗಳಲ್ಲಿ ತ್ರಾಸದಾಯಕ ಕೆಲಸಗಳನ್ನು ಛಲದಿಂದ ನಿರ್ವಹಿಸುತ್ತವೆ. ಕೇವಲ ಹಸಿರು ಬಯಲುಗಳಲ್ಲಿ ಮೇಯುತ್ತಾ ಜೀವನ ನೂಕುತ್ತವೆ. ಹೆಚ್ಚುವರಿ ಮೇವು ಆಹಾರದ ಅಗತ್ಯ ಬೇಕಾಗುವುದಿಲ್ಲ. ಭಾರ ಹೊರುವ ಕೆಲಸಗಳನ್ನೂ ಮಾಡುತ್ತವೆ.

ದೇಹ ಲಕ್ಷಣಗಳು:

ಮೈ ಬಣ್ಣ ಬಿಳಿಯದು. ಈ ಬಿಳಿಯ ಬಣ್ಣದಲ್ಲಿ ಕಪ್ಪು ಅಥವಾ ಕೆಂಪು

ಚುಕ್ಕೆಗಳು ಇರುತ್ತವೆ. ಗಾತ್ರದಲ್ಲಿ ಸಾಧಾರಣದಿಂದ ದೊಡ್ಡ ಗಾತ್ರ, ನೆಲಮಟ್ಟದಿಂದ ಹೆಗಲಿನ ಹಿಂದಿನ ಬಿಂದುವಿನವರೆಗಿನ ಎತ್ತರ 45ರಿಂದ 50 ಇಂಚು. ಕೊಂಬುಗಳು ದಪ್ಪವಾದರೂ ಉದ್ದದಲ್ಲಿ ಕುರುಚಲು. ಚಿಕ್ಕ ಚಿಕ್ಕ ಕಾಲುಗಳು. ಮುಂಭುಜ ಮತ್ತು ಹಿಂಭುಜ ಶಕ್ತಿ ಶಾಲಿಯಾಗಿರುತ್ತವೆ. ಕಾಲಿನ ಗೊರಸುಗಳು ಗಟ್ಟಿಯಾಗಿ ಕಪ್ಪಾಗಿರುತ್ತವೆ. ನೇತಾಡುವ ಗಂಗೆದೊಗಲು. ದೇಹತೂಕ 300ರಿಂದ 450 ಕಿಲೋ ಗ್ರಾಂಗಳು.


ವಿಶೇಷ ಗುಣಗಳು:

ಮಳೆಯ ಒದ್ದೆಯಿಂದ ರಕ್ಷಿಸಿಕೊಳ್ಳಲು ಈ ತಳಿಯು ವಿಶೇಷ ಗುಣವನ್ನು ಹೊಂದಿದೆ. ಚರ್ಮದಿಂದ ಒಸರುವ ಜಿಡ್ಡಿನಿಂದ ಕೂಡಿದ ದ್ರವ ದೇಹವನ್ನು ಮಳೆಯಿಂದಾಗುವ ಒದ್ದೆಯಿಂದ ರಕ್ಷಿಸುತ್ತದೆ.

ಡಾಂಗಿ ತಳಿಯು ಕರ್ನಾಟಕದ ದೇವಣಿ ತಳಿಯಂತೆ ಕಂಡುಬರುತ್ತದೆ.

ಪರ್ಯಾಯ ಹೆಸರುಗಳು: ದನಗಿ ತಳಿ.

ಇತರೆ ಚಾರಿತ್ರಿಕ ಮಾಹಿತಿ: ಮಹದೇವ್ ಕಿಲಿ, ಕನ್ನಡಿ ಮತ್ತು ಥಾಕೂರ್ ಎಂಬ ಗೊಲ್ಲರು ಈ ತಳಿಯನ್ನು ರೂಪಿಸಿದ್ದಾರೆ ಎಂಬ ಪ್ರತೀತಿಯಿದೆ.



ಡಾಂಗಿ ಎತ್ತು

ಕಾಂಕ್ರೇಜ್

ತಳಿಯ ಹೆಸರು : ಕಾಂಕ್ರೇಜ್

ಉಗಮ ಸ್ಥಳ :

ಕಾಂಕ್ರೆಜ್ ಎಂಬ ಹೆಸರು ಒಂದು ಸ್ಥಳಜನಕ ಹೆಸರು. ಇದು ಗುಜರಾತ್ ಪ್ರಾಂತ್ಯದಲ್ಲಿದೆ. ಈ ತಳಿಯು ಒನಸ್ ಮತ್ತು ಸರಸ್ವತಿ ನದೀ ಪಾತ್ರದ ತಳಿ. ಇದನ್ನು ಭಾರತದ ಅತ್ಯಂತ ಪ್ರಾಚೀನ ದೊಡ್ಡ ಗಾತ್ರದ ಹಾಗೂ ಬಲಿಷ್ಠ ತಳಿ ಎಂದು ತಿಳಿಯಲಾಗಿದೆ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇದೊಂದು ಪ್ರಾಚೀನ ತಳಿ.

ಬಳಕೆಯ ವಿಧ:

ಉಭಯ ಉದ್ದೇಶದ ತಳಿಯಿದು. ಎತ್ತುಗಳು ಹೆಚ್ಚು ಬೆಲೆ ಬಾಳುತ್ತವೆ. ಹಸುಗಳು ಒಂದು ಕರಾವಿನಲ್ಲಿ 1400 ರಿಂದ 1500 ಕಿಲೋ ಗ್ರಾಂಗಳವರೆಗೆ ಹಾಲು ಕರೆಯುತ್ತವೆ.

ದೇಹ ಲಕ್ಷಣಗಳು:

ಇದರ ಬಣ್ಣ ಬೂದು ಅಥವಾ ನಸು ಕಪ್ಪು. ಆಗ ತಾನೇ ಹುಟ್ಟಿದ ಕರುಗಳಲ್ಲಿ ಕೊಂಬು ಹುಟ್ಟುವ ಜಾಗವು ಕೆಂಪಾಗಿದ್ದು ಆ ಕೆಂಪು ಬಣ್ಣವು ಮುಂದೆ ಆರೇಳು ತಿಂಗಳುಗಳಲ್ಲಿ ಕಣ್ಮರೆಯಾಗುತ್ತದೆ.

ಬೆಳೆದ ದನಗಳಲ್ಲಿ ಕೊಂಬು ಗಟ್ಟಿಯಾಗಿ ನೀಳವಾಗಿರುತ್ತದೆ. ಇಷ್ಟೊಂದು ಉದ್ದದ ಹಾಗೂ ಅಗಲವಾದ ಕೊಂಬುಗಳು ಬೇರಾವುದೇ ತಳಿಯಲ್ಲಿ ಕಂಡು ಬರುವುದಿಲ್ಲ. ಮುಖ ಚಿಕ್ಕದು. ಮೂಗು ಮೇಲಕ್ಕೆ ಉಬ್ಬಿರುತ್ತದೆ. ನೇತಾಡುವ ನೀಳವಾದ ಕಿವಿಗಳು. ಕಾಲುಗಳು ರಾಜ ಗಾಂಭೀರ್ಯದಿಂದ ಕೂಡಿದಂತೆ ದಷ್ಟ ಪುಷ್ಟವಾಗಿರುತ್ತವೆ. ಗಂಗೆದೊಗಲು ನೀಳವಾಗಿ ಜೋತಾಡುತ್ತಿರುತ್ತದೆ. ಡುಬ್ಬ ದೊಡ್ಡದು. ಉಣ್ಣೆಗಳ ಕಾಟಕ್ಕೆ ಈ ದನಗಳು ರೋಗನಿರೋಧಕ ಶಕ್ತಿಯನ್ನು ಹೊಂದಿವೆ. ಸೋಂಕಿನಿಂದಾಗುವ ಕಂದು ಹಾಕುವಿಕೆ ಮತ್ತು ಕ್ಷಯರೋಗದ ಸೋಂಕು ಈ ದನಗಳಲ್ಲಿ ಅತ್ಯಂತ ಕಮ್ಮಿ. ದೇಹತೂಕ 300ರಿಂದ 550 ಕಿಲೋ ಗ್ರಾಂಗಳವರೆಗಿರುತ್ತದೆ.

ಕಂಡು ಬರುವ ಪ್ರದೇಶಗಳು:


ಪಶ್ಚಿಮ ಭಾರತದ ರಾಜ್ಯಗಳಾದ ಗುಜರಾತ್ ಮತ್ತು ರಾಜಾಸ್ಥಾನದ ತಳಿ. ಗುಜರಾತ್‌ನ ಕಚ್ ಪ್ರಾಂತ್ಯ ಹಾಗೂ ರಾಜಸ್ತಾನದ ಜೋಧ್‌ಪುರ್ ಪ್ರಾಂತ್ಯದ ತಳಿ ಇದು.

ವಿಶೇಷ ಗುಣಗಳು:

ಶಕ್ತಿಯುತವಾದ ತಳಿ. ಅತಿ ಬೇಗನೆ ಉದ್ರೇಕಕ್ಕೆ ಒಳಗಾಗುತ್ತವೆ. ಅಪರಿಚಿತರನ್ನು ಕಂಡಾಗ ಮತ್ತಷ್ಟು ಸಿಟ್ಟಿಗೇಳುತ್ತವೆ.

ಪರ್ಯಾಯ ಹೆಸರುಗಳು:

ಈ ತಳಿಯನ್ನು ಬನ್ನಾಯಿ, ನಗರ್, ತಳಬ್ದ, ವಸಿಯಾರ್, ವಗದ್, ವದಿಯಾರ್, ನಾಗು, ಸಂಚೋರ್ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಈ ಹೆಸರುಗ್ಗಳು ದನಗಾರರ ಜಾತಿ ಹೆಸರುಗಳಿಂದ ಬಂದವುಗಳಾಗಿವೆ.



ಸುಂದರವಾದ ಅರ್ಧಚಂದ್ರಾಕಾರದ ಕೊಂಬಿರುವ ಕಾಂಕ್ರೇಜ್

ಇತರೆ ಚಾರಿತ್ರಿಕ ಮಾಹಿತಿ:

ರಬ್ಬೈರರು ಮತ್ತು ಬರವಾರರು ಎಂಬ ಅಲೆಮಾರಿ ಜನಾಂಗಗಳವರು ಈ ತಳಿಯ ದನಗಳನ್ನು ಸಾಕಿ ಬೆಳೆಸಿದ್ದಾರೆ. ಅಮೆರಿಕಾ ಮತ್ತು ಬ್ರೆಜಿಲ್ ದೇಶಗಳಿಗೆ ರಫ್ತು ಮಾಡಲಾಗಿದೆ. ಅಲ್ಲಿ ಅಲ್ಲಿನ ಸ್ಥಳೀಯ ದನಗಳೊಂದಿಗೆ ಇವುಗಳನ್ನು ಸಂಕರಣಗೊಳಿಸಲಾಗಿದೆ.

ಕಂಗಾಯಮ್

ತಳಿಯ ಹೆಸರು : ಕಂಗಾಯಮ್

ಉಗಮ ಸ್ಥಳ :

ತಮಿಳುನಾಡು ರಾಜ್ಯದ ಈರೋಡ್, ದಿಂಡಿಗಲ್ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಶ್ರಮದಾಯಕ ತಳಿಗಳಿವು.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ

ಕಂಡು ಬರುವ ಪ್ರದೇಶಗಳು: ತಮಿಳುನಾಡಿನ ಕೊಯಮತ್ತೂರು ಮತ್ತು ಧರ್ಮಪುರಿ ಜಿಲ್ಲೆಗಳು.

ಬಳಕೆಯ ವಿಧ:

ದುಡಿಮೆಯ ದನಗಳಿವು. ಮೈಸೂರು ತಳಿಗಳಂತೆ (ಹಳ್ಳೀಕಾರ್ ಮತ್ತು ಅಮೃತ್ ಮಹಲ್) ಇವೂ ಕೂಡ ಶ್ರಮಜೀವಿ ತಳಿಗಳು. ಹಸುಗಳು ಒಂದು ಕರಾವಿನಲ್ಲಿ ಸುಮಾರು 600 ರಿಂದ 700 ಕಿಲೋ ಗ್ರಾಂ ಹಾಲು ಕೊಡುತ್ತವೆ.

ದೇಹ ಲಕ್ಷಣಗಳು:

ಬಿಳಿ ಮತ್ತು ಬೂದು ಬಣ್ಣದ ದನಗಳಿವು. ದೇಹದ ಗಾತ್ರವು ಸಾಧಾರಣ ಗಾತ್ರವಾಗಿರುತ್ತದೆ. ಕೊಂಬು ಮೇಲಕ್ಕೆ ಹೋಗಿ ಮುಂದಕ್ಕೆ ಭಾಗಿರುತ್ತದೆ.

ಗಟ್ಟಿ ಗೊರಸುಗಳು, ಕುರುಚಲು ಹಾಗೂ ದೃಢವಾದ ಕಾಲುಗಳು ಈ ತಳಿಯ ವಿಶೇಷಗಳು. ಕಣ್ಣಿನ ಸುತ್ತಲೂ ಕಾಡಿಗೆ ಹಚ್ಚಿದ ಹಾಗೆ ಒಂದು ಸುತ್ತು ಇರುತ್ತದೆ. ಗಂಗೆ ದೊಗಲು ಅತ್ಯಂತ ತೆಳು.

ಇವುಗಳಲ್ಲಿ ಎರಡು ವಿಧದ ಪ್ರಭೇದಗಳಿವೆ. "ಒಂದು ಚಿಕ್ಕದು" ಮತ್ತು"ಒಂದು ದೊಡ್ಡದು". ಚಿಕ್ಕ ಗಾತ್ರದ ಪ್ರಭೇದಗಳು ಕಂಗಾಯಮ್, ಧರ್ಮಪುರಿ, ಉದಮಲ್ ಪೇಟೆ, ಪೊಲ್ಲಾಚಿ ಪದ್ದಡಂ ಮತ್ತು ಈರೋಡು ಭಾಗಗಳಲ್ಲಿವೆ. ದೊಡ್ಡ ಗಾತ್ರದ ಪ್ರಭೇದಗಳು ಕರೂರು ಮತ್ತು ದಿಂಡಿಗಲ್ ಭಾಗಗಳಲ್ಲಿವೆ. ದೇಹತೂಕ 300ರಿಂದ 600 ಕಿಲೋ ಗ್ರಾಂಗಳು.

ವಿಶೇಷ ಗುಣಗಳು: ಕಣ್ಣಿನ ಸುತ್ತಲೂ ಕಾಡಿಗೆ ಹಚ್ಚಿದ ಹಾಗೆ ಕಪ್ಪು ಪಟ್ಟೆ ಇರುತ್ತದೆ.

ಪರ್ಯಾಯ ಹೆಸರುಗಳು:

ಕಂಗನಾಡು, ಕೊಂಗು.



ಕಂಗಾಯಮ್ ಎತ್ತು

ಇತರೆ ಚಾರಿತ್ರಿಕ ಮಾಹಿತಿ:

ಕಂಗಾಯಮ್ ತಳಿಯ ಮೂಲ ತಳಿಗಳು ಪಲಯಕೋಟೆಯ ಪಟ್ಟಗಾರರು ಸಾಕಿಕೊಂಡಿರುವ ದೊಡ್ಡ ದೊಡ್ಡ ಹಿಂಡುಗಳಲ್ಲಿ ಇವೆ. ಇವುಗಳ ಮೈಕಟ್ಟು ಸಪೂರವಾಗಿದ್ದು ನೀಳವಾಗಿರುತ್ತದೆ. ಗಟ್ಟಿ ಗೊರಸುಗಳಿರುತ್ತವೆ. ದಪ್ಪ ಮತ್ತು ಕುರುಚಲು ಕತ್ತು ಇರುತ್ತದೆ. ಗಂಗೆದೊಗಲು ತುಂಬಾ ತೆಳು. ಬಾಲದ ಉದ್ದ ಮಧ್ಯಮ.

ಕಂಗಾಯಮ್ ತಳಿಯನ್ನು ಶ್ರೀಲಂಕಾ ದೇಶಕ್ಕೆ ರಫ್ತು ಮಾಡಲಾಗಿದೆ. ಮೈಸೂರು ವಿಧದ ದನಗಳೆಂದು ಇವನ್ನು ಪರಿಗಣಿಸಲಾಗಿದೆ.

ವೆಚೂರ್


ತಳಿಯ ಹೆಸರು : ವೆಚೂರ್, ಅಥವಾ 'ವೆಚ್ಚೂರ್'.

ಉಗಮ ಸ್ಥಳ : ಕೇರಳ ರಾಜ್ಯದ ವೆಚೂರ್

ಕಂಡು ಬರುವ ಪ್ರದೇಶಗಳು: ಕೇರಳ ರಾಜ್ಯದ ಕೆಲ ಜಿಲ್ಲೆಗಳು.

ಬಳಕೆಯ ವಿಧ: ದುಡಿಮೆಯ ತಳಿ.

ದೇಹ ಲಕ್ಷಣಗಳು: ಅತ್ಯಂತ ಗಿಡ್ಡ ತಳಿ. ಮಲೆನಾಡು ಗಿಡ್ಡಾ ಹಾಗೂ ಪುಂಗನೂರು ಗಿಡ್ಡಾ ತಳಿಯಂತೆ ಕೇರಳದಲ್ಲಿ ಕಂಡು ಬರುವ ಅತ್ಯಂತ ಗಿಡ್ಡ ತಳಿಯಿದು. ಇದನ್ನು 'ಕೇರಳದ ಮಲೆನಾಡು ಗಿಡ್ಡಾ' ಎಂದು ಕರೆಯಲಾಗಿದೆ. ಮೈ ಬಣ್ಣವು ಬೂದು, ತೆಳು ಕೆಂಪು ಅಥವಾ ಕಪ್ಪು ಬಿಳುಪಿನಲ್ಲಿರುತ್ತದೆ. ಉದ್ದವಾದ ಬಾಲವಿದ್ದರೆ, ಕೊಂಬುಗಳು ಚಿಕ್ಕವು. ದೇಹತೂಕ 130ರಿಂದ 200 ಕಿಲೋ ಗ್ರಾಂಗಳು.



ವೆಚೂರ್ ತಳಿ

ವಿಶೇಷ ಗುಣಗಳು: ಗಿಡ್ಡ ತಳಿ.

ಪರ್ಯಾಯ ಹೆಸರುಗಳು: ಇಲ್ಲ.

ಇತರೆ ಚಾರಿತ್ರಿಕ ಮಾಹಿತಿ: ಈ ತಳಿಯ ದನಗಳು ಅವಸಾನದ ಅಂಚಿನಲ್ಲಿವೆ. ಇವುಗಳ ಸಂಖ್ಯೆ ಕೆಲವೇ ನೂರುಗಳು. ಈ ತಳಿಯ ಸಂವರ್ಧನೆಯ ಪ್ರಯತ್ನಗಳು ಇದೀಗ ನಡೆಯುತ್ತಿವೆ.


ಅಂಬ್ಲಾಚರಿ

ತಳಿಯ ಹೆಸರು : ಅಂಬ್ಲಾಚರಿ

ಉಗಮ ಸ್ಥಳ :

ತಮಿಳುನಾಡಿನ ತಂಜಾವೂರು, ತಿರುವಾಯೂರು, ನಾಗಪಟ್ಟಿಣಂ ಜಿಲ್ಲೆಗಳಲ್ಲಿ ಕಂಡುಬರುವ ಕೆಲಸಗಾರ ತಳಿಯಿದು.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಕಂಗಾಯಂ ತಳಿಯಿಂದ ಈ ತಳಿಯನ್ನು ಪಡೆದುಕೊಳ್ಳಲಾಗಿದೆ.



ಅಂಬ್ಲಾಚರಿ

ಕಂಡು ಬರುವ ಪ್ರದೇಶಗಳು: ತಮಿಳುನಾಡಿನ ತಂಜಾವೂರು, ತಿರುವಾಯೂರು ಮತ್ತು ನಾಗಪಟ್ಟಿಣಂ ಜಿಲ್ಲೆಗಳು.

ಬಳಕೆಯ ವಿಧ:

ಕಂಗಾಯಂ ತಳಿಯಂತೆ ಇದೊಂದು ದುಡಿಮೆಯ ತಳಿ. ಆದರೆ ಗಾತ್ರದಲ್ಲಿ ಚಿಕ್ಕದು.

ದೇಹ ಲಕ್ಷಣಗಳು:

ಮೈ ಬಣ್ಣ ಬೂದು. ಈ ಬೂದು ಬಣ್ಣದಲ್ಲಿ ಬಿಳಿ ಮಚ್ಚೆಗಳು ಅಥವಾ ಕಪ್ಪು ಬಣ್ಣದಲ್ಲಿ ಬಿಳಿ ಮಚ್ಚೆಗಳು ಇರುತ್ತವೆ. ಕರುಗಳು ತುಸು ಕೆಂಪು ಬಣ್ಣ ಅಥವಾ ಕಂದು ಬಣ್ಣದಲ್ಲಿದ್ದು ಬಿಳಿ ಮಚ್ಚೆಗಳನ್ನು ಹೊಂದಿರುತ್ತದೆ. ದೇಹತೂಕ 300ರಿಂದ 400 ಕಿಲೋ ಗ್ರಾಂಗಳಷ್ಟಿರುತ್ತದೆ.

ವಿಶೇಷ ಗುಣಗಳು: ಇಲ್ಲ.

ಪರ್ಯಾಯ ಹೆಸರುಗಳು:

ರೈತರು ಈ ತಳಿಯನ್ನು ಜಾತಿ ಹಸು, ಮುಟ್ಟೈ ಹಸು, ದಕ್ಷಿಣ ತಂಜಾವೂರು ತಳಿ, ತೆರ್ ಕುತಿ ಹಸು ಎಂಬ ಹೆಸರುಗಳಿಂದ ಕರೆಯುತ್ತಾರೆ.

ಇತರೆ ಚಾರಿತ್ರಿಕ ಮಾಹಿತಿ: ಇಲ್ಲ.

ಬರಗೂರು ದನ


ತಳಿಯ ಹೆಸರು : ಬರಗೂರು ದನ

ಉಗಮ ಸ್ಥಳ : ತಮಿಳುನಾಡಿನ ಬರಗೂರು ಗುಡ್ಡಗಾಡು ಪ್ರದೇಶದ ತಳಿ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ

ಕಂಡು ಬರುವ ಪ್ರದೇಶಗಳು: ತಮಿಳುನಾಡಿನ ಕೊಯಮತ್ತೂರು ಜಿಲ್ಲೆ ಹಾಗೂ ಸುತ್ತಮುತ್ತ.

ಬಳಕೆಯ ವಿಧ: ದುಡಿಮೆಯ ದನಗಳು.



ಬರಗೂರು ದನ

ದೇಹ ಲಕ್ಷಣಗಳು:

ಮೈ ಬಣ್ಣ ಕಂದು, ಕೆಂಪು ಹಾಗು ಬಿಳಿ. ಕೊಂಬುಗಳೂ ಕೂಡ ಕಂದು-ಬಣ್ಣ ಹಾಗೂ ನೀಳವಾಗಿ ಉದ್ದ ಬೆಳೆಯುತ್ತವೆ. ಕಂದು ಮೈಬಣ್ಣದಲ್ಲಿ ಬಿಳಿಯ ಮಚ್ಚೆಗಳಿರುತ್ತವೆ. ತೆಳುವಾದ ಕಾಲುಗಳು. ಸಾಮಾನ್ಯವಾಗಿ ದೇಹತೂಕವು 250ರಿಂದ 350 ಕಿಲೋ ಗ್ರಾಂಗಳಷ್ಟಿರುತ್ತದೆ.

ವಿಶೇಷ ಗುಣಗಳು: ಚಿಕ್ಕದಾದ ಬಾಲ.

ಪರ್ಯಾಯ ಹೆಸರುಗಳು: ಇಲ್ಲ.

ಇತರೆ ಚಾರಿತ್ರಿಕ ಮಾಹಿತಿ:

ಮೈಸೂರು ವಿಧದ ದನಗಳೆಂದು ಇವನ್ನು ಪರಿಗಣಿಸಲಾಗಿದೆ. ಆದರೆ ದೇಹ ತೂಕ ತುಸು ಕಡಿಮೆ.

ನಿಮಾರಿ

ತಳಿಯ ಹೆಸರು : ನಿಮಾರಿ

ಉಗಮ ಸ್ಥಳ :

ಮಧ್ಯಪ್ರದೇಶದ ನರ್ಮದಾ ನದಿ ಕಣಿವೆಯ ನಿಮಾರ್ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಕಂಡುಬರುವ ತಳಿಯಿದು. ಮಧ್ಯಪ್ರದೇಶದ ನರ್ಮದಾ ಕಣಿವೆ ಹಾಗೂ ನಿಮಾರಿ ಪ್ರದೇಶದ ಕೆಲಸಗಾರ ತಳಿ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು:

ಗುಜರಾತ್‌ನ ಗಿರ್, ಕರ್ನಾಟಕ ಹಾಗೂ ಮಹಾರಾಷ್ಟ್ರಗಳ ತಳಿಯಾದ ಕಿಲಾರಿ ಇವುಗಳ ಸಂಕರಣದಿಂದ ಪಡೆದುಕೊಳ್ಳಲಾಗಿದೆ.

ಕಂಡು ಬರುವ ಪ್ರದೇಶಗಳು: ಮಧ್ಯಪ್ರದೇಶದ ಖಾಂದವಾ, ಖರ್ಗೋನ್ ಮತ್ತು ಬಾರವಾನಿ ಜಿಲ್ಲೆಗಳು ಹಾಗೂ ಮಹಾರಾಷ್ಟ್ರದ ಜಲಗಾಂವ್ ಮತ್ತಿತರೆ ಜಿಲ್ಲೆಗಳು.



ನಿಮಾರಿ

ಬಳಕೆಯ ವಿಧ: ದುಡಿಮೆಯ ತಳಿ.

ದೇಹ ಲಕ್ಷಣಗಳು:

ಕೆಂಪು ಬಣ್ಣದಲ್ಲಿ ಬಿಳಿ ಮಚ್ಚೆಗಳು. ಕೊಂಬು ಚಿಕ್ಕದು, ಹಿಂದಕ್ಕೆ ಬಾಗಿರುತ್ತದೆ. ಹಣೆಯು ಮಧ್ಯದಲ್ಲಿ ತಗ್ಗಾಗಿರುತ್ತದೆ. ಮುಖದ ಉದ್ದ ನೀಳ. ದೇಹತೂಕವು 300ರಿಂದ 400 ಕಿಲೋ ಗ್ರಾಂಗಳು.

ವಿಶೇಷ ಗುಣಗಳು: ಗಟ್ಟಿ ಗೊರಸುಗಳು.

ಪರ್ಯಾಯ ಹೆಸರುಗಳು: ಖಿಗೋರ್ಣಿನ್.

ಇತರೆ ಚಾರಿತ್ರಿಕ ಮಾಹಿತಿ: ಇಲ್ಲ

ಸಿಂಧಿ

ತಳಿಯ ಹೆಸರು : ಸಿಂಧಿ

ಉಗಮ ಸ್ಥಳ : ಪಾಕಿಸ್ತಾನದ ಕರಾಚಿ, ಹೈದರಾಬಾದ್ ಜಿಲ್ಲೆಗಳ ಹಾಲಿನ ತಳಿ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಅಫಘಾನಿಸ್ತಾನದ ದನ ಮತ್ತು ಗಿರ್ ಜಾತಿಯ ದನಗಳ ಬೆರಕೆಯಿಂದ ಸಿಂಧಿ ದನ ವಿಕಸನಗೊಂಡಿರಬಹುದಾಗಿದೆ.


ಕಂಡು ಬರುವ ಪ್ರದೇಶಗಳು: ಪಾಕಿಸ್ತಾನಕ್ಕೆ ಅಂಟಿಕೊಂಡ ಭಾರತದ ಭೂಭಾಗದಲ್ಲಿ ಈ ತಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಭಾರತ ದೇಶದ ಯಾವುದೇ ಪ್ರದೇಶಕ್ಕೆ ಹೊಂದಿಕೊಳ್ಳುವ ಗುಣಗಳನ್ನು ಸಿಂಧಿ ದನಗಳು ಪಡೆದುಕೊಂಡಿವೆ.

ಬಳಕೆಯ ವಿಧ: ಉತ್ತಮ ಹಾಲಿನ ಇಳುವರಿ ಇರುವುದರಿಂದ ವಿದೇಶಗಳಿಗೂ ರಫ್ತಾಗಿರುವ ತಳಿಯಿದು. ಒಂದು ಸೂಲಿಗೆ 1700 ರಿಂದ 2500 ಲೀಟರ್‌ಗಳವರೆಗೆ ಹಾಲು ಕೊಡುತ್ತವೆ. ಜಿಡ್ಡಿನ ಅಂಶ ಶೇ. 5. ಜೊತೆಗೆ ಹವಾಮಾನದ ವೈಪರೀತ್ಯಗಳಿಗೆ ಒಗ್ಗಿಕೊಳ್ಳುವ ತಳಿಯಿದು.

ದೇಹ ಲಕ್ಷಣಗಳು: ಇವುಗಳ ಮೈ ಬಣ್ಣ ಕೆಂಪು. ಅದಕ್ಕಾಗಿಯೇ ಈ ತಳಿಯನ್ನು ಕೆಂಪು ಸಿಂಧಿ (ರೆಡ್ ಸಿಂಧಿ) ಅಂತಲೂ ಕರೆಯುತ್ತಾರೆ. ಚಿಕ್ಕ ಕೊಂಬುಗಳು, ಹೊಳೆಯುವ ಕಣ್ಣುಗಳು, ಜೋತಾಡುವ ಗಂಗೆ ದೊಗಲು ಈ ತಳಿಯ ದೇಹ ಲಕ್ಷಣಗಳು. ಎತ್ತುಗಳು ತೂಕ ಸರಾಸರಿ 450 ಕಿಲೋ ಗ್ರಾಂಗಳು. ಹಸುಗಳ ತೂಕ ಸರಾಸರಿ 300 ಕಿಲೋ ಗ್ರಾಂಗಳು.

ವಿಶೇಷ ಗುಣಗಳು: ಅತ್ಯಂತ ಸೌಮ್ಯ ಸ್ವಭಾವದವುಗಳು. ಹಸು, ಎತ್ತು, ಗೂಳಿ ಎಲ್ಲವೂ ಕೂಡ ಸಾಧು ಪ್ರಾಣಿಗಳೇ.

ಪರ್ಯಾಯ ಹೆಸರುಗಳು: ಕೆಂಪು ಕರಾಚಿ, ಕೆಂಪು ಸಿಂಧಿ.



ಸಿಂಧಿ ದನ

ಇತರೆ ಚಾರಿತ್ರಿಕ ಮಾಹಿತಿ:

ಎಲ್ಲಾ ತರಹದ ಹವಾಮಾನದ ವೈಪರೀತ್ಯಗಳಿಗೆ ಹೊಂದಿಕೊಳ್ಳುವುದರಿಂದ ನಮ್ಮ ದೇಶದ ಹಲವಾರು ದನಾಲಯಗಳಲ್ಲಿ ಇತರೆ ದನಗಳ ಉನ್ನತಿಗಾಗಿ ಈ ತಳಿಯನ್ನು ಸಂಕರಣ ತಳಿಯಾಗಿ ಬಳಸಲಾಗಿದೆ. ಬೆಂಗಳೂರಿಗೆ ತೀರಾ ಸಮೀಪದ ತಮಿಳುನಾಡಿನ ಹೊಸೂರಿನ ದನಾಲಯದಲ್ಲಿ ಇಂತಹ ಉನ್ನತಿಗಾಗಿ ಸಿಂಧಿ ತಳಿಯನ್ನು ಬಳಸಲಾಗಿದೆ. ಭಾರತದಾದ್ಯಂತ ಕಂಡುಬರುವ ತಳಿಯಿದು.


ಗಿರ್

ತಳಿಯ ಹೆಸರು : ಗಿರ್

ಉಗಮ ಸ್ಥಳ : ಗುಜರಾತಿನ ದಕ್ಷಿಣ ಕಾಠಿಯಾವಾರ (ಕಾತೇವಾಡಾ) ಜಿಲ್ಲೆಯ ಗಿರ್ ಅರಣ್ಯ ಪ್ರದೇಶ.

ಸಂಕರಣಕ್ಕೆ ಬಳಸಲಾದ ಮೂಲ ತಳಿಗಳು: ಇಲ್ಲ.

ಕಂಡು ಬರುವ ಪ್ರದೇಶಗಳು: ಗುಜರಾತಿನ ಗಿರ್ ಪ್ರದೇಶದ ಹಾಲಿನ ತಳಿಯಿದು. ಇದು ಅತ್ಯುತ್ತಮ ಹಾಲಿನ ತಳಿಯಾದ್ದರಿಂದ ಹಾಗು ಉತ್ತಮ ರೋಗ ನಿರೋಧಕ ಶಕ್ತಿ ಹೊಂದಿರುವುದರಿಂದ ವಿದೇಶಗಳಿಗೆ ಹೆಚ್ಚಾಗಿ ರಫ್ತು ಆದ ತಳಿ. ರಾಜಸ್ಥಾನ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲೂ ಕಂಡು ಬರುತ್ತವೆ.



ಗಿರ್ ತಳಿಯ ಎತ್ತು

ಬಳಕೆಯ ವಿಧ: ಒಂದು ಕರಾವಿನಲ್ಲಿ 1500 ರಿಂದ 3,000 ಲೀಟರುಗಳವರೆಗೆ ಹಾಲು ಕೊಡುತ್ತವೆ. ಆಕಳುಗಳು 350 ರಿಂದ 450 ಕಿಲೋ ಗ್ರಾಂಗಳವರೆಗೆ ಮತ್ತು ಎತ್ತುಗಳು 450 ರಿಂದ 550 ಕಿಲೋ ಗ್ರಾಂಗಳವರೆಗೆ ತೂಗುತ್ತವೆ.

ದೇಹ ಲಕ್ಷಣಗಳು:

ಮೈ ಬಣ್ಣ ಬಿಳಿಯದಾದರೂ ಕೆಂಪು ಅಥವಾ ಕಂದು ಮಚ್ಚೆಗಳಿರುತ್ತವೆ. ಅಪರೂಪಕ್ಕೆ ಕೆಂಪು ಬಣ್ಣದ ದನಗಳು ಇರುತ್ತವೆ. ಅಗಲವಾದ ಉಬ್ಬಿದ ಹಣೆ ದೊಡ್ಡದಾದ ಮೂತಿ ಇರುತ್ತದೆ. ಕಿವಿ ಉದ್ದವಾಗಿ ಜೋತಾಡುತ್ತಿರುತ್ತದೆ. ಕಿವಿಗಳು ಹರಿಶಿನದ ಎಲೆಯಂತೆ ಅಗಲವಾಗಿದ್ದು ತಿರುಚಿಕೊಂಡಿರುತ್ತವೆ. ಕೊಂಬುಗಳು ಅರ್ಧ ಚಂದ್ರಾಕಾರದಲ್ಲಿ ಇರುತ್ತವೆ. ಗಂಗೆದೊಗಲು ಸಡಿಲವಾಗಿ ಜೋತಾಡುತ್ತಿರುತ್ತದೆ. ಚರ್ಮ ಸಡಿಲವಾಗಿರುತ್ತದೆ. ಗಿರ್ ತಳಿಯನ್ನು ಕೆಂಪು ಸಿಂಧಿ ಮತ್ತು ಸಾಹೀವಾಲ್ ತಳಿಗಳ ಅಭಿವೃದ್ಧಿಗಾಗಿ ಬಳಸಿಕೊಳ್ಳಲಾಗಿದೆ.

ವಿಶೇಷ ಗುಣಗಳು: ನೇತಾಡುವ ಕಿವಿಗಳು ಇದರ ವಿಶೇಷ ಗುಣಗಳು. ದೇಶದ ಯಾವುದೇ ಜಾತಿಯ ದನಗಳಿಗೂ ಇಷ್ಟು ನೀಳವಾದ ಕಿವಿಗಳಿರುವುದಿಲ್ಲ.

ಪರ್ಯಾಯ ಹೆಸರುಗಳು: ಕಾಥಿಯಾವಾರಿ, ಸುರ್ತಿ, ದೆಕ್ಕನ್.

ಇತರೆ ಚಾರಿತ್ರಿಕ ಮಾಹಿತಿ:

ಅಮೇರಿಕಾ ದೇಶಕ್ಕೆ ಈ ತಳಿ ಆಮದಾಗಿದೆ. ಬ್ರೆಜಿಲ್ ದೇಶವೂ ಕೂಡ ಈ ತಳಿಯನ್ನು ಆಮದು ಮಾಡಿಕೊಂಡಿದೆ. ಈ ತಳಿಯ ದನಗಳನ್ನು ತಮ್ಮ ದೇಶದ ಇನ್ನೊಂದು ತಳಿಯಾದ ಕಾಂಕ್ರೆಜ್‌ನೊಂದಿಗೆ ಸಂಕರಣಗೊಳಿಸಿಕೊಂಡು "ಇಂದುಬ್ರೆಜಿಲ್" ಎಂಬ ಹೊಸ ತಳಿಯನ್ನು ಉತ್ಪಾದಿಸಿಕೊಂಡಿದ್ದಾರೆ.

ಅತ್ಯಂತ ಕಡಿಮೆ ವಿವರಗಳು ದಕ್ಕುವ ಕೆಲ ದನಗಳನ್ನು ಮುಂದಿನಂತೆ ವಿವರಿಸಿಕೊಳ್ಳಬಹುದಾಗಿದೆ.

ಆಲಂಬಾಡಿ

ತಮಿಳುನಾಡಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳಲ್ಲಿ ಮಾತ್ರ ಈ ತಳಿ ಕಂಡುಬರುತ್ತದೆ. ದೇಹ ಲಕ್ಷಣಗಳಲ್ಲಿ ಹಳ್ಳಿಕಾರ್ ತಳಿಯನ್ನು ಹೋಲುತ್ತದೆ. ಮೈಸೂರು ವಿಧದ ದನಗಳೆಂದು ಇವನ್ನು ಪರಿಗಣಿಸಲಾಗಿದೆ.

ಬಚೌರ್

ಬಿಹಾರ ರಾಜ್ಯದಲ್ಲಿರುವ ಹರಿಯಾಣ ತಳಿಯಂತೆಯೇ ಕಂಡುಬರುವ ತಳಿಯಿದು. ದುಡಿಮೆಯ ಕೆಲಸಗಳಿಗಾಗಿ ಇವುಗಳನ್ನು ಬಳಸಲಾಗುತ್ತದೆ.


ಕೆಂಪು ಖಾಂಧಾರಿ

ಮಹಾರಾಷ್ಟ್ರದ ಖಾಂಧಾರ್ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ತಳಿಯಿದು. ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಅದಿಲಾಬಾದ್ ಮತ್ತು ನಿಜಾಮಾಬಾದ್ ಜಿಲ್ಲೆಗಳಲ್ಲೂ ಈ ತಳಿ ಕಂಡು ಬರುತ್ತದೆ. ದುಡಿಮೆಯ ಗುಂಪಿಗೆ ಸೇರಿದ ದನಗಳಿವು.

ಮಾಳ್ವಿ


ಮಧ್ಯಪ್ರದೇಶ, ರಾಜಸ್ತಾನ ಮತ್ತು ಆಂಧ್ರಪ್ರದೇಶದಲ್ಲಿ ಕಂಡುಬರುವ ತಳಿಯಿದು. ಕಾಂಕ್ರೆಜ್ ತಳಿಯಂತೆ ಕಂಡುಬರುವ ದುಡಿಮೆಯ ದನಗಳಿವು. ಮಧ್ಯಪ್ರದೇಶದ ಮಾಳ್ವದ ಮಹಾರಾಜರಿಂದ ಈ ದನಗಳು ತಮ್ಮ ಹೆಸರನ್ನು ಮಾಳ್ವಿ ಎಂದು ಪಡೆದುಕೊಂಡಿವೆ. ಮಹದೇವಪುರಿ ಮತ್ತು ಮಂತನಿ ಎಂಬ ಪರ್ಯಾಯ ಹೆಸರುಗಳೂ ಈ ತಳಿಗಿವೆ.

ನಾಗೋರಿ



ನಾಗೋರಿ ದನ

ರಾಜಸ್ಥಾನದ ನಾಗೋರ್ ಜಿಲ್ಲೆಯ ದುಡಿಮೆಯ ತಳಿಯಿದು. ಅತ್ಯಂತ ಚುರುಕುತನದ ದನಗಳಿವು. ನಾಗೋರಿ ತಳಿಯು ಕುದುರೆಯಂತೆ ನಾಗಾಲೋಟ ದಲ್ಲಿ ಓಡಬಲ್ಲುದು.




ಖೇರಿಗರ್ ದನ

ಖೇರಿಗರ್

ಉತ್ತರ ಪ್ರದೇಶದ ಖೇರಿ ಜಿಲ್ಲೆಯ ದನಗಳಿವು. ಮಾಳ್ವಿ ದನಗಳ ದೇಹ ಲಕ್ಷಣಗಳನ್ನೇ ಖೇರಿಗರ್ ದನಗಳೂ ಹೋಲುತ್ತವೆ. ಹಗುರ ಕೆಲಸಗಳಿಗಾಗಿ ಇವುಗಳನ್ನು ಬಳಸಲಾಗುತ್ತಿದೆ. ಎತ್ತುಗಳಲ್ಲಿ ಡುಬ್ಬವು ಹೆಚ್ಚು ಎತ್ತರಕ್ಕಿರುತ್ತದೆ.

ಕೆಂಕಥ



ಕೆಂಕಥ

ಉತ್ತರ ಪ್ರದೇಶದ ಬುಂದೇಲ ಖಂಡದ ಬೆಟ್ಟ ಪ್ರದೇಶಗಳಲ್ಲಿ ಹರಿಯುವ ಕೆನ್ ನದಿಯ ಆಸುಪಾಸಿನ ತಳಿ, ಕೆಂಕಥ. ಕಂಗ್ವಾರಿಯಾ ಎಂಬ ಮತ್ತೊಂದು ಹೆಸರೂ ಇದಕ್ಕಿದೆ. ಗಾತ್ರದಲ್ಲಿ ಚಿಕ್ಕವಾದರೂ ಹೆಚ್ಚು ಶಕ್ತಿಯುತ ತಳಿಗಳಿವು.

ಸಿರಿ


ಡಾರ್ಜಿಲಿಂಗ್, ಸಿಕ್ಕಿಂ ಮತ್ತು ಭೂತಾನಿನಲ್ಲಿ ಸಿರಿ ತಳಿಯ ದನಗಳು ಕಂಡು ಬರುತ್ತವೆ. ಸಾರಿಗೆಯ ಕೆಲಸಕ್ಕೆ ಹೆಚ್ಚಾಗಿ ಬಳಸಲಾಗುತ್ತಿದೆ. ಬೆಟ್ಟ ಪ್ರದೇಶದ ತಳಿಯೆಂದು ಗುರುತಿಸಲಾಗಿದೆ.

ರತಿ


ರತಿ ದನಗಳು ರಾಜಸ್ಥಾನದ ತಳಿ. ಹಾಲು ಉತ್ಪಾದನೆ, ಉಳುಮೆ ಮತ್ತು ಸಾರಿಗೆಯ ಕೆಲಸಕ್ಕೆ ಬಳಸಲಾಗುತ್ತಿದೆ.

ಪೊನ್ವಾರ್

ಪೊನ್ವಾರ್ ತಳಿಯು ಹಿಮಾಲಯದ ತಪ್ಪಲಿನ ತಳಿ. ಉತ್ತರ ಪ್ರದೇಶದ ಫಿಲಿಬಿಟ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ದುಡಿಮೆಯ ತಳಿ. ಈ ತಳಿಯನ್ನು ಬೆಟ್ಟ ಪ್ರದೇಶದ ತಳಿಯೆಂದು ಗುರುತಿಸಲಾಗಿದೆ.



ಪೊನ್ವಾರ್ ತಳಿ



ಗವಾಲೋ ದನ

ಗವಾಲೋ

ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಕಂಡುಬರುವ, ಒಂಗೋಲ್ ತಳಿಯಂತೆಯೇ ಇರುವ ಇದು ಕೆಲಸಗಾರ ದನ. ಇವುಗಳನ್ನು ಗೌಳವ್ ದನಗಳೆಂದೂ ಕರೆಯಲಾಗುತ್ತದೆ.

ಮೇವಾಟಿ

ರಾಜಸ್ಥಾನದ ಕೆಲ ಜಿಲ್ಲೆಗಳಲ್ಲಿಯ ದುಡಿಮೆಯ ತಳಿ, ಮೇವಾಟಿ. ಗಿರ್, ರತಿ ಮತ್ತು ನಾಗೋರಿ ತಳಿಗಳ ಬೆರಕೆ ಲಕ್ಷಣಗಳು ಈ ತಳಿಯಲ್ಲಿವೆ.

ವಿವರಣೆಗೊಳಪಡದ ಜಾನುವಾರುಗಳು

ನಮ್ಮ ರಾಜ್ಯದಲ್ಲಿ ವಿವರಣೆಗೊಳಪಡದ ಜಾನುವಾರುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. 2003 ರಲ್ಲಿ ಜರುಗಿದ 17 ನೇ ಜಾನುವಾರು ಗಣತಿಯಂತೆ ಇವುಗಳ ಸಂಖ್ಯೆ ಸುಮಾರು 40 ಲಕ್ಷಗಳು

❑

ಅಧ್ಯಾಯ 3


ಎಮ್ಮೆಗಳು

ನಮ್ಮ ದೇಶದಲ್ಲಿರುವ ಎಮ್ಮೆ ತಳಿಗಳ ಸಂಖ್ಯೆ ಸುಮಾರು 16. ಇವುಗಳಲ್ಲಿ ಪ್ರಪಂಚದಲ್ಲೇ ಅತ್ಯುತ್ತಮ ಹಾಲಿನ ತಳಿಗಳು ಎನ್ನಬಹುದಾದ 7 ಎಮ್ಮೆ ತಳಿಗಳು ನಮ್ಮ ದೇಶದಲ್ಲಿವೆ. ಇತ್ತೀಚೆಗೆ ನಡೆದ 2003 ರ ಜಾನುವಾರು ಗಣತಿಯಂತೆ ನಮ್ಮ ರಾಜ್ಯದ ಎಮ್ಮೆಗಳ ಒಟ್ಟು ಸಂಖ್ಯೆ 40.23 ಲಕ್ಷಗಳು. ಇವುಗಳ ಅಭಿವೃದ್ಧಿಯಲ್ಲಿ ರೈತರ ಪಾತ್ರ ಗಣನೀಯವಾದದ್ದು. ಸರ್ಕಾರವೂ ಎಮ್ಮೆ ತಳಿಗಳ ಸಂವರ್ಧನೆ ಮತ್ತು ಅಭಿವೃದ್ಧಿ ಕ್ಷೇತ್ರಗಳನ್ನು ಆಯೋಜಿಸಿದೆ. ಎಮ್ಮೆ ಹಾಲಿನಲ್ಲಿ ಜಿಡ್ಡಿನ ಅಂಶ ಹೆಚ್ಚಾಗಿದ್ದು, ಅದು ಶೇ. 7 ರಿಂದ 8 ರಷ್ಟಿರುತ್ತದೆ. ಹಸುಗಳಲ್ಲಾದರೆ ಇದು ಶೇ. 3.5 ರಿಂದ 5 ಮಾತ್ರ.

ಕರ್ನಾಟಕದ ಮುಖ್ಯವಾದ ಎಮ್ಮೆ ತಳಿಗಳೆಂದರೆ ಧಾರವಾಡದ ಎಮ್ಮೆ ಮತ್ತು ದಕ್ಷಿಣ ಕನ್ನಡದ ಎಮ್ಮೆ. ಒಂದು ಅಂದಾಜಿನಂತೆ ಕರ್ನಾಟಕದಲ್ಲಿರುವ ಶೇ. 94ರಷ್ಟು ಎಮ್ಮೆಗಳು ವಿವರಣೆಗೆ ಒಳಪಡದ ನಾಟಿ ತಳಿಗಳು ಆಗಿವೆ. ಈ ನಾಟಿ ತಳಿಗಳೆಲ್ಲ ಸೂರ್ತಿ ತಳಿಯನ್ನು ಸ್ವಲ್ಪ ಮಟ್ಟಿಗೆ ಹೋಲುತ್ತವೆ. ಹಾಲು ಉತ್ಪಾದನೆ ಮತ್ತು ಕೃಷಿ ಚಟುವಟಿಕೆಗಳಿಗೆ ಎಮ್ಮೆಗಳನ್ನು ಬಳಸಲಾಗುತ್ತಿದೆ. ದಕ್ಷಿಣ ಕನ್ನಡದ ಕಂಬಳದ ಓಟಕ್ಕೆ ಕೂಡ ಎಮ್ಮೆಗಳನ್ನು ಬಳಸಲಾಗುತ್ತದೆ. ದಕ್ಷಿಣ ಕನ್ನಡ (ಸಾಮಾನ್ಯವಾಗಿ ಸೌತ್ ಕೆನರಾ ತಳಿ ಎಂದು ಕರೆಯಲಾಗುವ) ಎಮ್ಮೆ ತಳಿಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಕರ್ನಾಟಕದ ಇನ್ನೊಂದು ಮುಖ್ಯ ತಳಿಯಾದ ಧಾರವಾಡದ ಎಮ್ಮೆಯನ್ನು ಗೌಳಿ ಎಮ್ಮೆ ಎಂದೂ ಕರೆಯಲಾಗುತ್ತದೆ. ಈ ತಳಿಯು ಧಾರವಾಡ, ಉತ್ತರ ಕನ್ನಡ, ಬೆಳಗಾವಿ ಮತ್ತಿತರ ಜಿಲ್ಲೆಗಳಲ್ಲಿ ಹರಡಿಕೊಂಡಿವೆ.

ಧಾರವಾಡ ಎಮ್ಮೆಗಳು

ಧಾರವಾಡ ಎಮ್ಮೆಗಳನ್ನು ಗೌಳಿ ಎಮ್ಮೆಗಳೆಂದೂ ಕರೆಯಲಾಗುತ್ತದೆ. ಈ ತಳಿಯ ಎಮ್ಮೆಗಳು ಧಾರವಾಡ, ಬೆಳಗಾವಿ, ಹಾವೇರಿ, ಗದಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ.




ಧಾರವಾಡ ಎಮ್ಮೆ

ಗೌಳಿ ಎಮ್ಮೆಗಳ ಮೈಬಣ್ಣ, ಕೂದಲಿನ ಬಣ್ಣ ಹಾಗೂ ಮುಸುಡಿಯ ಬಣ್ಣ ಕಪ್ಪು. ನೀಳವಾದ ತಲೆ, ಕಿರಿದಾದ ಹಣೆ, ಉದ್ದವಾದ ಹಾಗೂ ಚಪ್ಪಟೆಯಾದ ಕೊಂಬುಗಳಿರುತ್ತವೆ. ಇದರ ಕೊಂಬುಗಳು ಎಷ್ಟು ಉದ್ದವಾಗಿರುತ್ತವೆ ಎಂದರೆ ಕತ್ತಿನ ಪೂರ ಉದ್ದವನ್ನು ಆವರಿಸಿ ಭುಜದ ಡುಬ್ಬವನ್ನು ಮೀರಿ ಎದೆಯ ಪಕ್ಕೆಲುಬುಗಳವರೆಗೆ ಬೆಳೆದಿರುತ್ತದೆ. ಕೊಂಬುಗಳ ತುದಿ ಮಾತ್ರ ಮೇಲಕ್ಕೆ ಬಾಗಿದಂತಿರುತ್ತವೆ. ಇದರ ಕಿವಿಗಳೂ ಕೂಡ ಉದ್ದ. ಹಿಂಗಾಲುಗಳ ಚಪ್ಪೆಗಳು ಮುಂಗಾಲಿನ ಚಪ್ಪೆಗಳಿಗೆ ಹೋಲಿಸಿಕೊಂಡರೆ ಚಿಕ್ಕವು. ಗೌಳಿ ಎಮ್ಮೆಗಳು ದಿನವೊಂದಕ್ಕೆ 4 ರಿಂದ 7 ಲೀಟರಿನವರೆಗೆ ಹಾಲು ಕರೆಯುತ್ತವೆ.

ಸೂರ್ತಿ ಎಮ್ಮೆಗಳು

ಗುಜರಾತ್ ರಾಜ್ಯದ ಖೈರಾ ಮತ್ತು ಬರೋಡ ಜಿಲ್ಲೆಯ ತಳಿ ಇದು. ಮೈ ಬಣ್ಣ ಕಪ್ಪು ಇಲ್ಲವೇ ಕಂದು. ಒಂದು ಕರಾವಿನಲ್ಲಿ 1500ರಿಂದ 2000 ಲೀಟರ್ ಹಾಲು ಕೊಡುತ್ತವೆ. ಇವುಗಳ ಗಾತ್ರ ಮಧ್ಯಮ. ತಲೆಯು ಉದ್ದವಾಗಿರುತ್ತದೆ. ಕಣ್ಣುಗಳು ಎದ್ದು ಕಾಣುತ್ತವೆ. ಅರ್ಧಚಂದ್ರಾಕಾರದ ಕೊಂಬುಗಳು ಚಪ್ಪಟೆಯಾಗಿ ಉದ್ದವಾಗಿರುತ್ತವೆ. ಇದರ ಬಾಲವೂ ಉದ್ದ.

ಇದರ ವಿಶೇಷವೆಂದರೆ ಈ ಎಮ್ಮೆ ತಳಿಯ ಹಾಲಿನಲ್ಲಿ ಅತಿ ಹೆಚ್ಚಿನ ಕೊಬ್ಬಿನಂಶವಿರುತ್ತದೆ. ಅದು ಶೇ. 8ರಿಂದ 12ರವರೆಗೆ ಇರುತ್ತದೆ. ಈ ಎಮ್ಮೆಗಳನ್ನು




ಸೂರ್ತಿ ಎಮ್ಮೆ

ದುಡಿಮೆಯ ಕೆಲಸಗಳಿಗಾಗಿಯೂ ಬಳಸಲಾಗುತ್ತದೆ. ಸೂರ್ತಿ ತಳಿಯ ಬೆನ್ನು ನೇರವಾಗಿರುತ್ತದೆ. ಇವು ಅತ್ಯಂತ ಸೌಮ್ಯ ಸ್ವಭಾವದ ಎಮ್ಮೆಗಳಾಗಿವೆ. ನಮ್ಮ ರಾಜ್ಯದಲ್ಲಿ ಇವುಗಳ ಸಂಖ್ಯೆ 1. 47 ಲಕ್ಷಗಳು.

ಮುರ್ರಾ ಎಮ್ಮೆಗಳು

ಮುರ್ರಾ ಎಮ್ಮೆ ತಳಿಯನ್ನು ದೆಹಲಿ ಎಮ್ಮೆ ಎಂದೂ ಕರೆಯಲಾಗುತ್ತದೆ. ಯಾಕೆಂದರೆ ಇದರ ಮೂಲ ರಾಜ್ಯಗಳು ದೆಹಲಿ ಮತ್ತು ಪಂಜಾಬ್. ಇವು ದೊಡ್ಡ ಗಾತ್ರದ ಎಮ್ಮೆಗಳು. ಇವುಗಳ ದೇಹತೂಕ 450ರಿಂದ 550 ಕಿಲೋ ಗ್ರಾಂಗಳವರೆಗಿರುತ್ತದೆ. ಮೈ ಬಣ್ಣ ಕಪ್ಪು. ಇವು ಅತಿ ಹೆಚ್ಚಿನ ಪ್ರಮಾಣದಲ್ಲಿ ಹಾಲು ಕರೆಯುತ್ತವೆ. ಒಂದು ಕರಾವಿನಲ್ಲಿ ಏನಿಲ್ಲವೆಂದರೂ 2000 ಲೀಟರ್ ಹಾಲು ಕರೆಯುತ್ತವೆ. ಹಾಲಿನಲ್ಲಿ ಕೊಬ್ಬಿನ ಅಂಶ ಶೇ. 6ರಿಂದ 6.5ರಷ್ಟು ಇರುತ್ತದೆ. ಕೊಂಬುಗಳು ಸುರುಳಿಯ ಆಕಾರದಲ್ಲಿರುವುದೇ ಹೆಚ್ಚು. ದೇಹ



ಮುರ್ರಾ ಎಮ್ಮೆ

ದೊಡ್ಡದಾದರೂ ಕತ್ತು ಮತ್ತು ತಲೆ ಚಿಕ್ಕದು. ನಮ್ಮ ರಾಜ್ಯದಲ್ಲಿ ಇವುಗಳ ಸಂಖ್ಯೆ 38 ಸಾವಿರ.

ದಕ್ಷಿಣ ಕನ್ನಡ ಎಮ್ಮೆಗಳು

ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಎಮ್ಮೆಗಳನ್ನು ದಕ್ಷಿಣ ಕನ್ನಡ (ಸೌತ್ ಕೆನರಾ) ಎಮ್ಮೆಗಳೆಂದು ಕರೆಯಲಾಗಿದೆ. ಕಂಬಳ ಓಟಕ್ಕೆ ಈ ಎಮ್ಮೆಗಳು ಪ್ರಸಿದ್ಧಿ ಪಡೆದಿವೆ.




ದಕ್ಷಿಣ ಕನ್ನಡ ಎಮ್ಮೆ

ಕೆಸರು ಗದ್ದೆಗಳ ಕಂಬಳ ಓಟದ ಒಂದು ಜೋಡಿ ಕೋಣಗಳ ಬೆಲೆ ಸುಮಾರು ನಲವತ್ತು ಸಾವಿರದಿಂದ ಒಂದು ಲಕ್ಷದವರೆಗಿರುತ್ತದೆ. ಕಂಬಳದಲ್ಲಿ ಹಿರಿಯ ವಿಭಾಗ ಮತ್ತು ಕಿರಿಯ ವಿಭಾಗಗಳಿರುವುದರಿಂದ ವಯಸ್ಸಿಗೆ ತಕ್ಕಂತೆ ಜೋಡಿ ಕೋಣಗಳನ್ನು ಬೇರ್ಪಡಿಸಿ ಓಟಕ್ಕೆ ಬಿಡಲಾಗುತ್ತದೆ. ಸಾಮಾನ್ಯವಾಗಿ ಕಂಬಳ ಸ್ಪರ್ಧೆ ಎರಡು ಜೋಡಿ ಕೋಣಗಳ ಮಧ್ಯೆ ನಡೆಯುತ್ತದೆ. ಕೆಸರು ಗದ್ದೆಯಷ್ಟೇ ಅಲ್ಲದೆ ಮರಳಿನ ದಾರಿಗಳನ್ನು ಮಾಡಿ ನದಿಗಳಲ್ಲಿ ಕಂಬಳ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿಯ ಬಳಿ ನೇತ್ರಾವತಿ ನದಿಯಲ್ಲಿ ಕಂಬಳ ನಡೆಯುವುದುಂಟು. ಗೆದ್ದ ಜೋಡಿಗೆ ಚಿನ್ನದ ಪದಕ ಮತ್ತು ಟ್ರೋಫಿ ದಕ್ಕುತ್ತದೆ.

ಮಲೆನಾಡಿನಲ್ಲಿ ಗದ್ದೆಗಳ ಉಳುಮೆ ಕೆಲಸಕ್ಕೆ ಗಂಡು ಎಮ್ಮೆಗಳ ಜೋಡಿಗಳನ್ನು ಬಳಸಲಾಗುತ್ತದೆ. ಪ್ರದೇಶ ಬದಲಾದಂತೆ, ಕೇರಳದಲ್ಲಿ ಇದೇ ತಳಿಯ ಎಮ್ಮೆಗಳನ್ನು ಮಲಬಾರ್ ಎಮ್ಮೆಗಳು ಎಂದು ಕರೆಯಲಾಗುತ್ತದೆ. ಈ ತಳಿಯ ಗುಣಗಳನ್ನು ಅಧ್ಯಯನಕ್ಕೊಳಪಡಿಸಬೇಕಿದೆ.

ಪಂಡರಾಪುರಿ ಎಮ್ಮೆಗಳು

ಪಂಡರಾಪುರಿ ತಳಿಯ ಎಮ್ಮೆಗಳು ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಒಂದು ಸೂಲಿನಲ್ಲಿ 1200 ಲೀಟರ್‌ಗಳವರೆಗೆ ಹಾಲನ್ನು ಕೊಡ್ಲುತ್ತವೆ.




ಪಂಡರಾಪುರಿ ಎಮ್ಮೆ

ಬರನಿರೋಧಕ ಶಕ್ತಿಯನ್ನು ಹೊಂದಿರುವ ಈ ಎಮ್ಮೆಗಳು ಕಸ ಕಡ್ಡಿ ಮತ್ತು ಕಡಿಮೆ ಪೌಷ್ಟಿಕಾಂಶವಿರುವ ಮೇವುಗಳನ್ನು ತಿಂದು ಬದುಕುತ್ತವೆ. ಹಳ್ಳಿಕಾರ್ ಹಸುಗಳ ತಳಿಯಲ್ಲಿರುವಂತೆ ಕೊಂಬುಗಳು ಉದ್ದವಾಗಿ ಬೆಳೆದು ಹಿಂಭಾಗಕ್ಕೆ ಬಗ್ಗಿ ಮತ್ತೆ ಮುಂದಕ್ಕೆ ಬಾಗಿ ಅರ್ಧಚಂದ್ರಾಕಾರದಲ್ಲಿರುತ್ತವೆ.

ದೇಸೀ ತಳಿಗಳು

ನಮ್ಮ ರಾಜ್ಯದಾದ್ಯಂತ ವಿವರಣೆಗೆ ಒಳಪಡದ ಹಲವಾರು ದೇಸೀ ಎಮ್ಮೆ ತಳಿಗಳು ಇವೆ. ಇವುಗಳ ಸಂಖ್ಯೆ ಸುಮಾರು 38.31 ಲಕ್ಷಗಳು.



ದೇಸಿ ಎಮ್ಮೆ

ಏಷ್ಯಾ ಖಂಡವು ಎಮ್ಮೆ ತಳಿಗಳ ಸಾಕಣೆ ಮತ್ತು ಅಭಿವೃದ್ಧಿಗೆ ಹೆಸರುವಾಸಿಯಾಗಿದೆ. ಎಮ್ಮೆ ತಳಿಗಳ ಉಗಮವು ಭಾರತದಿಂದಲೇ ಆಗಿದೆ. ನಮ್ಮ ದೇಶದ ಇತರೆ ಎಮ್ಮೆ ತಳಿಗಳೆಂದರೆ ಜಾಫರಬಾದಿ, ಬಾದಾವರಿ, ಮೆಹಸಾನ, ನಾಗಪುರ, ನೀಲೀರವಿ, ತೋಡ, ತರಾಯಿ, ಕುಂಡಿ, ಕಾಲಾಹಂಡಿ, ಸಂಬಲಪುರಿ, ಗೋಧಾವರಿ, ಮಂಡ, ಜರಂಗಿ ಮತ್ತಿತರೆ ತಳಿಗಳು.

ಅಧ್ಯಾಯ - 4

ಕುರಿಗಳು


ಸುಮಾರು ನಲವತ್ತು ವಿವಿಧ ಬಗೆಯ ಕುರಿ ತಳಿಗಳು ನಮ್ಮ ದೇಶದಲ್ಲಿವೆ. ಅವುಗಳಲ್ಲಿ ಪ್ರಾಮುಖ್ಯ ಪಡೆದುಕೊಂಡಿರುವ ಐದು ಕುರಿ ತಳಿಗಳು ನಮ್ಮ ರಾಜ್ಯದಲ್ಲಿವೆ. ಅವೆಂದರೆ, ಬನ್ನೂರು ತಳಿ, ಡೆಕ್ಕನಿ ತಳಿ, ಹಾಸನ ತಳಿ ಮತ್ತು ಬಳ್ಳಾರಿ ತಳಿ. ಜತೆಗೆ, ಅಷ್ಟೇನೂ ಪ್ರಸಿದ್ಧಿಗೆ ಬಾರದ ಕೆಂಗುರಿ ಕುರಿ ತಳಿ ಮತ್ತು ಎಳಗ ಕುರಿ ತಳಿಗಳೂ ನಮ್ಮ ರಾಜ್ಯದ ತಳಿಗಳೇ. ಕುರಿತಳಿಗಳ ಸಂರಕ್ಷಣೆಯಲ್ಲಿ ದೊಡ್ಡ ದೊಡ್ಡ ಕುರಿ ಹಿಂಡುಗಳನ್ನು ಇಟ್ಟುಕೊಂಡಿರುವ ರೈತರ ಪಾತ್ರ ಅನನ್ಯವಾದದ್ದು. 2003ರ ಜಾನುವಾರು ಗಣತಿಯಂತೆ ನಮ್ಮ ರಾಜ್ಯದ ಒಟ್ಟು ಕುರಿಗಳ ಸಂಖ್ಯೆ 72.56 ಲಕ್ಷಗಳು.

ಮಂಡ್ಯ ಕುರಿ

ಮಂಡ್ಯ ಕುರಿಯನ್ನು ಬನ್ನೂರು ಕುರಿ, ಬಂಡೂರು ಕುರಿ ಅಂತಲೂ ಕರೆಯುತ್ತಾರೆ. ರುಚಿಕರವಾದ ಮಾಂಸಕ್ಕೆ ಈ ತಳಿ ಹೆಸರುವಾಸಿ.

ದೇಹಲಕ್ಷಣಗಳನ್ನು ವಿವರಿಸುವಾಗ ಮೂಗನ್ನು 'ರೋಮನ್ ಮೂಗು' ಎಂದು ವಿವರಿಸಲಾಗಿದೆ. ಜೋಲುಗಡ್ಡ ಈ ತಳಿಯ ಇನ್ನೊಂದು ವಿಶೇಷ. ದೇಹ ಕುಳ್ಳಕ್ಕಿದ್ದರೂ ಮೈ ತುಂಬಿದಂತಿರುತ್ತದೆ.

ರೈತರು ಈ ಕುರಿಗಳನ್ನು ಸಾಮಾನ್ಯವಾಗಿ ಬಯಲಲ್ಲಿ ಬಿಟ್ಟು ಮೇಯಿಸುತ್ತಾರೆ. ಕೆಲ ರೈತರು ಕಟ್ಟಿ ಮೇಯಿಸಿ, ಕೊಟ್ಟಿಗೆಯಲ್ಲೇ ಮೇವುಣಿಸುತ್ತಾರೆ. ಕೆಲ ರೈತರು ಒಂದೆರಡು ಕುರಿಗಳನ್ನು ಸಾಕಿಕೊಂಡು ಕುತ್ತಿಗೆಗೆ ಹಗ್ಗ ಕಟ್ಟಿ, ಬಯಲು ಪ್ರದೇಶದಲ್ಲಿ ಗೊಂತಿಗೆ ಕಟ್ಟಿ



ಬನ್ನೂರು ಕುರಿ

ಮೇಯಿಸುತ್ತಾರೆ. ಹಿಂಡು ಹಿಂಡು ಕುರಿಗಳನ್ನು ಕಾಡುಮೇಡುಗಳಲ್ಲಿ ಬಿಟ್ಟು ಮೇಯಿಸಿ ಸಂಜೆಗೆ ಕೊಟ್ಟಿಗೆಗೆ ಕರೆತರಲಾಗುವುದು.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ಬನ್ನೂರು ಎಂಬ ಗ್ರಾಮ ಈ ತಳಿಯ ಮೂಲ ಸ್ಥಳವಾಗಿರುವುದರಿಂದ ಈ ತಳಿಯನ್ನು ಬನ್ನೂರು ತಳಿ ಅಥವಾ ಬಂಡೂರು ತಳಿ ಎಂದು ಕರೆಯಲಾಗಿದೆ. ಈ ತಳಿಯ ಕುರಿಗಳು ಮಂಡ್ಯ, ಮೈಸೂರು, ಬೆಂಗಳೂರು, ಚಾಮರಾಜನಗರ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಹರಡಿಕೊಂಡಿವೆ. ಕತ್ತಿನ ತಳಭಾಗದಲ್ಲಿ ಎರಡು ಕೊರಳು ಮೊಲೆಗಳು ನೇತಾಡುತ್ತಿರುತ್ತವೆ. ಎದೆಯು ವಿಶಾಲವಾಗಿರುತ್ತದೆ. ತೆಳ್ಳನೆಯ ಎಲೆಯಾಕಾರದ ಜೋತಾಡುವ ಕಿವಿಗಳು ಈ ತಳಿಯ ಇನ್ನೊಂದು ಪ್ರಮುಖ ಲಕ್ಷಣ. ಇವು ಕಂದು ಬಣ್ಣದ ಕುರಿಗಳು. ಬಾಲ ಚಿಕ್ಕದು. ಕಾಲುಗಳು ಗಿಡ್ಡವಾಗಿರುತ್ತವೆ. ಹೆಣ್ಣು ಕುರಿಗಳು ಸರಾಸರಿ 25ರಿಂದ 30 ಕಿಲೋ ಗ್ರಾಂ ತೂಗುತ್ತವೆ. ಗಂಡು ಕುರಿಗಳು ಸರಾಸರಿ 30 ರಿಂದ 35 ಕಿಲೋ ಗ್ರಾಂ ತೂಗುತ್ತವೆ.

ಹಾಸನ ತಳಿ


ಹಾಸನ ತಳಿಯ ಮೂಲ ಸ್ಥಳ ಹಾಸನ ಜಿಲ್ಲೆ. ಪಕ್ಕದ ಜಿಲ್ಲೆಗಳಾದ ಚಿಕ್ಕ ಮಗಳೂರು, ಮೈಸೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ತಳಿಯ ಕುರಿಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಬಿಳಿ ಮತ್ತು ಕಂದು ಬಣ್ಣದ ಜೊತೆಗೆ ಕಪ್ಪು ಮಿಶ್ರಿತ ಬಿಳಿ ಮೈ ಬಣ್ಣದ ಕುರಿಗಳು ಕಾಣಸಿಗುತ್ತವೆ.

ಮಂಡ್ಯ ತಳಿಯಂತೆಯೇ ಈ ತಳಿಗೂ ರೋಮನ್ ಮೂಗಿದೆ. ಜೋತಾಡುವ ಕಿವಿಗಳು ಈ ತಳಿಯ ಪ್ರಮುಖ ಲಕ್ಷಣಗಳಲ್ಲೊಂದು. ಗಾತ್ರದಲ್ಲಿ ಮಧ್ಯಮ ಗಾತ್ರದ್ದು. ಇದೊಂದು ಮಾಂಸದ ತಳಿ. ಹೆಣ್ಣು ಕುರಿ ಸುಮಾರು 18ರಿಂದ 28 ಕಿಲೋ ಗ್ರಾಂ ಮತ್ತು ಗಂಡು ಕುರಿ 25ರಿಂದ 35 ಕಿಲೋಗ್ರಾಂ ತೂಕ ಇರುತ್ತದೆ. ರೈತರು ದೊಡ್ಡ ಗಾತ್ರದ ಟಗರುಗಳನ್ನು ಆಯ್ಕೆಮಾಡಿ ಸಂತಾನೋತ್ಪತ್ತಿಗೆ ಬಳಸುತ್ತಾರೆ. ಕುರಿಯೊಂದಕ್ಕೆ ವರ್ಷವೊಂದಕ್ಕೆ 300 ರಿಂದ 400 ಗ್ರಾಂ ಉಣ್ಣೆ ಉತ್ಪಾದನೆಯಾಗುತ್ತದೆ.

ದೆಕ್ಕನಿ ತಳಿ

ನಮ್ಮ ರಾಜ್ಯದಲ್ಲಿ ಡೆಕ್ಕನ್ ತಳಿಯ ಕುರಿಗಳು ಬೆಳಗಾಂ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗುಲ್ಬರ್ಗಾ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲಿ ನಾಸಿಕ್, ಪೂನಾ, ಅಹಮದ್‌ನಗರ, ಕೊಲ್ಲಾಪುರ, ಶೋಲಾಪುರ ಮತ್ತು ಔರಂಗಬಾದ್ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ದೇಶದ

ದಕ್ಷಿಣದ ಪ್ರಸ್ಥಭೂಮಿಯಲ್ಲಿ ಈ ಕುರಿಗಳಿರುವುದರಿಂದ ಭೌಗೋಳಿಕ ಪ್ರದೇಶದ ಆಧಾರದ ಮೇಲೆ ಇವುಗಳನ್ನು ಡೆಕ್ಕನ್ ತಳಿ (ದೆಕ್ಕನಿ ತಳಿ) ಗಳೆಂದು ಕರೆಯಲಾಗಿದೆ.



ದೆಕ್ಕನಿ ಕುರಿ

ಸಾಮಾನ್ಯವಾಗಿ ಮೈಬಣ್ಣ ಕಪ್ಪು. ಕೆಲ ಕುರಿಗಳಲ್ಲಿ ಬಿಳಿಯ ಮಚ್ಚೆಗಳು ಅಥವಾ ಕಂದು ಮಚ್ಚೆಗಳಿರುತ್ತವೆ. ದೆಕ್ಕನಿ ತಳಿಯನ್ನು ಮಾಂಸ ಮತ್ತು ಉಣ್ಣೆ ಉತ್ಪಾದನೆಗೆ ಸಾಕಲಾಗುತ್ತದೆ. ತುಂಡು ಬಾಲ, ರೋಮನ್ ಮೂಗು, ತೆಳುವಾದ ಕತ್ತು, ಚಿಕ್ಕದಾದ ಎದೆಗೂಡು, ಚಪ್ಪಟೆಯಾದ ಪಕ್ಕೆಲುಬುಗಳು, ತೆಳ್ಳನೆಯ ಕಾಲುಗಳು ಈ ತಳಿಯ ಲಕ್ಷಣಗಳು. ಉಣ್ಣೆಯನ್ನು ಒರಟಾದ ಕಂಬಳಿ ಮಾಡಲು ಉಪಯೋಗಿಸುತ್ತಾರೆ. ಇವು ಸಣ್ಣ ಗಾತ್ರದ ಕುರಿಗಳಾಗಿದ್ದು ಟಗರಿನ ತೂಕ ಸುಮಾರು 30ರಿಂದ 35 ಕಿಲೋ ಗ್ರಾಂ, ಹೆಣ್ಣು ಕುರಿಯ ತೂಕ 25ರಿಂದ 30 ಕಿಲೋ ಗ್ರಾಂ ಇರುತ್ತದೆ.

ಬಳ್ಳಾರಿ ತಳಿ

ನಮ್ಮ ರಾಜ್ಯದ ಬಳ್ಳಾರಿ, ಕೊಪ್ಪಳ, ಚಿತ್ರದುರ್ಗ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ತಳಿಯ ಕುರಿಗಳು ಕಂಡುಬರುತ್ತವೆ. ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯಾದ್ಯಂತ ಈ ತಳಿಯ ಕುರಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಕಪ್ಪು ಮೈಬಣ್ಣ ಸಾಮಾನ್ಯವಾಗಿರುತ್ತದೆ. ಜೋತು ಬಿದ್ದ ಕಿವಿಗಳು, ಉದ್ದದೇಹ, ತುಂಡು ಬಾಲ, ಸಣ್ಣ ಕುತ್ತಿಗೆ ಈ ತಳಿಯ ಮುಖ್ಯ ದೇಹಲಕ್ಷಣಗಳು. ಕೊಂಚ ಮಟ್ಟಿಗೆ ಈ ತಳಿಯು ಡೆಕ್ಕನಿ ತಳಿಯಂತೆ ಕಂಡುಬರುತ್ತದೆ. ತುಂಗಭದ್ರಾ ನದಿತೀರದ ಕುರಿ ತಳಿ ಎಂದು ಇದನ್ನು ಕರೆಯಬಹುದಾಗಿದೆ. ಟಗರುಗಳು 30ರಿಂದ 35 ಕಿಲೋಗ್ರಾಂ ತೂಗಿದರೆ ಹೆಣ್ಣು ಕುರಿಗಳು 25ರಿಂದ 30 ಕಿಲೋಗ್ರಾಂ ತೂಗುತ್ತವೆ. ಕುರಿಯೊಂದಕ್ಕೆ ವರ್ಷಕ್ಕೆ 600ರಿಂದ 700 ಗ್ರಾಂ ಉಣ್ಣೆ ಉತ್ಪಾದನೆಯಾಗುತ್ತದೆ. ಟಗರುಗಳಿಗೆ ಕೊಂಬಿರುತ್ತದೆ. ಹೆಣ್ಣು ಕುರಿಗಳಿಗೆ ಕೊಂಬಿರುವುದಿಲ್ಲ.

ಕೆಂಗುರಿ ತಳಿ

ಕಂದು ಬಣ್ಣದ್ದಾಗಿರುವುದರಿಂದ ಈ ಕುರಿಗೆ ಕೆಂಗುರಿ ಎಂಬ ಹೆಸರು ಬಂದಿರಬಹುದು. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳು ಈ ಕುರಿಯ ತವರು ಜಿಲ್ಲೆಗಳು. ಈ ಕುರಿಗೆ ಉಣ್ಣೆ ಇಲ್ಲದೆ ಮೈಭಾಗ ಹಸುವಿನ ಮೈಯಂತಿರುತ್ತದೆ.

ಟಗರುಗಳಿಗೆ ದೊಡ್ಡದಾದ ಕೊಂಬುಗಳಿರುತ್ತವೆ. ಹೆಣ್ಣು ಕುರಿಗಳಿಗೆ ಚಿಕ್ಕ ಕೊಂಬು ಇರುತ್ತದೆ. ಇವು ದೊಡ್ಡ ಗಾತ್ರದ ಕುರಿಗಳು. ವಯಸ್ಕ ಗಂಡು ಕುರಿ 50 ಕಿಲೋ ಗ್ರಾಂಗಳವರೆಗೆ ತೂಗಿದರೆ ಹೆಣ್ಣು ಕುರಿ 40 ಕಿಲೋ ಗ್ರಾಂಗಳವರೆಗೆ ತೂಗುತ್ತದೆ.

ಕೆಂಗುರಿ ಕುರಿ ತಳಿಯನ್ನು ತೆಂಗುರಿ ಎಂದೂ ಕೂಡ ಕರೆಯುತ್ತಾರೆ. ರಾಯಚೂರು



ಕೆಂಗುರಿ ಕುರಿ ತಳಿ

ಜಿಲ್ಲೆಯ ಲಿಂಗಸುಗೂರು ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ಇವು ಹೆಚ್ಚಾಗಿವೆ. ನಮ್ಮ ರಾಜ್ಯದಲ್ಲಿ ಇವುಗಳ ಸಂಖ್ಯೆ ಸುಮಾರು ಒಂದು ಲಕ್ಷ ಐವತ್ತು ಸಾವಿರ.

ಮೈಬಣ್ಣ ಕಡು ಕಂದು ಸಾಮಾನ್ಯ. ಜತೆಗೆ ಬಿಳಿ ಮತ್ತು ಕಪ್ಪು ಬಣ್ಣದವೂ ಮಚ್ಚೆಗಳೊಂದಿಗೆ ಇರುತ್ತವೆ. ಗಂಡು ಕುರಿಗಳಿಗೆ ಕೊಂಬಿದ್ದರೆ ಹೆಣ್ಣು ಕುರಿಗಳಿಗೆ ಇರುವುದಿಲ್ಲ.


ಎಳಗ ಕುರಿ ತಳಿ

ಬಾಗಲಕೋಟೆ, ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಈ ತಳಿಯ ಕುರಿಗಳು ಕಂಡುಬರುತ್ತವೆ. ಉಣ್ಣೆ ಉತ್ಪಾದಿಸದ ಈ ಕುರಿಯ ಮೈಮೇಲಿನ ರೋಮಗಳು ಸಾಮಾನ್ಯವಾಗಿ ಬಿಳಿ ಬಣ್ಣದವು. ಅಷ್ಟಾಗಿ ಪ್ರಸಿದ್ಧಿಗೆ ಬಾರದ ತಳಿ ಇದಾಗಿದೆ.

ಶಿರಾ ಕುರಿ

ತುಮಕೂರು ಜಿಲ್ಲೆಯ ಶಿರಾ, ಕೊರಟಗೆರೆ ಹಾಗೂ ಮಧುಗಿರಿ ತಾಲ್ಲೂಕುಗಳಲ್ಲಿ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಶಿರಾ ಕುರಿಗಳು ಕಂಡುಬರುತ್ತವೆ. ಇವನ್ನು ತುಮಕೂರು ಕುರಿ ಎಂದೂ ಕರೆಯಲಾಗಿದೆ. ಈ ತಳಿಯ ಗುಣಗಳನ್ನು ಸಂಪೂರ್ಣವಾಗಿ ಇನ್ನೂ ವಿವರಣೆಗೊಳಪಡಿಸಿಲ್ಲ. ಸಾಮಾನ್ಯವಾಗಿ ಕಪ್ಪು ಬಣ್ಣ, ಕಪ್ಪು ಮಿಶ್ರಿತ ಕೆಂಪು ಬಣ್ಣದ ಕುರಿಗಳಿವು.

ಈ ಭಾಗದ ರೈತರು ಒಂದೊಂದು ಮಂದೆಯಲ್ಲಿ ಸರಾಸರಿ 200 ರಿಂದ 300 ಕುರಿಗಳನ್ನು ಸಾಕುತ್ತಾರೆ. ಸುಗ್ಗಿ ನಂತರದ ಕಾಲಕ್ಕೆ ಇವುಗಳನ್ನು "ಅಲೆಮಾರಿ ಮಂದೆ"ಗಳನ್ನಾಗಿಸಿ ಹೊಲಗದ್ದೆಗಳಲ್ಲಿ ಮೇಯಿಸಲು ಬಹುದೂರದವರೆಗೂ ರೈತರು ಇವುಗಳೊಂದಿಗೆ ಸಾಗುತ್ತಾರೆ. ಕೃಷಿ ಭೂಮಿಗೆ ಉತ್ತಮ ಗೊಬ್ಬರವನ್ನು ಈ ಕುರಿಗಳು ಒದಗಿಸುತ್ತವೆ. ದೊಡ್ಡ ದೊಡ್ಡ ರೈತರು ತಮ್ಮ ಹೊಲಗದ್ದೆಗಳಲ್ಲಿ ಇವುಗಳನ್ನು ಮೇಯಿಸಲು ಆಹ್ವಾನಿಸುತ್ತಾರೆ. ಹೊಲದಲ್ಲೊಂದು ಕೊಟ್ಟಿಗೆ ನಿರ್ಮಿಸಿ ಅವು ಅಲ್ಲಿ ರಾತ್ರಿಯೆಲ್ಲಾ ವಿಶ್ರಮಿಸುವಂತೆ ಮಾಡಿ ಕುರಿ ಪಿಚ್ಚೆಗೆ (ಹಿಕ್ಕೆ) ಹಾಕುವಂತೆ ಮಾಡಲಾಗುತ್ತದೆ. ಇದು ಉತ್ತಮ ಕುರಿ ಗೊಬ್ಬರ. ಹೊಲದೊಡೆಯ ಕುರಿರೈತನಿಗೆ ಕುರಿಯೊಂದಕ್ಕೆ ಐವತ್ತು ಪೈಸೆ ನೀಡಬೇಕಾಗುತ್ತದೆ. ಈ ಕುರಿಯ ಉಣ್ಣೆ ಸುರುಳಿಯಾಕಾರದಲ್ಲಿರುತ್ತದೆ. ಕಂಬಳಿ ನೇಯಲು ಇದು ಅನುಕೂಲಕರ. ಇಂತಹ ಕಂಬಳಿ ಹೆಚ್ಚು ಬೆಚ್ಚಗಿರುತ್ತದೆ. ಆದ್ದರಿಂದ ಈ ಉಣ್ಣೆಗೆ ಹೆಚ್ಚು ಬೆಲೆ ಹಾಗೂ ಬೇಡಿಕೆ. ಈ ಕುರಿಗಳಲ್ಲಿ ನಾವು ಕಾಲುಬಾಯಿ ಜ್ವರ ಕಂಡಿಲ್ಲ ಎಂದು ರೈತರೂ ಹೇಳುತ್ತಾರೆ, ಪಶುವೈದ್ಯರೂ ದನಿಗೂಡಿಸುತ್ತಾರೆ.



ಶಿರಾ ಕುರಿ

ನಮ್ಮ ದೇಶದ ಕುರಿ ತಳಿಗಳನ್ನು ಭೌಗೋಳಿಕವಾಗಿ ಮತ್ತು ಕೃಷಿ ಹವಾಗುಣಕ್ಕನುಗುಣವಾಗಿ ನಾಲ್ಕು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳೆಂದರೆ ಉತ್ತರದ ಶೀತೋಷ್ಣ ತಳಿಗಳಾದ ಕಾಶ್ಮೀರ್ ಮೆರಿನೋ, ಪೂಂಚಿ, ಬಕರ್‌ವಾಲ್, ಗಡ್ಡಿ, ರಾಂಪುರ್ ಬುಷೈರ್, ಕರ್ನಾ, ಗುರೇಜ್ ಮತ್ತು ಚಂಗತಂಗಿ ತಳಿಗಳೆಂದು, ನೈರುತ್ಯ ಭಾಗದ ತಳಿಗಳಾದ ಮಾರ್‌ವಾರಿ, ಜೈಸಲ್ಮೇರಿ, ಸೋನಾಡಿ, ಪಟ್ಟನವಾಡಿ, ಮುಜಫರ್ ನಗರಿ, ಚೋಕ್ಲಾ, ಮಗರ ಇತ್ಯಾದಿ ತಳಿಗಳೂ, ದಕ್ಷಿಣದ ಕುರಿ ತಳಿಗಳಾದ ನಮ್ಮ ರಾಜ್ಯದ ತಳಿಗಳೇ ಆದ ಡೆಕ್ಕನಿ, ಬಳ್ಳಾರಿ, ಬಂಡೂರು, ಹಾಸನ, ಕೆಂಗುರಿ, ಎಳಗ ತಳಿಗಳ ಜೊತೆಗೆ ನೆಲ್ಲೂರು, ವಂಬೂರ್, ಕೊಯಮತ್ತೂರು, ನೀಲಗಿರಿ, ಮದ್ರಾಸ್ ಕೆಂಪು, ರಾಮನಾಡು ಬಿಳಿ, ತಿರುಚ್ಚಿ ಕಪ್ಪು ತಳಿಗಳು ಮತ್ತು ಪೂರ್ವ ಭಾಗದ ಗಂಜಾಂ, ಶಹಬಾದಿ, ಗರೋಲ್, ಚೋಟಾ ನಾಗಪುರಿ, ಮತ್ತು ಬಳಂಗೀರ್ ಹೆಸರಿನ ತಳಿಗಳೆಂದು ವಿಂಗಡಿಸಿಕೊಳ್ಳಲಾಗಿದೆ.

❑

ಅಧ್ಯಾಯ – 5

ಮೇಕೆಗಳು

ಇಪ್ಪತ್ತು ಬಗೆಯ ಮೇಕೆ ತಳಿಗಳು ನಮ್ಮ ದೇಶದಲ್ಲಿವೆ. ಇವುಗಳಲ್ಲಿ ಐದು ಪ್ರಮುಖ ತಳಿಗಳು ನಮ್ಮ ರಾಜ್ಯದಲ್ಲಿವೆ. ಡೆಕ್ಕನಿ, ಉಸ್ಮನಾಬಾದಿ, ಮಲಬಾರಿ, ನಂದಿದುರ್ಗಿ ಮತ್ತು ಬಿದರಿ ತಳಿಯ ಮೇಕೆಗಳು ಮುಖ್ಯವಾದವು. ಮೇಕೆ ತಳಿಗಳನ್ನು ಕಾಪಾಡಿಕೊಂಡು ಬರುವಲ್ಲಿ ರೈತರ ಪಾತ್ರ ಬಹಳಷ್ಟಿದೆ. 2003 ರ ಜಾನುವಾರು ಗಣತಿಯಂತೆ ನಮ್ಮ ರಾಜ್ಯದ ಮೇಕೆಗಳ ಸಂಖ್ಯೆ 44.84 ಲಕ್ಷಗಳು.

ನಮ್ಮ ದೇಶದಲ್ಲಿ ಕಂಡುಬರುವ ಪ್ರಮುಖವಾದ ಇತರೆ ದೇಸಿ ಮೇಕೆ ತಳಿಗಳೆಂದರೆ, ಗಡ್ಡಿ, ಚೆಗು, ಸಿರೋಹಿ, ಮಾರವಾರಿ, ಬೀಟಲ್, ಬಾರಬಾರಿ, ಜಮುನಾಪರಿ, ಮೆಹಸಾನ, ಸುರ್ತಿ, ಸಂಗಮನೇರಿ, ಗಂಜಾಮ್ ಮತ್ತು ಬೆಂಗಾಲ್ ತಳಿಗಳು.

ನಮ್ಮ ರಾಜ್ಯದಲ್ಲಿ ನಂದಿದುರ್ಗ, ಬಿದರಿ, ಡೆಕ್ಕಣಿ, ಉಸ್ಮಾನಬಾದಿ ಮತ್ತು ಮಲಬಾರಿ ಎಂಬ ದೇಸಿ ಮೇಕೆ ತಳಿಗಳಿವೆ. ಮೇಕೆಗಳನ್ನು ಮಾಂಸ ಮತ್ತು ಹಾಲು ಉತ್ಪಾದನೆಗಾಗಿ ಸಾಕಲಾಗುತ್ತಿದೆ. ಹಾಲಿಗಾಗಿ ಮತ್ತು ಮಾಂಸಕ್ಕಾಗಿ ಸಾಕುವ ಮೇಕೆ ತಳಿಗಳೆಂದರೆ, ಉಸ್ಮನಾಬಾದಿ, ಮಲಬಾರಿ, ಜಮುನಾಪರಿ, ಬೀಟಲ್ ಮತ್ತು ಜರ್ಬಾಣ. ಪ್ರಮುಖವಾಗಿ ಮಾಂಸಕ್ಕಾಗಿ ಸಾಕಲಾಗುವ ಮೇಕೆ ತಳಿಗಳು: ಬಿದರಿ, ನಂದಿ, ಸುರತಿ, ಬಾರಬಾರಿ, ಮಾರವಾರಿ, ಸಿರೋಹಿ, ಗಂಜಾಂ, ಕನ್ನೈಡು ಮತ್ತು ಸಂಗಮನೇರಿ. ಕೃಷಿ ಕಾರ್ಮಿಕರು ಮತ್ತು ಅತಿ ಸಣ್ಣ ರೈತರು ಸಂಗಾತಿ ಪ್ರಾಣಿಯಾಗಿ ಒಂದೆರಡು ಆಡುಗಳನ್ನು ಸಾಕಿಕೊಂಡು ಅವುಗಳ ಸಂತಾನಾಭಿವೃದ್ಧಿಯಲ್ಲಿ ತೊಡಗುತ್ತಾರೆ. ಹಲವಾರು ಕುಟುಂಬಗಳಲ್ಲಿ ಬಾಲಕ, ಬಾಲಕಿಯರೇ ಮೇಕೆಗಳ ಪೋಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಮೇಕೆ ಸಾಕಣೆಯು ಬಡಜನತೆಗೆ ಆರ್ಥಿಕವಾಗಿ ಊರುಗೋಲಾಗಿದೆ.


ಮೇಕೆ ಹಾಲಿಗೂ ಬೇಡಿಕೆಯಿದೆ. ಮೇಕೆಗಳು ಒಂದು ಸಣ್ಣ ಕುಟುಂಬಕ್ಕಾಗುವಷ್ಟು ಹಾಲನ್ನು ಕೊಡುವುದರಿಂದ ಮೇಕೆಗಳನ್ನು "ಬಡ ರೈತನ ಕಾಮಧೇನು" ಎಂದು ಕರೆಯಲಾಗಿದೆ.

ನಂದಿದುರ್ಗ ತಳಿ

ಚಿತ್ರದುರ್ಗ ಜಿಲ್ಲೆಯಲ್ಲಿ ಮತ್ತು ಅದರ ಆಸುಪಾಸಿನ ಜಿಲ್ಲೆಗಳಲ್ಲಿ ನಂದಿದುರ್ಗ ಮೇಕೆ ತಳಿಯು ಕಂಡುಬರುತ್ತದೆ. ಇವುಗಳ ಸಾಮಾನ್ಯ ಬಣ್ಣ ಬಿಳಿ. ಮಧ್ಯಮ ಗಾತ್ರದ ಆಡುಗಳಿವು. ಮೂಗು ಉಬ್ಬಿಕೊಂಡು ಊದಿಕೊಂಡಂತೆ ಕಾಣುತ್ತದೆ.

ಉಸ್ಮನಾಬಾದಿ ಅಥವಾ ಬಿದರಿ ತಳಿ

ಮಹಾರಾಷ್ಟ್ರದ ಉದ್ಗೀರ್, ಲಾತೂರ್ ಮತ್ತು ತುಲ್ಜಾಪುರ ಜಿಲ್ಲೆಗಳಲ್ಲಿ ಕಂಡುಬರುವ ಉಸ್ಮನಾಬಾದಿ ತಳಿಯ ಮೇಕೆಗಳು ನಮ್ಮ ರಾಜ್ಯದ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲೂ ಕಂಡುಬರುತ್ತವೆ. ಅಂತಹ ಉಸ್ಮನಾಬಾದಿ ತಳಿಗಳನ್ನು ಬಿದರಿ ತಳಿಗಳೆಂದು ನಮ್ಮ ರಾಜ್ಯದಲ್ಲಿ ಗುರುತಿಸಲಾಗುತ್ತಿದೆ.



ಬಿದರಿ ಮೇಕೆ

ಇವು ದೊಡ್ಡ ಗಾತ್ರದ ತಳಿಗಳು. ವಯಸ್ಕ ಗಂಡು ಮೇಕೆಗಳು 30ರಿಂದ 34 ಕಿಲೋ ಗ್ರಾಂ ತೂಗುತ್ತವೆ. ಹೆಣ್ಣು ಮೇಕೆಗಳು 30 ರಿಂದ 32 ಕಿಲೋಗ್ರಾಂ ತೂಗುತ್ತವೆ. ಗಂಡು ಮತ್ತು ಹೆಣ್ಣು ಮೇಕೆಗಳು ಸಾಮಾನ್ಯವಾಗಿ ಒಂದೇ ತೂಕದವಾಗಿರುತ್ತವೆ. ಸರಾಸರಿಯ ಲೆಕ್ಕಾಚಾರದಲ್ಲಿ 30ರಿಂದ 33 ಕಿಲೋ ಗ್ರಾಂಗಳವರೆಗೆ ತೂಗುತ್ತವೆ. ಕಪ್ಪು, ಬಿಳಿ, ಕಂದು ಬಣ್ಣದ ಮೇಕೆಗಳಿವು. ಒಮ್ಮೊಮ್ಮೆ ಮಚ್ಚೆಗಳೂ ಕಂಡುಬರುತ್ತವೆ. ಹೆಣ್ಣು ಮೇಕೆಗಳಿಗೆ ಸಾಧಾರಣವಾಗಿ ಕೊಂಬಿರುವುದಿಲ್ಲ. ಗಂಡು ಮೇಕೆಗಳಿಗೆ ಉದ್ದನೆಯ ಕೊಂಬಿರುತ್ತವೆ. ದಿನನಿತ್ಯದ ಹಾಲು ಉತ್ಪಾದನೆ ಅರ್ಧ ಲೀಟರಿನಿಂದ 1.5 ಲೀಟರುಗಳವರೆಗಿರುತ್ತದೆ. ಮರಿ ಹಾಕಿದ ಮೇಲೆ ಸುಮಾರು

ನಾಲ್ಕು ತಿಂಗಳವರೆಗೆ ಹಾಲು ಕೊಡುತ್ತವೆ. ಅವಳಿಗಳನ್ನು ಈಯುವುದು ಸರ್ವೇ ಸಾಮಾನ್ಯ. ಇದು ಹಾಲು ಮತ್ತು ಮಾಂಸದ ತಳಿ. ಬಿದರಿ ಮೇಕೆಗಳು ಅತಿ ಎತ್ತರದ ಮೇಕೆಗಳು.

ಮಲಬಾರಿ ಮೇಕೆಗಳು

ಕೇರಳದ ಕಲ್ಲಿಕೋಟೆ, ಕಣ್ಣಾನೂರು ಮತ್ತು ಮಲ್ಲಪ್ಪುರಂ ಜಿಲ್ಲೆಗಳ ತಳಿ. ಕೇರಳದ ಗಡಿಭಾಗಕ್ಕೆ ಅಂಟಿಕೊಂಡ ನಮ್ಮ ರಾಜ್ಯದ ಜಿಲ್ಲೆಗಳಾದ ಮೈಸೂರು, ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಲಬಾರಿ ಮೇಕೆಗಳು ಕಂಡುಬರುತ್ತವೆ. ಇವು ದೊಡ್ಡ ಗಾತ್ರದ ತಳಿಗಳು. ದೇಹ ತೂಕ 30 ರಿಂದ 38 ಕಿಲೋ ಗ್ರಾಂಗಳವರೆಗೆ ಇರುತ್ತದೆ. ಬಿಳಿ ಮತ್ತು ಕಪ್ಪು ಬಣ್ಣದ ಮೇಕೆಗಳಿವು. ಗಂಡು ಮೇಕೆಗಳಲ್ಲಿ ಗಡ್ಡದ



ಮಲಬಾರಿ ಮೇಕೆ

ಕೂದಲು ಉದ್ದವಾಗಿ ಬೆಳೆದಿರುತ್ತದೆ. ಕೆಲವು ಹೆಣ್ಣು ಮೇಕೆಗಳಲ್ಲಿಯೂ ಗಡ್ಡದ ಕೂದಲು ಬೆಳೆದಿರುತ್ತದೆ.

ಹಾಲು ಮತ್ತು ಮಾಂಸದ ಉತ್ಪಾದನೆಗಾಗಿ ಮಲಬಾರಿ ತಳಿಯನ್ನು ಸಾಕಲಾಗುತ್ತಿದೆ. ಹಾಲಿನ ಉತ್ಪಾದನೆಯು ದಿನಕ್ಕೆ ಅರ್ಧದಿಂದ ಒಂದು ಕಿಲೋ ಗ್ರಾಂನಷ್ಟು ಇರುತ್ತದೆ. ಹೆಣ್ಣು ಮತ್ತು ಗಂಡು ಎರಡಲ್ಲೂ ಚಿಕ್ಕದಾದ ಕೊಂಬುಗಳಿರುತ್ತವೆ. ಮೊದಲ ಮರಿ ಹಾಕಿದಾಗ ಇವುಗಳ ವಯಸ್ಸು ಸುಮಾರು 30 ತಿಂಗಳುಗಳು. ಬೇರೆ ತಳಿಗಳಿಗೆ ಹೋಲಿಸಿದಲ್ಲಿ ಎರಡು ಮರಿಗಳನ್ನು ಹಾಕುವ ಪ್ರಮಾಣ ಹೆಚ್ಚು. ಅಪರೂಪಕ್ಕೆ ಒಂದು ಹೆರಿಗೆಯಲ್ಲಿ ನಾಲ್ಕು ಮರಿಗಳನ್ನು ಕೂಡ ಹಾಕುತ್ತವೆ.

ಸಂಗಮನೇರಿ

ಮಹಾರಾಷ್ಟ್ರದ ಪುಣೆ ಮತ್ತು ಅಹಮದ್‌ನಗರ ಜಿಲ್ಲೆಗಳ ತಳಿಯಿದು. ಸಂಗಮನೇರಿ ತಳಿಯ ಗಂಡು ಮೇಕೆಗಳು ಸುಮಾರು 38 ಕಿಲೋ ಗ್ರಾಂ ಹಾಗೂ ಹೆಣ್ಣು ಮೇಕೆಗಳು ಸುಮಾರು 28 ಕಿಲೋ ಗ್ರಾಂ ತೂಗುತ್ತವೆ. ಇವು ಮಧ್ಯಮ ಗಾತ್ರದ ಮೇಕೆಗಳು.

ಸಂಗಮನೇರಿ ತಳಿಯ ಮೈಬಣ್ಣವು ಬಿಳಿ ಅಥವಾ ಕಪ್ಪು ಅಥವಾ ಕಂದು ಬಣ್ಣದ್ದಾಗಿದ್ದು, ಈ ಬಣ್ಣಗಳ ಮೇಲೆ ಇತರೆ ಬಣ್ಣದ ಮಚ್ಚೆಗಳಿರುತ್ತವೆ. ಕಿವಿಗಳು ಮಧ್ಯಮ ಗಾತ್ರದ್ದಾಗಿದ್ದು ಜೋತಾಡುತ್ತಿರುತ್ತವೆ. ಗಂಡು ಮತ್ತು ಹೆಣ್ಣು ಮೇಕೆಗಳಿಗೂ ಕೊಂಬಿರುತ್ತವೆ. ಒಂದು ವರ್ಷ ಎರಡು ತಿಂಗಳು ವಯಸ್ಸಾದ ನಂತರ ಮರಿ ಹಾಕುತ್ತವೆ. ಸಾಮಾನ್ಯವಾಗಿ ಶೇ. 75 ರಷ್ಟು ತಾಯಿ ಮೇಕೆಗಳು ಒಂದೇ ಮರಿಯನ್ನು, ಶೇ. 20ರಷ್ಟು ತಾಯಿ ಮೇಕೆಗಳು 2 ಮರಿಗಳನ್ನು ಶೇ. 3ರಿಂದ 4ರಷ್ಟು ತಾಯಿ ಮೇಕೆಗಳು ಮೂರು ಮರಿಗಳನ್ನು ಹಾಕುತ್ತವೆ.

ನಿತ್ಯ ಸುಮಾರು ಅರ್ಧ ಲೀಟರ್‌ನಿಂದ ಒಂದು ಲೀಟರುಗಳವರೆಗೆ ಹಾಲು ಕರೆಯುತ್ತವೆ. ಮರಿ ಹಾಕಿದ ನಂತರ, ಹಾಲು ಕರೆಯುವ ಅವಧಿ 5ರಿಂದ 6 ತಿಂಗಳು. ಸಂಗಮನೇರಿ ಪ್ರಮುಖವಾಗಿ ಮಾಂಸದ ತಳಿ.

ಕನ್ನೈಡು

ಕನ್ನೈಡು (ಕನ್ನಿ ಆಡು) ಮೇಕೆ ತಳಿಯನ್ನು ಪುಲ್ಲೈಡು ಮತ್ತು ಕರಪಾಡು ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ. ಇದು ತಮಿಳುನಾಡಿನ ರಾಮನಾಥಪುರಂ ಮತ್ತು ತಿರುನೆಲ್ವೇಲಿ ಜಿಲ್ಲೆಗಳ ತಳಿ. ಗಂಡು ಮೇಕೆಗಳ ಸರಾಸರಿ ತೂಕ 35 ಕಿಲೋ ಗ್ರಾಂ ಹೆಣ್ಣು ಮೇಕೆಗಳ ಸರಾಸರಿ ತೂಕ 28 ಕಿಲೋ ಗ್ರಾಂ. ಇವು ಎತ್ತರದ ಮೇಕೆಗಳು. ಮೈ ಬಣ್ಣ ಕಪ್ಪು ಅಥವಾ ಬಿಳಿ. ಕೆಲವೊಮ್ಮೆ ವಿರುದ್ಧ ಬಣ್ಣದ ಮಚ್ಚೆಗಳಿರುತ್ತವೆ. ಗಂಡು ಮೇಕೆಗೆ ಕೊಂಬಿದ್ದರೆ ಹೆಣ್ಣು ಮೇಕೆಗೆ ಇರುವುದಿಲ್ಲ. ಇದು ಮಾಂಸದ ತಳಿಯ ಮೇಕೆ. ಈ ತಳಿಯಲ್ಲಿ ಎರಡು ಮರಿ ಹಾಕುವ ಸಂಭವನೀಯತೆ ತೀರಾ ಕಡಿಮೆ.

❑


ಅಧ್ಯಾಯ - 6

ಹಂದಿಗಳು

ಜಾಗತಿಕ ಮಟ್ಟದಲ್ಲಿ ಗುರುತಿಸಲಾಗಿರುವ 54 ಹಂದಿ ತಳಿಗಳ ಪೈಕಿ ನಮ್ಮ ದೇಶದ ಹಂದಿ ತಳಿಗಳ ಸಂಖ್ಯೆ ಮೂರು ಮಾತ್ರ. 2003 ರ ಜಾನುವಾರು ಗಣತಿಯಂತೆ ನಮ್ಮ ರಾಜ್ಯದ ಹಂದಿಗಳ ಸಂಖ್ಯೆ 3.12 ಲಕ್ಷಗಳು. ನಮ್ಮ ರಾಜ್ಯದಲ್ಲಿರುವ ಹಂದಿ ತಳಿಯನ್ನು ಅಂಕಾಮಲಿ ಎಂದು ಕರೆಯಲಾಗಿದೆ. ಜತೆಗೆ, ವಿವರಿಸದ ದೇಸಿ ಎನಿಸಿಕೊಳ್ಳಬಹುದಾದ ತಳಿಗಳೂ ಇವೆ. ಕಸವನ್ನು ರಸ ಮಾಡುವ ಗುಣ ಹಂದಿಗಳಿಗಿದೆ.

ಅಂಕಾಮಲಿ

ಕೇರಳದ ಎರ್ನಾಕುಲಂ ಜಿಲ್ಲೆಯಲ್ಲಿರುವ ಅಂಕಾಮಲಿ ಪ್ರದೇಶದಿಂದಾಗಿ ಈ ಹಂದಿ ತಳಿಗೆ ಅಂಕಾಮಲಿ ತಳಿ ಎಂಬ ಹೆಸರು ಬಂದಿದೆ. ಈ ತಳಿಯ ಹಂದಿಗಳು ಕೇರಳ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಲ್ಲಿ ಕಂಡು ಬರುತ್ತವೆ.



ಅಂಕಾಮಲಿ ಹಂದಿ ತಳಿ

ಹಿತ್ತಲಲ್ಲಿ, ತಿಪ್ಪೆಗಳಲ್ಲಿ, ಕಸದ ಗುಂಡಿಗಳಲ್ಲಿ, ಹಾದಿಬೀದಿಗಳಲ್ಲಿ ಮೇಯುತ್ತಾ ಬೆಳೆಯುತ್ತವೆ. ಅಡುಗೆ ಮನೆಯ ತ್ಯಾಜ್ಯ ಪದಾರ್ಥವಾದ ಕಲಗಚ್ಚು (ಕುಡತಿ) ತಿಂದು ದಷ್ಟಪುಷ್ಟವಾಗಿ ಬೆಳೆಯುತ್ತವೆ.

ಕಪ್ಪು ಬಣ್ಣದ ಹಂದಿಗಳಿವು. ಒಮ್ಮೊಮ್ಮೆ ಬಿಳಿಯ ಮಚ್ಚೆಗಳಿರುತ್ತವೆ. ಉದ್ದವಾಗಿರುವ ಮೂತಿ ಮೂಗಿನತ್ತ ಮೇಲಕ್ಕೆ ತಿರುಗಿಕೊಂಡಿರುತ್ತದೆ. ಮಧ್ಯಮ ಗಾತ್ರದ ಹಂದಿಗಳಿವು. ಹೊಟ್ಟೆಭಾಗ ಇಳಿಬಿದ್ದು ನೇತಾಡುತ್ತಿರುತ್ತದೆ. ತಲೆಭಾಗ, ಭುಜದ ಭಾಗ ದೊಡ್ಡದಾಗಿರುತ್ತದೆ. ಹೊಟ್ಟೆಯ ತಳಭಾಗದಲ್ಲಿ 6 ರಿಂದ 12 ಮೊಲೆಗಳಿರುತ್ತವೆ. ಬಾಲ ಗಾತ್ರದಲ್ಲಿ ತೆಳು ಮತ್ತು ಉದ್ದವಾಗಿರುತ್ತದೆ.

ಹೆಣ್ಣು ಹಂದಿಗಳು ಎಂಟರಿಂದ ಹತ್ತು ಮರಿಗಳನ್ನು ಹಾಕುತ್ತವೆ. ಬೆಳೆದ ಹಂದಿಯ ತೂಕ ಸರಾಸರಿ 40 ಕಿಲೋ ಗ್ರಾಂಗಳು. ಒಂಬತ್ತರಿಂದ ಹತ್ತು ತಿಂಗಳು ವಯಸ್ಸಾದ ಮೇಲೆ ಮಾಂಸಕ್ಕಾಗಿ ಬಳಸಬಹುದು.

❑

ಅಧ್ಯಾಯ - 7

ನಾಯಿಗಳು

ನಮ್ಮ ರಾಜ್ಯದ ಮುಧೋಳ್ ತಳಿಯ ನಾಯಿಗೆ ಹೆಚ್ಚು ಬೇಡಿಕೆಯಿದೆ. ಬಿಜಾಪುರ ಜಿಲ್ಲೆಯ ಮುಧೋಳ್ ಮತ್ತು ಸುತ್ತಮುತ್ತ ಈ ತಳಿಯ ನಾಯಿಗಳಿವೆ. ಕೃಷಿಕರು ಮುಧೋಳ್ ನಾಯಿಯನ್ನು ಸಂಗಾತಿ ಪ್ರಾಣಿಯಾಗಿ, ಬೇಟೆ ನಾಯಿಯಾಗಿ ಮತ್ತು ಕಾವಲು ನಾಯಿಯಾಗಿ ಬಳಸುತ್ತಾರೆ. ಹಳ್ಳಿಗರ ಭಾಷೆಯಲ್ಲಿ ಈ ನಾಯಿಯ ಹೆಸರು 'ಕಾರವಾನಿ' ನಾಯಿ. ಈ ಕಾರಣಕ್ಕಾಗಿ ಈ ನಾಯಿಯನ್ನು ಕಾರವಾನ್ ಹೌಂಡ್ ಅಥವಾ ಮುಧೋಳ್ ಹೌಂಡ್ ಎಂದೂ ಕರೆಯಲಾಗುತ್ತಿದೆ. ಒಂದೊಮ್ಮೆ ಮುಧೋಳ್ ಪ್ರಾಂತ್ಯವನ್ನು ಆಳಿದ ಸಾಮಂತ ರಾಜನಾಗಿದ್ದ ಮಾಲೋಜಿರಾವ್ ಘೋರ್ಪಡೆ ಅವರು ಎರಡು ನಾಯಿಮರಿಗಳನ್ನು ಇಂಗ್ಲೆಂಡಿನ ರಾಜ ಐದನೇ ಜಾರ್ಜ್ ಅವರಿಗೆ ಕೊಡುಗೆಯಾಗಿ ನೀಡಿದರಂತೆ. ಆ ನಾಯಿಮರಿಗಳ ಚಾಲಾಕಿತನವನ್ನು ಮೆಚ್ಚಿಕೊಂಡ ರಾಜ ಜಾರ್ಜ್ ಅವುಗಳನ್ನು "ಮುಧೋಳ್ ಹೌಂಡ್" ಎಂದು ಕರೆದಿದ್ದಾನೆ. ಇದರ ಕೂದಲನ್ನು 'ಪಶ್ಮಿ' ಕೂದಲು ಎಂದು ಹೆಸರಿಸಲಾಗಿದೆ.

ಮುಧೋಳ್ ನಾಯಿಯ ತಲೆ ಕೊಳವೆಯಾಕಾರದಲ್ಲಿ ಉದ್ದವಾಗಿ ಇರುತ್ತದೆ. ಉದ್ದ ಮತ್ತು ಶಕ್ತಿಶಾಲಿ ದವಡೆಗಳಿರುತ್ತವೆ.



ಮುಧೋಳ್ ನಾಯಿ

ಇದೊಂದು ಎತ್ತರವಾದ ನಾಯಿ, ರಾಜಗಾಂಭೀರ್ಯದ ನಡೆ ಇದರ ಲಕ್ಷಣ. ಕತ್ತು ಉದ್ದ, ದೇಹ ಉದ್ದ, ಕಾಲುಗಳೂ ಉದ್ದ, ಬೆನ್ನಿಗಂಟಿಕೊಂಡ ಹೊಟ್ಟೆ, ಶಕ್ತಿಶಾಲಿ ಎದೆ, ಈ ತಳಿಯ ಇತರ ದೇಹ ಲಕ್ಷಣಗಳು. ತಮಿಳುನಾಡಿನ ರಾಜಪಾಳಯಂ ನಾಯಿ ಮುಧೋಳ್ ನಾಯಿಯಂತೆಯೇ ಕಂಡುಬರುತ್ತದೆ.

2003 ರ ಜಾನುವಾರು ಗಣತಿಯಂತೆ ರಾಜ್ಯದಲ್ಲಿರುವ ಒಟ್ಟು ನಾಯಿಗಳ ಸಂಖ್ಯೆ 26.8 ಲಕ್ಷಗಳು. ಇದರಲ್ಲಿ ವಿವರಣೆಗೊಳಪಡದ ನಾಯಿಗಳು ಮತ್ತು ಬೀದಿ ನಾಯಿಗಳೂ ಸೇರಿವೆ.

❑

ಅಧ್ಯಾಯ - ೮


ಜಾನುವಾರು ಸಂಬಂಧಿ ಪರಿಕರಗಳು

ಜಾನುವಾರುಗಳನ್ನು ಪಳಗಿಸಿಕೊಳ್ಳಲು, ಕೃಷಿ ಸಂಬಂಧೀ ಚಟುವಟಿಕೆಗಳಲ್ಲಿ ದುಡಿಸಿಕೊಳ್ಳಲು ಕೆಲವು ಪರಿಕರಗಳ ಅಗತ್ಯತೆಯಿದೆ. ಅಂತಹ ದೇಸಿ ಪರಿಕರಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಕುಕ್ಕೆ

ಬಿದಿರಿನ ದಬ್ಬೆ ಇಲ್ಲವೇ ಪೊದೆಗಿಡಗಳ ಬರಲುಗಳಿಂದ ಕುಕ್ಕೆಯನ್ನು ಹೆಣೆಯಲಾಗುತ್ತದೆ. ಜಾನುವಾರುಗಳ ಮೂತಿಯ ಗಾತ್ರಕ್ಕೆ ಅನುಗುಣವಾಗಿ ಕುಕ್ಕೆಯ ಗಾತ್ರ ಇರುತ್ತದೆ. ಚಿಕ್ಕ ದನಗಳಾದರೆ ಚಿಕ್ಕ ಕುಕ್ಕೆ ಮತ್ತು ದೊಡ್ಡ ದನಗಳಾದರೆ ದೊಡ್ಡ ಕುಕ್ಕೆ ಹೆಣೆಯಲಾಗುತ್ತದೆ.

ರಾಗಿ ಹೊಲದಲ್ಲಿ ಒತ್ತಾಗಿರುವ ರಾಗಿ ಪೈರನ್ನು ತೆಗೆಯಲು ಕುಂಟೆ ಹೊಡೆಯುವಾಗ ಕುಕ್ಕೆಯನ್ನು ಜಾನುವಾರುಗಳ ಮೂತಿಗೆ ಹಾಕಲಾಗುತ್ತದೆ. ಇದು



ಬಿದಿರಿನ ದಬ್ಬೆಯಿಂದ ಹೆಣೆದ ಕುಕ್ಕೆ


ಪೈರುಗಳಿಗೆ ಬಾಯಿ ಹಾಕಿ ಮೇಯದಿರಲೆಂದು. ಕಣದಲ್ಲಿ ರಾಗಿಯ ಅರಿ ತುಳಿಸುವಾಗ ಅದನ್ನು ಮೇಯದಿರಲೆಂದು ಕೂಡ ಕುಕ್ಕೆ ಹಾಕಲಾಗುತ್ತದೆ. "ಕುಕ್ಕೆ ಹಾಕಲಿಲ್ಲವೆಂದರೆ ಕೆಲಸವೇ ಕೆಟ್ಟು ಹೋಗುತ್ತದೆ" ಎನ್ನುತ್ತಾರೆ ರೈತರು.

ರೈತರು ತಮಗೆ ಅಗತ್ಯವಿರುವಷ್ಟು ಕುಕ್ಕೆಗಳನ್ನು ತಾವೇ ಹೆಣೆದುಕೊಳ್ಳುತ್ತಾರೆ.

ಸಣ್ಣ ರೈತರು, ಅತಿ ಸಣ್ಣ ರೈತರು, ಕೃಷಿಕೂಲಿ ಕಾರ್ಮಿಕರು ಕುಕ್ಕೆಗಳನ್ನು ಹೆಣೆದು ಸಂತೆಗಳಲ್ಲಿ ಮಾರುತ್ತಾರೆ. ಕಬ್ಬಿಣದ ಕಂಬಿಗಳಲ್ಲಿ ಹೆಣೆದ ಕುಕ್ಕೆಗಳು ಸಂತೆಗಳಲ್ಲಿ ಸಿಗುತ್ತವೆ.

ಕಾಲುಬಂಧ

ಜಾನುವಾರುಗಳಲ್ಲಿ ತುಡುಗು ದನಗಳಿರುತ್ತವೆ. ಅವುಗಳಲ್ಲಿಯೂ ಸಾಮಾಜಿಕ ಚೌಕಟ್ಟಿರುತ್ತದೆ. ನಾಯಕತ್ವ ಮತ್ತು ಹಿಂಬಾಲಕತ್ವ ಹಾಸು ಹೊಕ್ಕಾಗಿರುತ್ತದೆ. ನಾಯಕತ್ವದ ಜಾನುವಾರು ಒಮ್ಮೊಮ್ಮೆ ಘಾಟಿತನದಿಂದ ವರ್ತಿಸುತ್ತದೆ. ಮೇಯಲು



ಕಾಲುಬಂಧ


ಮಂದೆಯಲ್ಲಿರುವಾಗ ಹೊಲಗದ್ದೆ ತೋಟಗಳಿಗೆ ನುಗ್ಗುವುದು, ಹೊತ್ತಿಗೆ ಮುಂಚಿತವಾಗಿಯೇ ಮನೆಯತ್ತ ಹೊರಡುವುದು ಇಂಥ ಘಾಟಿ ದನಗಳ ಕೆಲವರ್ತನೆಗಳು. ಈ ವರ್ತನೆಯನ್ನು ಹದ್ದು ಬಸ್ತಿನಲ್ಲಿಡಲು, ಅವುಗಳ ಬಿರಬಿರ ನಡಿಗೆಗೆ ತಡೆ ಒಡ್ಡಲು ರೈತರು ಕಂಡುಕೊಂಡ ಉಪಾಯವೇ ಕಾಲುಬಂಧ.

ಯಾವುದಾದರೊಂದು ಮುಂಗಾಲಿನ ಪಾದಕ್ಕೆ ಒಂದು ಹಗ್ಗ ಕಟ್ಟಿ, ಆ ಹಗ್ಗವನ್ನು ಒಂದು ಅಥವಾ ಎರಡು ಅಡಿಯಷ್ಟು ಉದ್ದ ಬಿಟ್ಟು ಕತ್ತಿಗೆ ಕಟ್ಟಲಾಗುತ್ತದೆ. ದನದ ಗಾತ್ರವನ್ನು ಅವಲಂಬಿಸಿ ಈ ಹಗ್ಗದ ಉದ್ದವನ್ನು ತೀರ್ಮಾನಿಸಿ ಕಟ್ಟಲಾಗುತ್ತದೆ. ಇದರಿಂದಾಗಿ ವೇಗದ ನಡಿಗೆ ಸಾಧ್ಯವಾಗುವುದಿಲ್ಲ. ಹಿಂಡು ಕಾಯುವವರ ಕಣ್ತಪ್ಪಿಸಿ ಎತ್ತೆತ್ತಲೋ ನುಗ್ಗಲಾಗುವುದಿಲ್ಲ.

ಕಾಲು ಬಂದ ಹಾಕಿಸಿಕೊಂಡ ದನ ಕುಂಟು ದನದಂತೆ ಹಿಂದಕ್ಕೆ ಉಳಿಯಬೇಕಾಗುತ್ತದೆ. ಇದರಿಂದಾಗಿ ಹಿಂಬಾಲಕತ್ವದ ಗುಣ ರೂಢಿಗತವಾಗುತ್ತದೆ.

ಕಾಲುಕೋಲು

ತುಡುಗುದನಗಳನ್ನು ನಿಭಾಯಿಸಲು ರೈತರು ಕಂಡುಕೊಂಡ ಇನ್ನೊಂದು ವಿಧಾನ ಇದು. ಮೇಯಿಸಲು ಹೋದಾಗ ಮಂದೆಯಿಂದ ಮಾರು ದೂರ ಸರಸರನೆ ಹೊರಟು ಬಿಡುವ, ಬಯಲಿನಲ್ಲಿ ಮೇಯದೆ ಕಳ್ಳತನದಿಂದ ತೋಟ, ಹೊಲ - ಗದ್ದೆಗಳಿಗೆ ನುಗ್ಗುವ ತುಡುಗುದನಗಳನ್ನು ಹದ್ದುಬಸ್ತಿನಲ್ಲಿಡಲು ಕತ್ತಿಗೆ ಒಂದು ಹಗ್ಗ ಕಟ್ಟಿ ಅದರ ಮೂಲಕ ಒಂದು ಕೋಲನ್ನು ಇಳಿಬಿಡಲಾಗುತ್ತದೆ. ಈ ಕೋಲು ಒಂದು ಗುದ್ದಲಿಗೆ ಹಾಕಿದಷ್ಟು ಉದ್ದದ ಮತ್ತು ದಪ್ಪದ ಕೋಲಾಗಿರುತ್ತದೆ. ವೇಗವಾಗಿ ನಡೆಯುವ ತುಡುಗುದನಗಳ ಕಾಲಿಗೆ ಲಟಪಟನೆ ಹೊಡೆಯುವ ಈ ನೇತಾಡುವ ಕೋಲು ಒಂದು ತರಹದ 'ಬ್ರೇಕ್' ಆಗಿರುತ್ತದೆ.



ಕಾಲುಕೋಲು


ಎಮ್ಮೆಯ ಮಂದೆಗಳಲ್ಲಿ ತುಡುಗು ಎಮ್ಮೆಗೆ ಸರ್ವೇ ಸಾಮಾನ್ಯವಾಗಿ ಕಾಲು ಕೋಲು ಹಾಕಲಾಗುತ್ತದೆ.

ಕೋಡು ಕಳಸ

ಹಳ್ಳೀಕಾರ್ ಹಾಗೂ ಅಮೃತ್ ಮಹಲ್ ಮತ್ತಿತರ ಕೆಲವು ದನಗಳ ಕೊಂಬುಗಳು ಉದ್ದವಾಗಿ ಬೆಳೆಯುತ್ತವೆ. ಈ ಕೊಂಬುಗಳನ್ನು ಇಷ್ಟ ಬಂದ ಆಕಾರಕ್ಕೆ ಬಗ್ಗಿಸಿಕೊಳ್ಳಲು ಹರಿತವಾದ ಮಚ್ಚು ಮತ್ತು ಇತರ ಆಯುಧಗಳಿಂದ ಸವರಲಾಗುತ್ತದೆ. ಹೀಗೆ ಸವರಿಕೊಂಡರೆ ಅಂತಹ ಎತ್ತು ಮತ್ತು ಹಸುಗಳ ಅಂದ ಹೆಚ್ಚುತ್ತದೆ.

ಕೊಂಬು ಸವರಿದಾಗ ಕೊಂಬಿನ ತುದಿಯು ಚೂಪಾಗುವುದು ಸಹಜ. ಮೊದಲೇ ಹಳ್ಳೀಕಾರ್ ಮತ್ತು ಅಮೃತ್ ಮಹಲ್ ತಳಿಯ ಜಾನುವಾರುಗಳು ರೋಷದ

ತಳಿಗಳು. ಸಿಟ್ಟು ಬಂದಾಗ ಮನುಷ್ಯರನ್ನು ಹಾಯುತ್ತವೆ. ಹೀಗಾದಾಗ ತೀವ್ರತರಹದ ಗಾಯಗಳಾಗುತ್ತವೆ. ಆದುದರಿಂದ ಮುಂದೊದಗಬಹುದಾದ ಅಪಾಯದಿಂದ ತಪ್ಪಿಸಿಕೊಳ್ಳಲು ಮತ್ತು ದನಗಳಿಗೆ ಇನ್ನಷ್ಟು ಸೌಂದರ್ಯ ಹೆಚ್ಚಿಸಲು ಕೋಡು ಕಳಸಗಳನ್ನು ಹಾಕಲಾಗುತ್ತದೆ. ಜನರಾಡುವ ಭಾಷೆಯಲ್ಲಿ ಇವು ಕೊಂಬು ಕುಪ್ಪಿಗಳು ಅಥವಾ ಕೊಂಬು ಕಳಸಗಳು.




ಕೋಡು ಕಳಸ

ಕೋಡು ಕಳಸದ ತುದಿ ಮೊನಚಾಗಿರುವುದಿಲ್ಲ. ಅದರ ತುದಿಯು ದಪ್ಪನಾಗಿ ದುಂಡಗಿರುತ್ತದೆಯಾದ್ದರಿಂದ ಜಾನುವಾರುಗಳು ಆಯ್ದರೂ ತೀವ್ರತರದ ಗಾಯ ವಾಗುವುದಿಲ್ಲ. ರೈತರು ತಮ್ಮ ಅನುಕೂಲಕ್ಕೆ ತಕ್ಕಂತೆ ಕಂಚಿನ ಇಲ್ಲವೇ ಬೆಳ್ಳಿಯ ಕೋಡು ಕಳಸಗಳನ್ನು ಮಾಡಿಸಿಕೊಳ್ಳುತ್ತಾರೆ. ಸಂಕ್ರಾಂತಿ ಹಬ್ಬದಂತಹ ಸಂದರ್ಭಗಳಲ್ಲಿ ದನಗಳ ಮೈ ತೊಳೆದು ಕೋಡುಕಳಸ ಹಾಕಿ ದನಗಳನ್ನು ಸಿಂಗರಿಸುತ್ತಾರೆ. ಉಳುಮೆಯ ಕಾಲದಲ್ಲಿ ದನಗಳು ಶಕ್ತಿ ಮೀರಿ ದುಡಿಯುವಾಗಲೂ ಕೋಡುಕಳಸ ಹಾಕಿ ಅವುಗಳಿಗೆ ಗೆಜ್ಜೆ ಕಟ್ಟಿ, ತಲೆಯಾಡಿಸುವಾಗ ಹೊರಡುವ ಗೆಜ್ಜೆನಾದದಿಂದ ದನಗಳು ಉಲ್ಲಸಿತ ವಾಗುತ್ತವೆ.

ರೈತನೂ ಕೂಡ ಕೋಡು ಕಳಸಕ್ಕೆ ಕಟ್ಟಿದ ಗೆಜ್ಜೆಯ ಸಂಗೀತದಲ್ಲಿ ದುಡಿಮೆಯ ಬಳಲಿಕೆಯನ್ನು ಮರೆತು ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಾನೆ. ಕೋಡು ಕಳಸಕ್ಕೆ ಕಟ್ಟಿದ ಗೆಜ್ಜೆಗಳು ಹಾಯಲು ಕತ್ತಾಡಿಸುವಾಗ ಶಬ್ದ ಮಾಡಿ ಕೊಂಬಿನ ತಿವಿತದಿಂದ ತಪ್ಪಿಸಿಕೊಳ್ಳಲು ಮುನ್ಸೂಚನೆ ನೀಡುತ್ತವೆ. ಕೋಡು ಕಳಸವು ಕೋಡಿನ ಮೇಲೆ ಬಿಗಿಯಾಗಿ ಕುಳಿತುಕೊಳ್ಳಲು ರೈತರು ಕಂಡುಕೊಂಡ ಉಪಾಯ ಒಂದಿದೆ. ಬೆಲ್ಲದ ಪಾಕ ಮಾಡಿ ಅದರೊಳಗೆ ಒಂದಷ್ಟು ಕೂದಲು ಸೇರಿಸಿ ಕಳಸದೊಳಕ್ಕೆ ಅದನ್ನು ಹಾಕಿ ಕೊಂಬಿನ ಮೇಲೆ ಕೂರಿಸಲಾಗುತ್ತದೆ. ಇದರಿಂದ ಕೊಂಬು ಕುಪ್ಪಿಯು ಅಲುಗಾಡದೆ ಭದ್ರವಾಗಿ ಕುಳಿತುಕೊಳ್ಳುತ್ತದೆ.

ಗೊಟ್ಟ

ಜಾನುವಾರುಗಳಿಗೆ ಔಷಧಿ ಕುಡಿಸಲು ಗೊಟ್ಟದ ಅವಶ್ಯಕತೆಯಿರುತ್ತದೆ. ಬಿದಿರು ಬೊಂಬಿನ ಒಂದು ತುಂಡನ್ನು ತೆಗೆದುಕೊಂಡು, ಒಂದು ಕಣ್ಣು ಅಥವಾ ಕಟ್ಟನ್ನು



ಬೊಂಬಿನಿಂದ ತಯಾರಿಸಿಕೊಂಡ ಗೊಟ್ಟ


ಉಳಿಸಿಕೊಂಡು ನಂತರದ ಕಣ್ಣು ಇರುವ ಜಾಗಕ್ಕಿಂತ ಕೆಳಗಡೆ ಇಳಿಜಾರಾಗಿ ಕತ್ತರಿಸಿಕೊಂಡರೆ ಅದು ಗೊಟ್ಟವಾಗುತ್ತದೆ. ಜಾನುವಾರುಗಳಿಗೆ ಔಷಧಿ ಕುಡಿಸಲು ಇಂತಹ ಗೊಟ್ಟವು ಹೆಚ್ಚು ಅನುಕೂಲಕರವಾಗಿರುತ್ತದೆ. ಪ್ರತಿ ರೈತನ ಮನೆಯಲ್ಲಿ ಸೂರಿಗೆ ಒಂದು ಗೊಟ್ಟವನ್ನು ನೇತು ಹಾಕಿರುವ ದೃಶ್ಯಗಳು ಸರ್ವೇ ಸಾಮಾನ್ಯ.

ಗೊಂತು

ಗೊಂತು ಅನ್ನು ಕೆಲವು ಪ್ರದೇಶಗಳಲ್ಲಿ ಗೂತ್ತು, ಗೂಟ ಎಂದು ಕರೆಯಲಾಗುತ್ತದೆ. ದನಗಳನ್ನು ಕಟ್ಟಿಹಾಕಲು ಗೊಂತು ಬೇಕು. ರೈತರು ತಮ್ಮ ಮನೆಯ ಒಂದು ಭಾಗವನ್ನೇ ದನದ ಕೊಟ್ಟಿಗೆ ಮಾಡಿಕೊಂಡಿರುವ ಕಡೆಯಲ್ಲಿ ಗೊಂತುಗಳನ್ನು ನೆಲದೊಳಕ್ಕೆ ಅವು ಕಿತ್ತರೂ ಬಾರದಂತೆ ಬಿಗಿಯಾಗಿ ಹೊಡೆದಿರುತ್ತಾರೆ. ಇಂತಹ ಗೊತ್ತುಗಳನ್ನು ತಯಾರಿಸಿಕೊಳ್ಳಲು ಹೊಂಗೆ, ಜಾಲಿ, ಹುಣಸೆಯಂತಹ ಗಟ್ಟಿಯಾದ ಮರಗಳ ಕೋಲುಗಳನ್ನು ಬಳಸುತ್ತಾರೆ. ಸುಮಾರು ಒಂದೂವರೆ ಅಡಿಯಿಂದ ಎರಡು ಅಡಿಯವರೆಗಿನ ಉದ್ದದ ಮತ್ತು ಸುಮಾರು 8 ರಿಂದ 12 ಸೆಂಟಿಮೀಟರ್ ವ್ಯಾಸವುಳ್ಳ ಒಂದು ಮರದ ಕೊಂಬೆ ತೆಗೆದುಕೊಳ್ಳಲಾಗುತ್ತದೆ. ಅಂತಹ ಕೊಂಬೆಯ ತುಂಡಿನ ಮೇಲ್ಭಾಗವನ್ನು ತಲೆಕೆಳಕು ಮಾಡಿ, ಅರ್ಧ ಭಾಗಕ್ಕಿಂತ ಕೆಳಗೆ ಇಳಿಜಾರಾಗಿ ಮಚ್ಚಿನಿಂದ ಸವರಿಕೊಳ್ಳುತ್ತಾ ಕೊನೆಯ ಭಾಗವನ್ನು ಚೂಪಾಗಿ ಮಾಡಿಕೊಳ್ಳಬೇಕು. ದನದ ಕುತ್ತಿಗೆಗೆ ಕಟ್ಟಿದ ಹಗ್ಗವನ್ನು, ಗೊಂತಿಗೆ ಕಟ್ಟಿದಾಗ ಜಾರಿಹೋಗಿ, ದನಗಳು ಹಗ್ಗದ ಸಮೇತ, ಗೊಂತಿನ ಸಮೇತ ಕಿತ್ತುಕೊಂಡು ಹೋಗದಿರಲೆಂದು ಗೊಂತಿನ ಮಧ್ಯಭಾಗದ ಜಾಗದಲ್ಲಿ ಹಗ್ಗ ಜಾರಿಹೋಗದಂತೆ ಕಚ್ಚು ಇಟ್ಟಿರಲಾಗುತ್ತದೆ. ರೈತರು

ತಮಗೆ ಅಗತ್ಯವಿರುವಷ್ಟು ಸಂಖ್ಯೆಯ ಗೊತ್ತುಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಗೊಂತುಗಳನ್ನು ಸಾಮಾನ್ಯವಾಗಿ ಯಾರೂ ಮಾರುವುದಿಲ್ಲ.

ಗೊಂತುಗಳಿಗೆ ಕೀಟಬಾಧೆ (ಕುಟ್ಟುಹಿಡಿಯುವುದು ಎಂದೂ ಕರೆಯುತ್ತಾರೆ) ಆಗದಿರಲೆಂದು ಗೊಂತುಗಳನ್ನು ಮಾಡುವುದಕ್ಕಿಂತ ಮೊದಲು ಹಲವಾರು ದಿನಗಳ ಕಾಲ ಕುಂಟೆಗಳ ನೀರಿನಲ್ಲಿ ನೆನೆ ಹಾಕುವುದು ರೂಢೀಗತ.




ಗೊಂತಿಗೆ ಕಟ್ಟಲಾದ ಎತ್ತು

ಮರದ ನೇಗಿಲು

ಮನೆಗೊಂದು ಮರದ ನೇಗಿಲು ಇದ್ದ ಕಾಲವಿತ್ತು. ದೊಡ್ಡ ರೈತರಾದರೆ ಹಿತ್ತಲಲ್ಲಿ ಹತ್ತಾರು ಮರದ ನೇಗಿಲುಗಳನ್ನು ಜೋಡಿಸಿಟ್ಟಿರುತ್ತಿದ್ದರು. ಉಳುಮೆಗಿದ್ದ ಒಂದೇ ಸಾಧನ ಮರದ ನೇಗಿಲಾಗಿತ್ತು. ಕಬ್ಬಿಣದ ನೇಗಿಲು ಬಂದ ಮೇಲೆ ಮರದ ನೇಗಿಲು ಕಾಣೆಯಾಗುತ್ತಾ ಹೋಗುತ್ತಿದೆ. ಯಾಂತ್ರೀಕೃತ ಉಳುಮೆ ಬಂದ ಮೇಲಂತೂ ಮರದ ನೇಗಿಲು ಹಾಗೂ ಕಬ್ಬಿಣದ ನೇಗಿಲುಗಳ ಬಳಕೆ ಅಗಾಧ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ.

ನೇಗಿಲಿನಲ್ಲಿ ಮುಖ್ಯವಾಗಿ ಮೂರು ಭಾಗಗಳಿರುತ್ತವೆ. ಉಳುಮೆಯ ಭಾಗ- ಇಲ್ಲಿ ಕಬ್ಬಣದ ಗಳುವನ್ನು ಹಾಕಲಾಗುತ್ತದೆ. ನೊಗದ ಕಡೆ ಹೊರಡುವ ಉದ್ದವಾದ ಮರದ ಭಾಗ ಮತ್ತು ಮೇಟಿಯ ಭಾಗ (ಮೇಳೆಯ ಭಾಗ ಎಂತಲೂ ಕರೆಯುತ್ತಾರೆ).

ಉಳುಮೆಯ ಭಾಗಕ್ಕೆ ಜಾಲಿ, ಹುಣಸೆ, ನೇರಳೆ, ಹಲಸು ಮತ್ತು ಹೊಂಗೆಯಂತಹ ಮರಗಳು ಸೂಕ್ತ. ಇವು ಇನ್ನಷ್ಟು ಗಟ್ಟಿಯಾಗಿ, ಕುಟ್ಟು ಹಿಡಿಯದಿರಲೆಂದು ಮುಂಗಾರು ಮಳೆ ಆರಂಭವಾಗುವುದಕ್ಕೆ ಮೊದಲು ಬೇಸಿಗೆಯಲ್ಲಿ ಮರಕಡಿದು ಕುಂಟೆಗಳ ಕೆಸರಿನಲ್ಲಿ ಹೂತಿಟ್ಟು ನೆನೆಹಾಕುತ್ತಾರೆ. ಮಳೆಗಾಲ ಆರಂಭವಾಗುತ್ತಿದ್ದಂತೆ ರೈತರೇ ಬಡಗಿಗಳಾಗಿ ಮರದ ನೇಗಿಲನ್ನು ಮಾಡಿಕೊಳ್ಳುತ್ತಾರೆ. ಕಿಂಚಿತ್ತು ಶ್ರಮ ಬೇಡುವ




ಮರದ ನೇಗಿಲು

ಮತ್ತು ತಮ್ಮ ಹೊಲಗದ್ದೆ, ತೋಟಗಳ ಬಳಿ ಬೆಳೆದ ಮರದ ರೆಂಬೆ ಕೊಂಬೆಗಳನ್ನು ಬಳಸಿಕೊಂಡು ತಯಾರಾಗುವ ನೇಗಿಲು ಶೂನ್ಯ ಬಂಡವಾಳದ ನೇಗಿಲು. ಕೃಷಿ ಉಪಕರಣಗಳಿಗೆಂದೇ ಕೆಲ ರೈತರು ತಮ್ಮ ಹೊಲಗಳ ಬಳಿ ಕನಿಷ್ಟ ಒಂದು ಜಾಲಿ ಸಸಿ ನೆಟ್ಟು ಮರವಾಗಿ ಬೆಳೆಸಿಕೊಳ್ಳುತ್ತಾರೆ.


ನೊಗದ ಕಡೆ ಹೊರಡುವ ಮರಕ್ಕೆ ಸರ್ವೆ ಮರ ಗಟ್ಟಿ ಮುಟ್ಟಾದ ಮರ. ಮೇಟಿ/ಮೇಳೆಯ ಭಾಗಕ್ಕೆ ಹೊಂಗೆ, ಹುಣಸೆ, ಜಾಲಿ, ಸರ್ವೆ ಮರದ ಕೊಂಬೆಗಳನ್ನು ಬಳಸಲಾಗುತ್ತದೆ.

ನೊಗ


ನೊಗ ಅತ್ಯಂತ ಹಗುರವಾಗಿರಬೇಕಾಗುತ್ತದೆ. ಅದರ ಸಂಪೂರ್ಣ ಹೊರಮ್ಮೈ ಮೃದುವಾಗಿರುತ್ತದೆ. ಇದರಿಂದ ಹೆಗಲು ಹುಣ್ಣಾಗುವುದನ್ನು ತಡೆಯಬಹುದು. ನೊಗ ಮಾಡಲು ನಕ್ಕಿಲೆ ಮರದ ಕೊಂಬೆಯನ್ನು ಹೆಚ್ಚಾಗಿ ಬಳಸುತ್ತಾರೆ. ನೊಗದ ಮಧ್ಯಭಾಗ ದಪ್ಪನಾಗಿದ್ದು ಎರಡೂ ತುದಿಯ ಕಡೆ ನವುರಾಗುತ್ತಾ ಹೋಗುತ್ತದೆ.



ನೊಗ ಮತ್ತು ಅದರೊಂದಿಗಿರುವ ಪಟ್ಟಡಿಗಳು



ಕರ್ನಾಟಕದ ಭೌಗೋಳಿಕ
ವಿಭಿನ್ನತೆಯ ನೊಗಗಳು



ಉತ್ತರ ಕರ್ನಾಟಕದ
ನೊಗಗಳು

ಎರಡೂ ತುದಿಗಳಲ್ಲಿ ಜೊತ್ತಿಗೆಗಳನ್ನು ಸೇರಿಸಿ ಕಟ್ಟಿಕೊಳ್ಳಲು, ಕಡೆಗೂಟಗಳನ್ನು ಹಾಕಿಕೊಳ್ಳಲು ಎರಡು-ಮೂರು ಸಂದಿಗಳನ್ನು ಮಾಡಿಕೊಳ್ಳಲಾಗುತ್ತದೆ.


ರೈತರೇ ಬಡಗಿ ಕೆಲಸ ನಿರ್ವಹಿಸಿ ಕೊಂಡು ನೊಗ ಮಾಡಿಕೊಳ್ಳುತ್ತಾರೆ. ಇಲ್ಲವೇ ಇನ್ನೊಬ್ಬ ರೈತನಿಂದ ಮಾಡಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಸಂತೆಯಲ್ಲಿ ಸಿಗುವ ಸರಕಂತೂ ಇದಲ್ಲ. ಇದೂ ಕೂಡ ಶೂನ್ಯ ಬಂಡವಾಳದ ಕೃಷಿ ಉಪಕರಣಗಳಲ್ಲೊಂದು.

ಚಾಟಿ ಕೋಲು / ಚಾವಟಿ ಕೋಲು

ಅಮೃತ್ ಮಹಲ್, ಹಳ್ಳಿಕಾರ್ ನಂತಹ ದನಗಳು ರೋಷಾವೇಶದ ದನಗಳು. ಪಳಗಿಸಿಕೊಂಡರೆ ಮೃದು ಸ್ವಭಾವವನ್ನು ವ್ಯಕ್ತಪಡಿಸುತ್ತವೆ. ಪಳಗಿಸಿಕೊಳ್ಳಲು ಚಾಟಿಕೋಲು ಅಥವಾ ಚಾವಟಿ ಕೋಲು ಬೇಕೇ ಬೇಕು.

ಸಂತೆಯಿಂದ ತಂದ ಬಾರುದ್ದದ ಮಕ್ಕಳ ಕಿರುಬೆರಳು ಗಾತ್ರದ ನೂಲಿನ ದಾರವನ್ನು ಒಂದು ಸಣ್ಣ (ದೊಡ್ಡವರ ಕಿರುಬೆರಳು ಗಾತ್ರದ) ಬಿದಿರಿನ ಕೋಲಿನ ತುದಿಗೆ, ಜಾರಿಹೋಗದಂತೆ ಬಿಗಿಯಾಗಿ ಕಟ್ಟಿಕೊಂಡರೆ ಅದೇ ಚಾವಟಿ ಕೋಲು ಆಗಿಬಿಡುತ್ತದೆ.

ದನಗಳ ಮೈ ಮೇಲೆ ಬಾಸುಂಡೆ ಬರುವಂತೆ ಹೊಡೆಯುವುದು ಅಮಾನುಷ. ಪಳಗಿಸಲು ಒಂದು ಕಡೆ ಮೂಗುದಾರವಂತೂ ಇದ್ದೇ ಇರುತ್ತದಲ್ಲ. ಹಗ್ಗದಿಂದ ಜಗ್ಗಿ ಮೂಗುದಾರದ ಸಹಾಯದಿಂದ ಪಳಗಿಸಿಕೊಳ್ಳಬಹುದು. ಅಷ್ಟಕ್ಕೂ ಮಾತು ಕೇಳದಿದ್ದರೆ ಚಾವಟಿಕೋಲು ಬೇಕಾಗುತ್ತದೆ.. ಚಾವಟಿ ಕೋಲಿನ ನೂಲನ್ನು ಛಟೀರ್ ಎಂಬ ಶಬ್ದ ಬರುವಂತೆ ಝಳಪಿಸಿದರೆ ದನಗಳು ಹೆದರಿ ಹೆಜ್ಜೆ ಹಾಕುತ್ತವೆ. ದನಗಳನ್ನು ಪಳಗಿಸಲು ಚಾವಟಿಕೋಲು ಬೇಕು. ಈ ದೃಷ್ಟಿಯಿಂದ ಚಾವಟಿ ಕೋಲು ರೈತನಿಗೊಬ್ಬ ಸಹರೈತನಿದ್ದಂತೆ, ಜತೆಗಾರನಿದ್ದಂತೆ. ರೈತನ ಮಾತು ಕೇಳದಿದ್ದರೆ ಚಾಟಿಕೋಲಿನ ಮಾತನ್ನಾದರೂ ಕೇಳಬೇಕಾಗುತ್ತದೆ.



ಚಾವಟಿ ಕೋಲು


ಕರುವಿನ ಗೆಜ್ಜೆನಾದ

ಹಸು, ಎಮ್ಮೆ, ಕುರಿ, ಮೇಕೆ, ಹೀಗೆ ಈ ಎಲ್ಲ ಪ್ರಾಣಿಗಳ ಎಳೆಗರುಗಳು, ಎಳೆಯ ಮರಿಗಳ ಕತ್ತಿನಲ್ಲಿ ಸಣ್ಣಹಗ್ಗ ಅಥವಾ ದಾರದ ಮೂಲಕ ಗೆಜ್ಜೆ ಕಟ್ಟಲಾಗುತ್ತದೆ. ಎಳೆಯ ಪ್ರಾಣಿಗಳನ್ನು ಮುದ್ದಿನಿಂದ ಸಾಕುತ್ತಾರೆ. ಅವು ಓಡಾಡುವಾಗ, ಜಿಗಿಯುವಾಗ ಹೊರಡುವ ಗೆಜ್ಜೆನಾದ ಮನಸ್ಸಿಗೆ ಮುದ ಕೊಡುತ್ತದೆ. ಮಕ್ಕಳಿಗಂತೂ ಎಳೆಗರುಗಳ ಚಲನವಲನ, ಆಟೋಟ ಅಚ್ಚುಮೆಚ್ಚು.

ಎಳೆಗರು ತಾಯಿ ಮೊಲೆಯನ್ನು ಮೂತಿಯಿಂದ ಗುದ್ದಿ ಗುದ್ದಿ ಹಾಲು ಕುಡಿಯುವಾಗ ಕತ್ತಿನಲ್ಲಿಯ ಗೆಜ್ಜೆ ಅಲುಗಾಡಿ ಹೊರಟ ಗೆಜ್ಜೆನಾದ ಹಸು ಸರ ಬಿಟ್ಟು ಹಾಲು ಸರಾಗ ಬರುತ್ತದೆ. ಈ ಸರವೇ ಆಧುನಿಕ ವಿಜ್ಞಾನದಲ್ಲಿ ಆಕ್ಸಿಟೋಸಿನ್ ಎಂಬ ಚೋದಕ ಸ್ರಾವ ಎಂಬುದಾಗಿ ಕಂಡುಕೊಳ್ಳಲಾಗಿದೆ. ಮೆದುಳಿನಿಂದ ಆಕ್ಸಿಟೋಸಿನ್ ಬಿಡುಗಡೆಯಾದರೆ ಕೆಚ್ಚಲ ಗ್ರಂಥಿಗಳ ನಳಿಕೆಗಳು ಸಡಿಲಗೊಂಡು, ಕೆಚ್ಚಲ ಮೃದು ಮಾಂಸಖಂಡಗಳು ಸಂಕುಚಿತಗೊಂಡು ಹಾಲಿನ ಬಿಡುಗಡೆಯಾಗುತ್ತದೆ. ಎಳೆಗರುವಿನ ಕತ್ತಿನ ಗೆಜ್ಜೆಗೆ ಆ ಶಕ್ತಿಯಿರುವುದರಿಂದಲೇ ರೈತರು ಅದರ ಕತ್ತಿಗೆ ಗೆಜ್ಜೆ ಕಟ್ಟುವುದು ರೂಢಿಗೆ ಬಂದಿರಬಹುದು.

ಗಾಡಿಯ ಎತ್ತಿನ ಗಂಟೆ

ಫಳ ಫಳನೆ ಹೊಳೆಯುವ ಬಿಳಿ ಬಣ್ಣದ ಹಳ್ಳಿಕಾರ್ ಮತ್ತು ಅಮೃತ್ ಮಹಲ್ ಎತ್ತುಗಳನ್ನು ಸಿಂಗರಿಸುವುದೆಂದರೆ ರೈತರಿಗೆ ಎಲ್ಲಿಲ್ಲದ ಸಡಗರ, ಸಂಭ್ರಮ, ಹಿರಿಮೆ.



ಎತ್ತಿನ ಕತ್ತಿನ ಗಂಟೆ
ಮುನ್ನೆಚ್ಚರಿಕೆಯ ಗಂಟೆ


ಎತ್ತುಗಳನ್ನು ಸಿಂಗರಿಸುವಾಗ ಕತ್ತಿನಲ್ಲಿ ಗಂಟೆ ಕಟ್ಟುವುದೂ ರೂಢಿ. ಅಂತಹ ಇತ್ತುಗಳು ಎಳೆಯುವ ಮರದ ಗಾಡಿ, ಚಕ್ರಗಾಡಿ (ಟಯರಿನ ಗಾಡಿ) ಬರುತ್ತಿದ್ದರೆ ಬಹುದೂರದಿಂದಲೇ ಎತ್ತುಗಳ ಕೊರಳಿನ ಗೆಜ್ಜೆನಾದ ಹೆಜ್ಜೆಯಿಟ್ಟಂತೆಲ್ಲಾ ಲಯಬದ್ಧವಾಗಿ ಮೊಳಗುತ್ತಿರುತ್ತದೆ. ರೈತರ, ಹಳ್ಳಿಗರ ಕನಸುಗಳನ್ನು ಕಟ್ಟಿ ಕೊಡುವ ಗೆಜ್ಜೆನಾದವಿದು.

ಹಳ್ಳಿಯ ಸಣ್ಣ ಬೀದಿಗಳಲ್ಲಿ, ಓಣಿಗಳಲ್ಲಿ ಹಟ್ಟಿಗಳಲ್ಲಿ ಗಾಡಿಗಳು ಬರುತ್ತಿದ್ದರೆ ಬೀದಿಯಲ್ಲಿ ಆಟವಾಡುವ ಮಕ್ಕಳು ಗೆಜ್ಜೆಯ ಶಬ್ದ ಕೇಳಿ ದಾರಿ ಬಿಡುವ ಪರಿಪಾಠ ಮೆಚ್ಚುವಂಥದ್ದು. ಸಿಂಗಾರದ ಜತೆಗೆ ಅದರಿಂದಾಗುವ ಅನುಕೂಲಗಳನ್ನು ಕಂಡುಕೊಂಡಿರುವ ಹಿರಿಯರ ಚಿಂತನೆಗಳಿಗೆ ಮಾರು ಹೋಗಲೇಬೇಕು.

ಮೂಗುದಾರ

ದುಡಿಮೆಯ ದೇಶಿ ದನಗಳ ಬಹುತೇಕ ತಳಿಗಳು ರೋಷಾವೇಶದ ತಳಿಗಳಾದ್ದರಿಂದ ಇವುಗಳಿಗೆ ಮೂಗುದಾರ ಹಾಕದ ಹೊರತು ಹೇಳಿದ ಮಾತು ಕೇಳುವುದಿಲ್ಲ.

ಹಳ್ಳೀಕಾರ್, ಅಮೃತ್ ಮಹಲ್, ಕಾಂಕ್ರೇಜ್, ಕೃಷ್ಣಾತೀರ, ದೇವಣಿಯಂತಹ ತಳಿಗಳನ್ನು ಬೇಸಾಯಕ್ಕೆ ಮತ್ತಿತರ ಕೃಷಿ ಚಟುವಟಿಗೆಗಳಿಗೆ ಬಳಸುವಾಗ ಮೂಗುದಾರ ಹಾಕಲೇಬೇಕು. ಮೂಗುದಾರವು ದನಗಳನ್ನು ಪಳಗಿಸುವ ಒಂದು ಉತ್ತಮ ಸಾಧನ.



ಮಾತು ಕೇಳಲು
ಮೂಗುದಾರ ಬೇಕು

ನೂಲಿನ ದಾರವನ್ನು ಯಾವುದಾದರೊಂದು ಮೂಗಿನ ಹೊಳ್ಳೆಯ ಮೂಲಕ ಸೇರಿಸಿ, ಹೊಳ್ಳೆಗಳ ಮಧ್ಯೆ ಇರುವ ತೆಳುವಾದ ಪೊರೆಯಲ್ಲಿ ರಂಧ್ರ ಮಾಡಿ ಇನ್ನೊಂದು ಹೊಳ್ಳೆಯ ಮೂಲಕ ಆಚೆಗೆಳೆದುಕೊಂಡು ಕೊಂಬಿನ ಹಿಂದೆ ಕತ್ತಿನ ಹಗ್ಗಕ್ಕೆ ಕಟ್ಟಿ ಮೂಗುದಾರವನ್ನು ಹಾಕಲಾಗುತ್ತದೆ. ಮೂಗು ಚುಚ್ಚಲು ಅನುಭವಿ ರೈತರು ಇರುತ್ತಾರೆ.

ಮೂಗುದಾರವನ್ನು ಹಾಕುವಾಗ, ಮೂಗಿನ ಹೊಳ್ಳೆಗಳ ಮಧ್ಯೆ ರಂಧ್ರ ಮಾಡುವಾಗ ಗಾಯವಾಗಿ, ಕಿಂಚಿತ್ತು ರಕ್ತ ಒಸರುವುದರಿಂದ ದನಗಳನ್ನು ಒದ್ದಾಡದಂತೆ, ಕದಲದಂತೆ ಹಿಡಿದುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಗಟ್ಟಿಯಾಗಿ ನೆಟ್ಟ ಕಂಬವೊಂದಕ್ಕೆ ಅಥವಾ ಮರದ ಬುಡವೊಂದಕ್ಕೆ ದನಗಳನ್ನು ಕಟ್ಟಿ ಮೂಗುದಾರ ಪೋಣಿಸಲಾಗುತ್ತದೆ.

ಒಂದೆರಡು ಎಮ್ಮೆಗಳನ್ನು ಮಾತ್ರ ಸಾಕಿಕೊಂಡಿದ್ದರೆ ಅವಕ್ಕೂ ಮೂಗುದಾರದ ಅವಶ್ಯಕತೆಯಿರುತ್ತದೆ.

ಮೊಕರಂಬೆ/ ಮುಖಜಿಮರ

ಕುರಿ ಸೌಮ್ಯ ಸ್ವಭಾವದ ಪ್ರಾಣಿ. ಮೇಕೆ ಕೂಡ ಸೌಮ್ಯ ಸ್ವಭಾವದ ಪ್ರಾಣಿಯೇ. ಆದರೆ ಮೇಕೆಯು ಕುರಿಗಿಂತ ಕಡಿಮೆ ಸೌಮ್ಯ ಸ್ವಭಾವದ್ದು.


ಒಂದೆರಡು ಕುರಿ, ಅಥವಾ ಮೇಕೆಗಳನ್ನು ಮಾತ್ರ ಸಾಕಿಕೊಳ್ಳುವ ಅತಿ ಸಣ್ಣ ರೈತರು, ಕೂಲಿಕಾರ್ಮಿಕರು ಅವುಗಳಿಗೆ ಹಗ್ಗಕಟ್ಟಿ ಗೊಂತಿಗೆ ಕಟ್ಟಿ ಮೇಯಿಸಿ ಕೊಳ್ಳುತ್ತಾರೆ. ಮನೆಯಂಗಳದ ಬಳಿಯೂ ಸ್ಥಳಾವಕಾಶ ಇಲ್ಲದ ಕಾರಣ ಕಟ್ಟಿಹಾಕಿ ಮೇವು ನೀಡುತ್ತಾರೆ. ಹೀಗೆ ಮಾಡುವುದರಿಂದ, ಅವುಗಳ ಸ್ವೇಚ್ಛೆಯ ಚಲನವಲನಕ್ಕೆ ಕುಂದುಂಟಾಗಿ ಅವು ಒರಟಾಗಿ ವರ್ತಿಸುವುದುಂಟು.

ಅವುಗಳ ಒರಟುತನವನ್ನು ಹದ್ದು-ಬಸ್ತಿನಲ್ಲಿಡಲು ದಾರದಿಂದ ಹೆಣೆದ ಮೊಕರೆಂಬೆ ಅಥವಾ ಮುಖಜಿಮರ ಎಂಬ ಪರಿಕರವನ್ನು ಬಳಸುತ್ತಾರೆ.

ನೂಲಿನ ಹಗ್ಗದಲ್ಲಿ ಮೊಕರೆಂಬೆ ಹೆಣೆದುಕೊಳ್ಳುವುದು ಒಂದು ಕಲೆ. ರೈತರಿಗೆ ಈ ಕಲೆ ಕರಗತ. ಮೂಗಿನ ಮೇಲೆ, ಮುಖದ ಮೇಲೆ ಈ ಮೊಕರಂಬೆ ಬಿಗಿಯಾಗಿ ಕುಳಿತುಕೊಳ್ಳುವುದರಿಂದ ಮತ್ತು ಅದನ್ನು ಕತ್ತಿನ ಸುತ್ತಲಿನ ಹಗ್ಗಕ್ಕೆ ಕಟ್ಟಿರುವುದರಿಂದ ತುಡುಗು ಕುರಿ, ಮೇಕೆಗಳನ್ನು ನಿರ್ಬಂಧಿಸಿಕೊಳ್ಳುವುದು ಸುಲಭಸಾಧ್ಯ. ಇಲ್ಲವಾದರೆ ಮಕ್ಕಳು ಮರಿಗಳು ಅಂತಹ ಕುರಿ, ಮೇಕೆಗಳನ್ನು ಮೇಯಿಸಲು ಹೋದಾಗ ಹಗ್ಗದ ಸಮೇತ ದರದರನೆ ಎಳೆದುಕೊಂಡು ಹೋಗಿಬಿಡುವ ಸಾಧ್ಯತೆಗಳಿವೆ.

ಕಡೆಗೂಟ ಮತ್ತು ಜೊತ್ತಿಗೆ

ನೊಗದ ಎರಡು ಬದಿಯಲ್ಲಿ ಎರಡೆರಡು ರಂಧ್ರಗಳಿರುತ್ತವೆ. ಒಂದು ಕಡೆಯ ಒಂದು ಸಂದಿಯಲ್ಲಿ ಕಡೆಗೂಟ ಎಂಬ ಒಂದು ಸಣ್ಣ ಕೋಲನ್ನು ಇಳಿಬಿಡಲಾಗುತ್ತದೆ.




ಕಡೆಗೂಟದ ಜತೆಗೆ ಇರುವ ಜೊತ್ತಿಗೆಗಳು

ಈ ಕಡೆಗೂಟಕ್ಕೆ ಜೊತ್ತಿಗೆ ಕಟ್ಟಿ ಇನ್ನೊಂದು ಸಂಧಿಗೆ ಜೊತ್ತಿಗೆಯನ್ನು ಬಿಗಿಯಲಾಗುತ್ತದೆ. ಇದರಿಂದಾಗಿ ನೋಗ ಹೊತ್ತ ದನ ಅತ್ತ-ಇತ್ತ ಕದಲುವುದು ಕಷ್ಟವಾಗುತ್ತದೆ. ಕಡೆಗೂಟ ನೊಗದ ಒಳಭಾಗಕ್ಕೆ ಇರುವುದರಿಂದ, ಕಡೆಗೂಟ ನೇಗಿಲು ಕಟ್ಟಿದಾಗ, ಗಾಡಿ ಕಟ್ಟಿದಾಗ ಮೀರಲಾಗದ ಎಲ್ಲೆಯಂತೆ ತಡೆಯೊಡ್ಡುತ್ತದೆ. ಜೋಡೆತ್ತುಗಳು ತಮ್ಮ ಮಧ್ಯೆ ಅಂತರ ಕಾಯ್ದುಕೊಳ್ಳಲು ಇದು ಅನುಕೂಲಕರ. ಜೊತ್ತಿಗೆಗಳಿಗೆ ಪಟ್ಟಿಡಿಗಳು ಎಂಬ ಇನ್ನೊಂದು ಹೆಸರಿದೆ.

ಸೋಮಾರಿ ಹಾಗೂ ಮೊಂಡು ಬೀಳುವ ಎತ್ತುಗಳಾದರೆ ಗಾಡಿಯ ಭಾರ ಅತಿಭಾರವಾದರೆ, ಉಳುಮೆ ತ್ರಾಸದಾಯಕವಾದರೆ ಹೇಗಾದರೂ ಮಾಡಿ ನೊಗದಿಂದ ಆಚೆಗೆ ತಲೆಯನ್ನು ಹೊರಳಿಸಿಕೊಂಡುಬಿಡುತ್ತವೆ. ಇದನ್ನು "ಕಾಡಿ (ಕಾಡೆ) ಹಾಕಿಕೊಳ್ಳುವುದು" ಎಂದು ಕೋಲಾರದ ಗ್ರಾಮೀಣ ಭಾಷೆಯಲ್ಲಿ ಹೇಳುತ್ತಾರೆ.

ಕೂರಿಗೆ


ಕೂರಿಗೆ ಒಂದು ಬಿತ್ತುವ ಸಾಧನ. ರಾಗಿ ಬಿತ್ತಲು ಸಾಮಾನ್ಯವಾಗಿ ಬಳಸುತ್ತಾರೆ. ಊರಿಗೊಂದು ಕೂರಿಗೆ ಇದ್ದರೆ ಊರವರ ಹೊಲಗಳೆಲ್ಲಾ ಬಿತ್ತಿಕೊಳ್ಳಬಹುದು. ಹೊಲದ ಒಂದು ಸಾಲಿನಷ್ಟು ಅಗಲ (ಎರಡು ಅವರೆ ಮತ್ತು ಜೋಳದ ಸಾಲುಗಳ ನಡುವಿನ ಜಾಗ) ವಿರುವ ಜಾಗದಲ್ಲಿ ಒಮ್ಮೆ ಕೂರಿಗೆ ಹಾಯ್ದು ಹೋಗುತ್ತಿದ್ದರೆ ಅದರ ಬಾಯಲ್ಲಿ ಹೊಯ್ದ ರಾಗಿ ಅಷ್ಟಗಲಕ್ಕೂ ಸಾಲಾಗಿ ಬೀಳುತ್ತಾ ಹೋಗುತ್ತಿರುತ್ತವೆ. ಜತೆಗೆ ಸಾಲು ಸಾಲಿನ ಮೇಲೆ ಅಗತ್ಯವಿರುವಷ್ಟು ಮಣ್ಣನ್ನು ಮುಚ್ಚಿಕೊಳ್ಳುತ್ತವೆ. ಬಿತ್ತುವ ಈ ಕೂರಿಗೆಯನ್ನು ದನಗಳೇ ಎಳೆಯಬೇಕು.



ಆಧುನಿಕ ಕೂರಿಗೆ


ಕಬ್ಬಿಣದ ನೇಗಿಲು

ಕಬ್ಬಿಣದ ನೇಗಿಲು ಸುಧಾರಿತ ನೇಗಿಲಾಗಿದೆ. ಆಳದ ಉಳುಮೆ ಇದರಿಂದ ಸಾಧ್ಯ. ಜತೆಗೆ ಕಡಿಮೆ ಅವಧಿಯಲ್ಲಿ ಹೆಚ್ಚು ಭೂಮಿಯನ್ನು ಉತ್ತುಕೊಳ್ಳಬಹುದು. ಆಳಕ್ಕೆ ಬೇರುಬಿಟ್ಟ ಕಳೆ ಹುಲ್ಲುಗಳಾದ ಗರಿಕೆ ಹುಲ್ಲು, ಶುಂಟಿ ಹುಲ್ಲುಗಳನ್ನು ಬುಡಮೇಲು ಮಾಡಿ ಉರುಳಿಸುವ ತಂತ್ರಗಾರಿಕೆ ಕಬ್ಬಿಣದ ನೇಗಿಲನ್ನು ರೂಪಿಸಿದ ಸೃಷ್ಟಿಕರ್ತನಿಗಂತೂ ಇದ್ದಿರಲು ಸಾಕು. ಕಬ್ಬಿಣದ ನೇಗಿಲು ಹೊರಹಾಕಿದ ಗರಿಕೆಯ ಬೇರುಗಳನ್ನು ನೀರಿನಲ್ಲಿ ತೊಳೆದು ಹಾಕಿದರೆ ಜಾನುವಾರುಗಳಿಗೆ ಅದು ಆಹಾರ.



ಕಬ್ಬಿಣದ ನೇಗಿಲು

ಹಲಿವೆ ಅಥವಾ ಹಲುಬೆ




ಹಲುಬೆ

ನಾಲ್ಕಕ್ಕಿಂತ ಮೇಲ್ಪಟ್ಟು ಹಲ್ಲಿರುವ ಉಪಕರಣಕ್ಕೆ ಹಲುಬೆ ಎನ್ನುತ್ತಾರೆ. ಸಾಮಾನ್ಯವಾಗಿ ಹಲ್ಲುಗಳು ಸರಿ ಸಂಖ್ಯೆ (ಆರು, ಎಂಟು, ಹತ್ತು ಹೀಗೆ ಹದಿನಾರರವರೆಗೆ) ಯಲ್ಲಿ ಇರುತ್ತವೆ. ಹಲುಬೆಯನ್ನು ಉಳುಮೆ ಮಾಡಿದ ಹೊಲಗದ್ದೆ ತೋಟಗಳಲ್ಲಿ ಇರುವ ಕಸ ಕಡ್ಡಿ ಮತ್ತು ಮಣ್ಣಿನ ಹೆಂಟೆಗಳನ್ನು ತೆಗೆಯಲು ಬಳಸುತ್ತಾರೆ. ಇದೊಂದು ಹಸನು ಮಾಡುವ ಸಾಧನ. ಹಲುಬೆಯನ್ನು ಹಾಕಿದ ನಂತರ ನೆಲವು ಒಂದು ನಿರ್ದಿಷ್ಟ ಮಟ್ಟಕ್ಕೆ ಸಮನಾಗುತ್ತದೆ.

ಕುಂಟೆ ಅಥವಾ ಚಿಕ್ಕಕುಂಟೆ


ಕುಂಟೆಗೆ ಮೂರು ಅಥವಾ ನಾಲ್ಕು ಹಲ್ಲಿರುತ್ತವೆ. ಒತ್ತಾಗಿರುವ ಪೈರುಗಳನ್ನು ತೆಳುವುಗೊಳಿಸಲು ಕುಂಟೆ ಹೊಡೆಯುತ್ತಾರೆ. ಇದರಿಂದ ಕೊಂಚ ಮಟ್ಟಿಗೆ ಕಳೆಯೂ ನಾಶವಾಗುತ್ತದೆ.



ಕುಂಟೆ ಅಥವಾ ಚಿಕ್ಕಕುಂಟೆ

ಗುಂಡು

ಕಣವೆಂದರೆ ತಟ್ಟನೆ ನೆನಪಾಗುವುದು ರಾಗಿಯ ಅರಿ ತುಳಿಸುವ ಕಲ್ಲಿನ ಗುಂಡು. ರಾಗಿಯ ಕಟ್ಟುಗಳನ್ನು ಬಿಚ್ಚಿ ಕಣದ ತುಂಬಾ ಪೊಡಗು ಹರಡಿ (ಅರಿ ಹರಡಿ)



ಕಣದ ಗುಂಡು

ಗುಂಡು ಕಲ್ಲನ್ನು ಅದರ ಮೇಲೆ ಹಾಯುವಂತೆ ದನಗಳಿಗೆ ಕಟ್ಟಿ ಎಳೆಸಲಾಗುತ್ತದೆ. ಆಗ ರಾಗಿಯ ತೆನೆಗಳಿಂದ ರಾಗಿ ಬಿಚ್ಚಿಕೊಳ್ಳುತ್ತದೆ. ರಾಗಿಯ ಕಾಂಡ ಮತ್ತು ಗರಿಗಳು, ಇದೇ ಕಲ್ಲು ಗುಂಡಿಗೆ ಸಿಕ್ಕಿ ದನಗಳಿಗೆ ಹದವಾದ ಮೇವಾಗುತ್ತದೆ.

❑

ಅಧ್ಯಾಯ - 9

ದೇಸಿ ಪಶುಚಿಕಿತ್ಸಾ ವಿಧಾನಗಳು

ಸಾಮಾನ್ಯವಾಗಿ ರೈತರು ತಾವೇ ನಾಟಿಚಿಕಿತ್ಸೆ ಮಾಡಿಕೊಳ್ಳುವ ಜಾನುವಾರು ಕಾಯಿಲೆಗಳೆಂದರೆ ಅಜೀರ್ಣತೆ, ಭೇದಿ, ಕೆಮ್ಮು, ಜ್ವರ, ಕೆಚ್ಚಲು ಬಾವು, ಗರ್ಭ ಧರಿಸದೆ ಇರುವಿಕೆ, ಮಾಸು ಬೀಳದೆ ಇರುವುದು, ಕಾಲುಬಾಯಿ ಜ್ವರ, ಚಪ್ಪೆರೋಗ, ಕಡಿಮೆ ಹಾಲಿನ ಇಳುವರಿ, ಶಲೆ (ವಾಯು, ಕುಂದು), ಹೊಟ್ಟೆ ಉಬ್ಬರ, ಚರ್ಮರೋಗ ಇತ್ಯಾದಿ. ಈ ನಿಟ್ಟಿನಲ್ಲಿ ದೇಸಿ ಪಶುಚಿಕಿತ್ಸಾ ವಿಧಾನಗಳನ್ನು ದಾಖಲಿಸುವ ಒಂದು ಪ್ರಾತಿನಿಧಿಕ ಪ್ರಯತ್ನವಿದು.

ಹೆಚ್ಚಿನ ಸಂದರ್ಭಗಳಲ್ಲಿ ಗಿಡಮೂಲಿಕೆಗಳನ್ನು ದೇಸಿ ಚಿಕಿತ್ಸಾ ಕ್ರಮಗಳಲ್ಲಿ ಬಳಸಲಾಗುತ್ತದೆ. ಒಂದು ಅಂದಾಜಿನಂತೆ ನಮ್ಮ ದೇಶದಲ್ಲಿ ಸುಮಾರು 8000 ಔಷಧೀಯ ಸಸ್ಯಗಳಿವೆ. ಈ ಔಷಧೀಯ ಸಸ್ಯಗಳನ್ನು ಮಾನವರ ಮತ್ತು ಜಾನುವಾರುಗಳು ಕಾಯಿಲೆಗಳಿಗೆ ಬಳಸಲಾಗುತ್ತಿದೆ. ನಾಟಿ ವೈದ್ಯ ಕಡಿಮೆ ಖರ್ಚಿನದು. ಔಷಧದ ಅಡ್ಡ ಪರಿಣಾಮಗಳೂ ಕಡಿಮೆ.

ಹೆಬ್ಬಾಳದ ಪಶುವೈದ್ಯಕೀಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ವಿ.ಎನ್. ವಿಶ್ವನಾಥ ರೆಡ್ಡಿಯವರು ಕೆಲವು ನಾಟಿ ಪಶುವೈದ್ಯಕೀಯ ಪದ್ಧತಿಗಳನ್ನು ಅಧ್ಯಯನ ಮಾಡಿರುತ್ತಾರೆ. ಅದರ ವಿವರಗಳು ಹೀಗಿವೆ.

1. **ಕಣ್ಣಿನ ಕ್ಯಾನ್ಸರ್:** ಜಾನುವಾರುಗಳಿಗೆ ಕಣ್ಣಿನ ಕ್ಯಾನ್ಸರ್ ಬಂದರೆ ಅಂದರಿ ಸೊಪ್ಪನ್ನು (Dodonaea viscosa) ಬಿಸಿಲಲ್ಲಿ ಒಣಗಿಸಿ, ಪುಡಿಮಾಡಿ, ಬಟ್ಟೆಯಲ್ಲಿ ಶೋಧಿಸಿಕೊಂಡು, ಶೋಧಿಸಿದ ಪುಡಿಗೆ ನಿಂಬೆಹಣ್ಣಿನ ಒಂದಿಷ್ಟು ರಸ ಸೇರಿಸಿ, ಕಲಸಿ ವಾರಕ್ಕೊಮ್ಮೆ ಕಣ್ಣು ರೆಪ್ಪೆಯ ಬಳಿ ಕಣ್ಣಿಗೆ ತಾಕುವಂತೆ ಸವರಿದರೆ ಕಣ್ಣಿನ ಕ್ಯಾನ್ಸರ್ ಉಲ್ಬಣಗೊಳ್ಳುವುದಿಲ್ಲ.
2. **ಕಣ್ಣಿನ ಪೊರೆ:** ನಂದಿಬಟ್ಟಲು ಹೂವಿನ (Tabernaemontana divaricata) ರಸತೆಗೆದು ಅಥವಾ ಮಧುನಾಶಿನಿ ಸೊಪ್ಪಿನ ರಸತೆಗೆದುಕೊಂಡು ಕಣ್ಣಿಗೆ ಸುರಿದರೆ ಕಣ್ಣಿನ ಪೊರೆ ವಾಸಿಯಾಗುವುದು.
3. **ಪಲ್‌ಪಿರಿ:** ಮೊಲೆಯ ತೊಟ್ಟುಗಳ ಮೇಲೆ ಪಲ್‌ಪಿರಿಗಳು ಆಗಿದ್ದಾಗ ಅವುಗಳ

ಮೇಲೆ ಸೂಜಿಯಿಂದ ಚುಚ್ಚಿ, ಚುಚ್ಚಿದ ಜಾಗಕ್ಕೆ ಸೀಮೆಎಣ್ಣೆ ಗಿಡ (ಜಿಡ್ಡುಗಿಡ) (Croton tigilium) ದ ಎಲೆಯಿಂದ ಒಸರುವ ಹಾಲಿನಂತಹ ರಸವನ್ನು ನಿತ್ಯ ಮೂರರಿಂದ ಐದು ದಿನಗಳವರೆಗೆ ಹಚ್ಚಿದರೆ ಪಲ್‌ಪಿರಿಗಳು ವಾಸಿ ಯಾಗುತ್ತವೆ.

4. **ಕಾಲು ಬಾಯಿ ಜ್ವರದ ನಂತರದ ತೊಂದರೆಗಳು:** ಜಾನುವಾರುಗಳು ಕಾಲು ಬಾಯಿಜ್ವರ (ಗೊರಸಲು) ದಿಂದ ಬಳಲಿ ಬೆಂಡಾದ ನಂತರದ ತೊಂದರೆಗಳನ್ನು ಕಡಿಮೆ ಮಾಡಲು ಮತ್ತು ದನಗಳಿಗೆ ಶಕ್ತಿ ತುಂಬಲು 500 ಗ್ರಾಂಗಳಷ್ಟು ಹುರಿದ ಎಳ್ಳು, 300 ಗ್ರಾಂ ಬೆಲ್ಲ ಕಲಸಿ ಹತ್ತು ದಿನಗಳವರೆಗೆ ತಿನ್ನಿಸಲಾಗುತ್ತದೆ.

ಕೋಲಾರ ತಾಲ್ಲೂಕಿನ ತ್ಯಾವನಹಳ್ಳಿ ಗ್ರಾಮದ ಮುನಿಹನುಮಪ್ಪ ಅವರ ಅನುಭವದಂತೆ ಜಾನುವಾರುಗಳಿಗೆ ಲವಣದ ಕೊರತೆ ಆದಾಗ ಹಸುವೊಂದಕ್ಕೆ ಎರಡು ಹಿಡಿ ಉಪ್ಪು, ಏಳೆಂಟು ಹಸಿರು ಮೆಣಸಿನಕಾಯಿ, ನಾಲ್ಕು ಚಮಚ ಸಾಸಿವೆ, ಎರಡು ಬೆಳ್ಳುಳ್ಳಿ, ಸೇರಿಸಿ ಒಂದು ಹದಕ್ಕೆ ಕುಟ್ಟಿಕೊಂಡು ಹಸುವಿನ ನಾಲಿಗೆಯನ್ನು ಬಾಯಿಂದ ಹೊರಕ್ಕೆ ಹಿಡಿದೆಳೆದು ಈ ಮಿಶ್ರಣವನ್ನು ನಾಲಗೆಯ ಮೇಲೆ ಚೆನ್ನಾಗಿ ಉಜ್ಜಿದರೆ ಲವಣಗಳ ಕೊರತೆ ನೀಗಿದಂತಾಗುವುದು.

ಕೋಲಾರ ತಾಲ್ಲೂಕಿನ ತ್ಯಾವನಹಳ್ಳಿ ಗ್ರಾಮದ ಯರಸೆಟ್ಟಿಹಳ್ಳಿ ಮುನಿಯಮ್ಮ ಹೇಳುವಂತೆ, ಕರು ಹಾಕಿದ ಮೇಲೆ ಹಸುವಿಗೆ ಒಂದೆರಡು ಹಿಡಿ ಬಿದಿರು ಎಲೆಗಳನ್ನು ತಿನ್ನಿಸಿದರೆ ಸತ್ತೆ ಬೀಳುವ ವಿಷಯದಲ್ಲಿ ನಿರಾಳವಾಗಿರಬಹುದು. ಸತ್ತೆ (ಮಾಸುಚೀಲ) ಬಿದ್ದೇ ಬೀಳುತ್ತೆ ಎನ್ನುತ್ತಾರೆ. 'ಗೋರೋಚನ'ವು ದನಗಳ ಹೊಟ್ಟೆಯಲ್ಲಿ ಸಿಕ್ಕುತ್ತೆ. ಹೆಬ್ಬೆರಳು ಗಾತ್ರ ಇರುತ್ತವೆ. ಘಮ್ಮಂತ ಸುವಾಸನೆ ಬರುತ್ತದೆ. ಮಕ್ಕಳ ಕೆಮ್ಮಿಗೆ ಇದು ಪರಿಣಾಮಕಾರಿ ಔಷಧ. ಒಂದು ಚೂರು ಈ ಕಸ್ತೂರಿ ಗೋರೋಚನವನ್ನು ಹಾಲಿನಲ್ಲಿ ಕಲಸಿ ಮಕ್ಕಳಿಗೆ ಕುಡಿಸುವುದು ವಾಡಿಕೆ' ಎಂದು ಗೋರೋಚನದ ಜಾತಕ ಬಿಡಿಸಿಡುತ್ತಾರೆ.

ಮುಳಬಾಗಿಲು ತಾಲ್ಲೂಕಿನ ಚೆನ್ನಾಪುರ ಗ್ರಾಮದ ಮುನಿಯಪ್ಪ ಅವರು ಕೊಡುವ ಮಾಹಿತಿಯಂತೆ ಹೊಟ್ಟೆ ಉಬ್ಬರ ಬಂದಾಗ ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ ಮತ್ತು ಚಕ್ಕೆಯನ್ನು ಚೆನ್ನಾಗಿ ರುಬ್ಬಿ ತಿನ್ನಿಸುತ್ತಾರೆ.

ಕನಕಪುರ ತಾಲ್ಲೂಕಿನ ಹೊಸಕಬ್ಬಾಳು ಗ್ರಾಮದ ಸಿದ್ದಯ್ಯ ಅವರು ತಮ್ಮ ಜಾನುವಾರುಗಳಿಗೆ ಕೆಮ್ಮು ಬಂದಾಗ ಬೆಲ್ಲ ಮತ್ತು ನಾಟಿ ಈರುಳ್ಳಿಯನ್ನು ಜಜ್ಜಿಕುಟ್ಟಿ ತಿನ್ನಿಸಿದರೆ ಕೆಮ್ಮು ಮಾಯವಾಗುತ್ತಿತ್ತೆಂದು ಹೇಳುತ್ತಾರೆ.

ಹೋರಿ ಬಿಡುವುದು: ಕನಕಪುರ ತಾಲ್ಲೂಕಿನ ಹೊಸಕಬ್ಬಾಳು ಗ್ರಾಮದ ಸಿದ್ದಯ್ಯ ಅವರು ತಮ್ಮಲ್ಲಿರುವ ಹಳ್ಳಿಕಾರ್ ತಳಿಯ ಜಾನುವಾರುಗಳನ್ನು ವಂಶಾಭಿವೃದ್ಧಿ

ಮಾಡಿಕೊಳ್ಳಲು ಕಟ್ಟು ಮಸ್ತಾದ ಹಳ್ಳಿಕಾರ್ ತಳಿಯ ಹೋರಿಯನ್ನೇ ತಲಾಶು ಮಾಡಿ ಹೋರಿ ಬಿಡಿಸುತ್ತಾರೆ. ಇಲ್ಲವೇ ಹೋರಿ ಕೊಡಿಸುತ್ತಾರೆ. ಎನ್ನುವುದು ಅವರದೇ ಬಾಯಿಂದ ಕೇಳಿಬಂದ ಮಾತುಗಳು.

ಜಠರದ ಮೂಲಕ ಹೃದಯಕ್ಕೆ ಚುಚ್ಚಿಕೊಂಡ ಚೂಪಾದ ಕಬ್ಬಿಣದ ಚೂರು, ಮೊಳೆ ಇತ್ಯಾದಿ ಸಮಸ್ಯೆ ನಿವಾರಣೆಗೆ: ದೊಡ್ಡಬಳ್ಳಾಪುರ ತಾಲ್ಲೂಕಿನ ವೆಂಕಟಪ್ಪನರವರು ಹೇಳುವಂತೆ ದನಗಳು ಮೇಯುವಾಗ ಹುಲ್ಲಿನ ಜೊತೆ ಬಯಲಲ್ಲಿ ಬಿದ್ದಿರುವ ಕಬ್ಬಿಣದ ಚೂರು ಅಥವಾ ಮೊಳೆಗಳನ್ನು ನುಂಗಿಬಿಟ್ಟಿದ್ದರೆ, ಅದು ಜಠರ ಸೇರಿ ಜಠರದ ಪೊರೆಯ ಮೂಲಕ ಚುಚ್ಚಿಕೊಂಡು ಹೃದಯಕ್ಕೆ ಬಂದು ತಗಲಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಹೃದಯದ ಬಡಿತಕ್ಕೆ ತೊಂದರೆಯಾಗುತ್ತದೆ. ಆಗ ಅನುಭವಸ್ಥ ರೈತರು ಎದೆಯ ಭಾಗಕ್ಕೆ ಎಗರಿಸಿ ಒದ್ದರೆ ಚುಚ್ಚಿಕೊಂಡ ಕಬ್ಬಿಣದ ವಸ್ತು ಮೆಲುಕು ಜಠರದೊಂದಿಗೆ ಹಿಂದಕ್ಕೆ ಸರಿದುಕೊಳ್ಳುವುದೆಂದು ಹೇಳುತ್ತಾರೆ. ಈ ಸಮಸ್ಯೆಯನ್ನು ಕಂಡುಹಿಡಿಯುವುದು ಕಷ್ಟದ ಕೆಲಸವೇ, ಹಾಗಾದಾಗ ಅಂತಹ ಜಾನುವಾರು ಹಾರ್ಟ್ ಅಟ್ಯಾಕ್ ಆದಂತಾಗಿ ಸಾವನ್ನಪ್ಪುತ್ತವೆ ಎನ್ನುತ್ತಾರೆ. ಹೀಗಾಗದಿರಲು ಕೊಟ್ಟಿಗೆಯಲ್ಲಿ ದನಗಳಿಗೆ ಹುಲ್ಲು ಹಾಕುವಾಗ ಹುಲ್ಲಿನಲ್ಲಿ ಕಬ್ಬಿಣದ ಚೂರುಗಳಿವೆಯೇ ಎಂಬುದನ್ನು ಪತ್ತೆ ಹಚ್ಚಿಕೊಳ್ಳಬೇಕು. ಈ ಬಗ್ಗೆ ಸದಾ ಎಚ್ಚರದಿಂದಿರಬೇಕು ಎನ್ನುತ್ತಾರೆ. ಇದೇ ವೆಂಕಟಪ್ಪನವರು ವಿವರಿಸುವಂತೆ, ನಾಲಗೆಯ ಕೆಳಗೆ ರಕ್ತ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ದನಗಳು ಮೇವಾಡುವುದು ನಿಂತುಹೋಗಿಬಿಡುತ್ತದೆ. ಆಗ ಆ ರಕ್ತ ನಾಳವನ್ನು ಬಗೆದು ಹೆಪ್ಪುಗಟ್ಟಿದ ರಕ್ತವನ್ನು ಹೊರ ಹೋಗುವಂತೆ ಮಾಡಿದರೆ ಮಾಮೂಲಿಯಾಗಿ ಆ ದನಗಳು ಮೇವಿಗೆ ಒಗ್ಗಿಕೊಳ್ಳುತ್ತವೆ, ಮೇವು ತಿನ್ನುತ್ತವೆ, ಮೆಲುಕು ಹಾಕುತ್ತವೆ.

ಬ್ಯಾಡಗಿ ತಾಲ್ಲೂಕಿನ ಮಹಾದೇವಪ್ಪ ಕರಡೇರ ಅವರು ಈ ಕೆಳಕಂಡ ನಾಟೀ ಚಿಕಿತ್ಸೆಗಳನ್ನು ಮಾಡುತ್ತಾರೆ.

1. ಲದ್ದಿ ಬೇನೆ: ಬ್ಯಾಡಗಿ ತಾಲ್ಲೂಕಿನ ಮಹಾದೇವಪ್ಪ ಕರಡೇರ ತಮ್ಮ ಜಾನುವಾರುಗಳಿಗೆ ಲದ್ದಿಬೇನೆ ಆಗಿ ಸಗಣಿಯು ಕುದುರೆ ಲದ್ದಿಯಂತೆ ಗಟ್ಟಿ ಉಂಡೆಗಳಾಗಿ ಸಗಣಿ ಹಾಕಲು ಕಷ್ಟವಾದಾಗ ಇದರ ಲಕ್ಷಣಗಳಾದ ಮೇವು ತಿನ್ನದಿರುವುದು, ನೀರು ಕುಡಿಯದೆ ಇರುವುದು ಮತ್ತು ಹೊಟ್ಟೆ ಉಬ್ಬರ ವಾಗುವುದನ್ನು ಗಮನಿಸುತ್ತಾರೆ. ಚಿಕಿತ್ಸೆ ರೂಪದಲ್ಲಿ ಒಂದು ಹಿಡಿ ಹಾಲವಾಣ (ವಾರಜೇಪ ಮರ) ಗಿಡದ ತೊಗಟೆ, ಏಳು ಮೆಣಸಿನಕಾಳು, ಏಳು ಬೆಳ್ಳುಳ್ಳಿ, ಸ್ವಲ್ಪ ಶುಂಠಿ, ಇವುಗಳನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಚಚ್ಚಿ ಚರಟವನ್ನು ತೆಗೆದು ಮೂರು ಗೊಟ್ಟದಂತೆ ದಿನಕ್ಕೆ ಒಂದು ಸಾರಿ ಕುಡಿಸಿದರೆ ಸರಾಗವಾಗಿ ಸಗಣಿ ಹಾಕುವುದಂತೆ.

2. ಭೇದಿ: (ಉಚ್ಚುವುದು) ವಾಸನೆಯುಕ್ತ ನೀರಿನಂತಹ ಸಗಣಿಯನ್ನು

ಉಬ್ಬಿಕೊಳ್ಳುತ್ತಿದ್ದರೆ, ಕಾಡಶೆಂಬಿ ಗಿಡದ ಸೊಪ್ಪು ಎರಡು ಹಿಡಿಯಷ್ಟು, ಕುಂಟಿಗನ ಸೊಪ್ಪು ಒಂದು ಹಿಡಿಯಷ್ಟು, ಏಳು ಮೆಣಸಿನಕಾಳು, ಏಳು ಬೆಳ್ಳುಳ್ಳಿ, ಸ್ವಲ್ಪ ಶುಂಠಿಯನ್ನು ಸೇರಿಸಿ ಸಣ್ಣಗೆ ಜಜ್ಜಿ ಮಜ್ಜಿಗೆಯಲ್ಲಿ ಮೂರು ಗೊಟ್ಟದಷ್ಟು ಕುಡಿಸಬೇಕು.

3. **ಮೂಗಿನಲ್ಲಿ ರಕ್ತ ಬರುವುದು:** ಅಂಟುವಾಳಕಾಯಿಯ ನೊರೆ ಮೂಗಿನಲ್ಲಿ ಬಿಟ್ಟರೆ ರಕ್ತಸ್ರಾವ ಕಮ್ಮಿಯಾಗುವುದು.

4. **ಜ್ವರ:** ಹುಲ್ಲು ತಿನ್ನದೆ ಸಪ್ಪೆ ಮುಖ ಮಾಡಿಕೊಂಡು ಜೊಲ್ಲು ಸುರಿಸುತ್ತಿದ್ದರೆ ಅದು ಜ್ವರ ಆಗಿರಬಹುದು. ಆಗ ಮುಳ್ಳು ಕಳ್ಳಿ ಬೇರು ಒಂದು ಹಿಡಿ, ಏಳು ಮೆಣಸಿನಕಾಳು, ಏಳು ಬೆಳ್ಳುಳ್ಳಿ, ಸ್ವಲ್ಪ ಶುಂಠಿ ಸೇರಿಸಿ, ಜಜ್ಜಿ ಚರಟ ತೆಗೆದು ಅಕ್ಕಿ ತೊಳೆದ ನೀರಿನಲ್ಲಿ ಕುಡಿಸಬೇಕು.

ಕೃಷಿ ಚಟುವಟಿಕೆಗಳಲ್ಲಿ ಜಾನುವಾರುಗಳ ಬಳಕೆ

ಕೃಷಿ ಚಟುವಟಿಕೆಗಳಲ್ಲಿ ಜಾನುವಾರುಗಳನ್ನು ವಿವಿಧ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತದೆ. ಉಳುಮೆಗೆ, ಬಿತ್ತನೆಗೆ, ಕಳೆ ತೆಗೆಯುವಾಗ, ಕುಂಟೆ ಹೊಡೆಯುವಿಕೆಗೆ, ಆರ್ಗಡ್ಡಿ ಮೇಯಿಸುವುದಕ್ಕೆ, ಕೃಷಿ ಉತ್ಪನ್ನಗಳ ಸಾಗಾಣಿಕೆಗೆ, ಕಣದ ಕೆಲಸಕ್ಕೆ, ಹೀಗೆ ವಿವಿಧ ಕೆಲಸಗಳಲ್ಲಿ ದೇಸೀ ದನಗಳನ್ನು ದುಡಿಸಿಕೊಳ್ಳಲಾಗುತ್ತದೆ.

ಆರ್‌ಕಡ್ಡಿ ಮೇಯಿಸುವುದು

ರಾಗಿ ಹೊಲಗಳಲ್ಲಿ ತೆನೆ ಬರುವುದಕ್ಕೂ ಮೊದಲು ಬೆಳೆದು ನಿಂತ ರಾಗಿ ಪೈರುಗಳ ತುದಿಯ ಗರಿಗಳನ್ನು ಮೇಯಲು ನಾಟಿದನಗಳನ್ನು ಬಿಡಲಾಗುತ್ತದೆ. ದನಗಳು ಪೈರಿನ ಬುಡಕ್ಕಾಗಲಿ, ಮಧ್ಯಭಾಗಕ್ಕಾಗಲಿ ಬಾಯಿಹಾಕದೆ ನಾಲಗೆಯಲ್ಲೇ ಪೈರಿನ ಮೇಲ್ಭಾಗದಲ್ಲಿರುವ ಗರಿಗಳನ್ನಷ್ಟೇ ಕ್ರೋಢೀಕರಿಸಿಕೊಂಡು ಮೇಯುತ್ತವೆ. ಇದನ್ನು ಆರ್‌ಕಡ್ಡಿ ಮೇಯಿಸುವುದು ಎಂದು ಕರೆಯಲಾಗುತ್ತದೆ. ಅಂತಹ ಪೈರುಗಳಲ್ಲಿ ರಾಗಿ ತೆನೆ ದಪ್ಪನಾಗಿ ಹೊರಟು ಚನ್ನಾಗಿ ಕಾಳು ಕಟ್ಟಿ ಉತ್ತಮ ಇಳುವರಿ ಬರುತ್ತದೆ ಎನ್ನುತ್ತಾರೆ ಕೋಲಾರದ ಶೆಟ್ಟಿಗಾನಹಳ್ಳಿಯ ಲಕ್ಷ್ಮಿನಾರಾಯಣಪ್ಪ ಅವರು.

ಶಿಂಗ್ರಯ್ಯ, ಕೆ., ಕಚ್ಚೀಗೆರೆ, ಮಂಡ್ಯ ತಾಲ್ಲೂಕು ಇವರು ಜಾನುವಾರು ರೋಗಗಳ ಉಪಶಮನಕ್ಕೆ ಈ ಮುಂದಿನ ನಾಟಿ ಚಿಕಿತ್ಸಾ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

1. ರಕ್ತ ಭೇದಿ. ಮೂತ್ರದಲ್ಲಿ ರಕ್ತ, ಹಾಲಿನಲ್ಲಿ ರಕ್ತ

ಮುಟ್ಟಿದರೆ ಮುನಿ ಸೊಪ್ಪನ್ನು ಎರಡು ಹಿಡಿಯಷ್ಟು ತೆಗೆದುಕೊಂಡು ಒಂದು ಲೋಟದಷ್ಟು ನೀರು ಹಾಕಿ ಚೆನ್ನಾಗಿ ರುಬ್ಬಿದ ನಂತರ, ರಸ ಹಿಂಡಿ, ದಿನಕ್ಕೆ ಎರಡು ಬಾರಿಯಂತೆ ಕುಡಿಸಿದರೆ ಸಂಪೂರ್ಣ ಗುಣ ಕಾಣುತ್ತದೆ.

2. ಗಬ್ಬ ನಿಲ್ಲಲು

"ಹಿಂದಿನ ಕಾಲದಲ್ಲಿ ಕೃತಕ ಗರ್ಭಧಾರಣೆ ಇರಲಿಲ್ಲ. ಹಸುವಿಗೆ ಹೋರಿ ಕೊಡಿಸಿದ ನಂತರ, ನೆರಳಿನಲ್ಲಿ ಕಟ್ಟಿಹಾಕಿ, ಒಂದು ಹಿಡಿ ಎಳೆ ಹಲಸಿನ ಚಿಗುರು, ಎರಡು ಹಿಡಿ ಆವರಿಕೆ ಹೂ ಅಥವಾ ಮೊಗ್ಗು, ಒಂದು ಚಮಚ ಅರಿಶಿನ ಮತ್ತು ಎರಡು ಹಿಡಿ ನಾಟಿ ಈರುಳ್ಳಿ ಇವುಗಳನ್ನು ಚೆನ್ನಾಗಿ ರುಬ್ಬಿ, ಎರಡರಿಂದ ಮೂರು ಲೋಟದಷ್ಟು ತಿಳಿ ಮಜ್ಜಿಗೆಯಲ್ಲಿ ಬೆರಸಿ ಕುಡಿಸುತ್ತಿದ್ದೆವು, ಆಗ ಗರ್ಭ ನಿಲ್ಲುತ್ತಿತ್ತು", ಎಂದು ಹೇಳುತ್ತಾರೆ ಸಿಂಗ್ರಯ್ಯನವರು.

ಈಗಿನ ಕೃತಕ ಗರ್ಭಧಾರಣಾ ಕಾಲದಲ್ಲೂ ಸಹ ಈ ಪದ್ಧತಿ ಫಲಕಾರಿಯಾಗುತ್ತಿದೆಯೆಂಬುದು ಆ ಪ್ರದೇಶದ ಕೆಲವು ರೈತರ ನಂಬಿಕೆ.

ಚಾಮಯ್ಯ, ಹುಲ್ಲುಕೆರೆ, ಮಂಡ್ಯ ತಾಲ್ಲೂಕು ಇವರ ಅನುಭವದಂತೆ, ಹಸುಗಳಲ್ಲಿ ಭೇದಿ ಕಂಡುಬಂದಾಗ ಅರ್ಧ ಹಿಡಿಯಷ್ಟು ಜಂಬುನೇರಳೆ ಮರದ ಚಕ್ಕೆ (ಹೆಚ್ಚಿನ ನಾರಿನಂಶ ಇರುವ) ತೆಗೆದುಕೊಂಡು, ನೆನೆಸಿಟ್ಟುಕೊಂಡಿರುವ ಎರಡು ಹಿಡಿ ಮೆಂತ್ಯ, ಒಂದು ಹಿಡಿ ನೆಲದುರ್ಬ ಸೊಪ್ಪು, ಈ ಮೂರನ್ನು ಚೆನ್ನಾಗಿ ಅರೆದು ಉಂಡೆ ಕಟ್ಟಿ ವೀಳ್ಯದ ಎಲೆಯಲ್ಲಿ ಸುತ್ತಿ ತಿನ್ನಿಸುವುದರಿಂದ ಭೇದಿ ನಿಂತ ಹಲವಾರು ಉದಾಹರಣೆಗಳಿವೆ. ಅಥವಾ ಇದೇ ಅರೆದ ಔಷಧಿಯನ್ನು ಸುಮಾರು ಒಂದು ಲೀಟರು ತಿಳಿ ಮಜ್ಜಿಗೆಯಲ್ಲಿ ಕಲೆಸಿ ನಿಧಾನವಾಗಿ ಕುಡಿಸುವುದರಿಂದ ಭೇದಿ ನಿಲ್ಲುತ್ತದೆ.

ಚುಂಚೇಗೌಡ, ಕಿರಗಂದೂರು. ಮಂಡ್ಯ ತಾಲ್ಲೂಕು ಇವರು ಕಂಡುಕೊಂಡಂತೆ, ಕ್ಯಾಸೆ ಹೊಟ್ಟನ್ನು (ಭತ್ತದ ನುಣುಪಾದ ಹೊಟ್ಟು ಅಥವಾ ನುಣುಪಾದ ತೌಡು), ಯಥೇಚ್ಛವಾಗಿ ತಿನ್ನಿಸುವುದರಿಂದ ಹಾಲುಕರೆವ ಹಸುಗಳಲ್ಲಿ ಭೇದಿ ಹೆಚ್ಚಾಗುತ್ತದೆ. ಅದ್ದರಿಂದ ಈ ವಿಷಯದಲ್ಲಿ ಎಚ್ಚರವಿರಲಿ ಎನ್ನುತ್ತಾರವರು. ಹಾಗೆಯೇ, ಎಳೆಕರುಗಳಿಗೆ ಬತ್ತದ ಒಣಹುಲ್ಲನ್ನು ಹೆಚ್ಚಾಗಿ ತಿನ್ನಿಸುವುದರಿಂದ ಮೂತ್ರದಲ್ಲಿ ರಕ್ತ ಕಾಣಿಸಿಕೊಳ್ಳುತ್ತದೆಯಂತೆ. ಆದ್ದರಿಂದ ಭತ್ತದ ಹುಲ್ಲನ್ನು ಹಿತಮಿತವಾಗಿ ಕೊಡಿ ಎನ್ನುತ್ತಾರವರು. ಕೆಚ್ಚಲು ವಾತವಾದಾಗ ಲೋಳೆಸರ ಅಥವಾ ಲೋಕಸರದ ಒಂದು ಪಟ್ಟೆ (ಎಲೆ) ಯನ್ನು ತೆಗೆದುಕೊಂಡು ಅದರ ಸಿಪ್ಪೆ ತೆಗೆದು ಅರಿಶಿನದಲ್ಲಿ ಬೆರಸಿ ಊತಗೊಂಡಿರುವ ಕೆಚ್ಚಲಿಗೆ ಲೇಪಿಸಿದರೆ, ಆ ಭಾಗವನ್ನು ತಣ್ಣಗಾಗಿಸಿ, ಊತ ಕಡಿಮೆಯಾಗುತ್ತದೆ.

ಹಾಸನ ಜಿಲ್ಲೆಯ ಅರಸೀಕೆರೆಯ ರುದ್ರಸ್ವಾಮಿಯವರು ಹಸುಗಳಲ್ಲಿ ಪುನರಾವರ್ತಿತ (ಫಲ ನಿಲ್ಲದೆ ಪದೇ ಪದೇ ಬೆದೆಗೆ ಬರುವ) ಬೆದೆ ಕಂಡುಬಂದಾಗ, ದಿನಕ್ಕೆ ಎರಡು ಹಿಡಿಯಂತೆ ಕರಿಬೇವಿನ ಸೊಪ್ಪು ತಿನ್ನಿಸುವುದರಿಂದ ಹಸುಗಳು ಫಲವಾಗುವ ಸಾಧ್ಯತೆಗಳನ್ನು ಶೋಧಿಸಿಕೊಂಡಿದ್ದೇವೆ ಎನ್ನುತ್ತಾರೆ.

ಮಂಡ್ಯ ಜಿಲ್ಲೆಯ ಕಿರಗಂದೂರಿನ ದಿನೇಶ್ ಅವರು ಹೇಳವಂತೆ, ಬೆದೆಗೆ ಬಾರದ ಪಡ್ಡೆಗಳು ಅಥವಾ ರಾಸುಗಳು ಇದ್ದಲ್ಲಿ, ಅಥವಾ ಕೆಲವು ಕಡಸುಗಳು ಪ್ರೌಢಾವಸ್ಥೆಗೆ ಬಂದರೂ ಬೆದೆಗೆ ಬಾರದಿರುವುದು ಮತ್ತು ಕರುಹಾಕಿ ಸುಮಾರು ಐದಾರು ತಿಂಗಳು ಕಳೆದರೂ ಬೆದೆಗೆ ಬಾರದಿರುವ ಹಸುಗಳಿಗೆ ದಿನಕ್ಕೆ ಎರಡರಿಂದ ಮೂರು ಹಿಡಿಯಷ್ಟು ನುಗ್ಗೆಸೊಪ್ಪು ಅಥವಾ ಒಂದು ಪರಂಗಿ ಕಾಯಿಯನ್ನು, ಸುಮಾರು ಒಂದು ವಾರದ ಕಾಲ ತಿನ್ನಿಸುವುದರಿಂದ ಕಡಸುಗಳು ಹಾಗೂ ಹಸುಗಳಲ್ಲಿ ಬೆದೆ ಚೋದಕ ಹೆಚ್ಚಾಗಿ ಬೆದೆಗೆ ಬರುತ್ತವಲ್ಲದೆ ಫಲ ನಿಲ್ಲುವ ಸಾಧ್ಯತೆಗಳು ಹೆಚ್ಚಾಗಿವೆಯಂತೆ.

ದಿನೇಶ್ ಹೇಳುವಂತೆ ಮೊನಚಾದ ವಸ್ತುಗಳಿಂದಾದ ಗಾಯಗಳಿಗೆ ತಕ್ಷಣ 'ಮುಟ್ಟಿದರೆ ಮುನಿ' ಸೊಪ್ಪಿನ ರಸವನ್ನು ಗಾಯದ ಮೇಲೆ ಹಿಂಡಿ, ಹಿಂಡಿದ ಸೊಪ್ಪನ್ನು ಗಾಯದ ಮೇಲೆ ಒತ್ತಿ ಹಿಡಿಯುವುದರಿಂದ ರಕ್ತ ಸ್ರಾವವು ತಕ್ಷಣ ನಿಲ್ಲುತ್ತದೆ. ನಂತರ ಅಡ್ಡಿಕೆ ಸೊಪ್ಪನ್ನು ಎಲೆ ಬಿಡಿಸಿ ಅದರ ರಸವನ್ನು ಗಾಯದ ಮೇಲೆ ಹಿಂಡಿ ಸುತ್ತಲೂ ಬೇವಿನ ಎಣ್ಣೆ ಸವರುವುದರಿಂದ ಗಾಯವು ಬೇಗ ವಾಸಿಯಾಗುವುದಲ್ಲದೆ ನೊಣಗಳು ಗಾಯದ ಮೇಲೆ ಕೂರದಂತೆ ತಡೆಯಬಹುದು.

ಶಂಕರಪ್ಪ, ಗೆಜ್ಜಲಗೆರೆ, ಮಂಡ್ಯ, ಇವರು ಹಸುಗಳು ಕರು ಹಾಕಿದ ನಂತರ ಸೆತ್ತೆ (ಮಾಸು) ಬೀಳದಿರುವ ಬಗ್ಗೆ ಹೀಗೆ ಹೇಳುತ್ತಾರೆ. ಕರುಹಾಕಿಪ 12ರಿಂದ 24 ಗಂಟೆಗಳೊಳಗಾಗಿ ಸೆತ್ತೆ ಬೀಳುವುದು ಆರೋಗ್ಯವಂತ ಹಸುವಿನ ಲಕ್ಷಣ. ಆದರೆ ಕೆಲವು ಹಸುಗಳಲ್ಲಿ ಕರುಹಾಕಿದ ನಂತರ ಸೆತ್ತೆ ಬೀಳದಿರುವುದು ಕಂಡಾಗ ಸುಮಾರು 3ರಿಂದ 4 ಹಿಡಿ ಬಿದಿರಿನ ಎಲೆಗಳನ್ನು ತಿನ್ನಿಸುವುದರಿಂದ ತಕ್ಷಣ ಸೆತ್ತೆ ಬೀಳುತ್ತದೆಂಬುದು ನಮ್ಮ ಊರವರು ಅನುಸರಿಸಿಕೊಂಡು ಬಂದ ಉಪಾಯ ಎನ್ನುತ್ತಾರೆ. ಆ ಬಿದಿರಿನ ಎಲೆಗಳಲ್ಲಿ ಈಸ್ಟ್ರೋಜನ್‌ಗೆ ಸರಿಸಮನಾದ ವಸ್ತುವಿದ್ದು ಅದು ಗರ್ಭಕೋಶವನ್ನು ಹಿಂಡಿ ಸೆತ್ತೆ ಅಥವಾ ಮಾಸನ್ನು ಹೊರಹಾಕಲು ಸಹಕಾರಿಯಲ್ಲವೇ ಎಂದು ಕೇಳಿದರೆ, "ಅದೇನೋ, ಅದೆಲ್ಲಾ ನಮಗೆ ಗೊತ್ತಿಲ್ಲ, ಸ್ವಾಮಿ" ಎನ್ನುತ್ತಾರೆ.

ಬೋರಮ್ಮ, ಕಚ್ಚೇಗೆರೆ, ಮಂಡ್ಯ, ಇವರು ಹೇಳುವಂತೆ, ಕೆಲವು ಕಡೆ ಬಿದಿರು ಸೊಪ್ಪಿಗೆ ಬದಲಾಗಿ ಹಕ್ಕುಲ್ಲು (ಶುಂಠಿ ಹುಲ್ಲು) ಅಥವಾ ಗರಿಕೆ ಹುಲ್ಲನ್ನು ತಿನ್ನಿಸಿದರೆ ಸೆತ್ತೆ ಬೀಳುತ್ತದೆ ಎನ್ನುತ್ತಾರೆ.

ಮಂಡ್ಯ ಜಿಲ್ಲೆಯ ಬಸರಾಳು ಗ್ರಾಮದ ನಾಗಪ್ಪ ಅವರು ಹೇಳುವಂತೆ, ಆಹಾರದಲ್ಲಿನ ವ್ಯತ್ಯಾಸದಿಂದ ಉಂಟಾಗುವ ಹೊಟ್ಟೆಉಬ್ಬರಕ್ಕೆ ಒಂದು ಹಿಡಿಯಷ್ಟು ಹಸಿಶುಂಠಿ, ಎರಡರಿಂದ ಮೂರು ಹಿಡಿ ನಾಟಿ ಈರುಳ್ಳಿ, ಒಂದು ಚಮಚೆಯಷ್ಟು ಅರಿಶಿನ ಮತ್ತು ಇಂಗು, 3ರಿಂದ 4 ಚಮಚೆ ಉಪ್ಪು ಮತ್ತು ಕರ್ಪೂರ, ಎರಡು ಹಿಡಿ ನೆನೆಸಿದ ಮೆಂತ್ಯ ಇವುಗಳನ್ನು ನುಣ್ಣಗೆ ಅರೆದು ಬೆಚ್ಚಗಿನ ನೀರಿನಲ್ಲಿ ಬೆರಸಿ

ಕುಡಿಸುವುದರಿಂದ ಹೊಟ್ಟೆ ಉಬ್ಬರ ಇಳಿಯುವುದಲ್ಲದೆ ಬಹು ಬೇಗನೆ ಹಸು ಮೆಲುಕು ಹಾಕಲು ಪ್ರಾರಂಭಿಸುತ್ತದೆ.

ಆನೇಕಲ್ ತಾಲ್ಲೂಕಿನ ದೊಮ್ಮಸಂದ್ರದ ಮುರಳಿ ಮೋಹನ್ ಹೇಳುವಂತೆ " ಕೆಚ್ಚಲು ಬಾವು" ಅಲ್ಲದ ಪ್ರಕರಣಗಳಲ್ಲಿ ಕರೆಯುವ ಹಸುಗಳ ಕೆಚ್ಚಲಿನ ತೊಟ್ಟುಗಳಿಂದ ಹಾಲು ಕರೆಯುವ ಸಂದರ್ಭದಲ್ಲಿ ಧಾರಾಕಾರವಾಗಿ ರಕ್ತ ಹರಿದು ಬಂದರೆ ಮುಟ್ಟಿದರೆ ಮುನಿ ಗಿಡವನ್ನು ಹಸುವಿನ ಮೇವಿಗೆ ಸೇರಿಸಿ ಕೊಡಿ, ರಕ್ತಸ್ರಾವ ಕಡಿಮೆಯಾಗುತ್ತಾ ಬರುತ್ತದೆ.

ಮುರುಳಿ ಮೋಹನ್‌ರವರ ಅನುಭವದ ಪ್ರಕಾರ ದನಗಳ ಮೈಮೇಲೆ ಚಿಗಟ, ಉಣ್ಣೆ, ಹೇನುಗಳು ಬಿದ್ದರೆ ಬೇವಿನ ಬೀಜವನ್ನು ಕೊಂಚ ನೀರು ಸೇರಿಸಿ ಅರೆದುಕೊಂಡು ಮೈಮೇಲೆಲ್ಲಾ ಲೇಪಿಸಿದರೆ ಅವು ಉದುರಿ ಬೀಳುತ್ತವೆ. ಇದರಿಂದ ಹೊರಮೈ ಪರಾವಲಂಬಿಗಳನ್ನು ಹೋಗಲಾಡಿಸಿ ಮುಂದೊದಗಬಹುದಾದ ರಕ್ತಹೀನತೆಯಿಂದ ದೂರವಿರಬಹುದು. ಜತೆಗೆ ಇದೇ ಪರವಾಲಂಬಿಗಳಿಂದ ಹರಡಬಹುದಾದ ರಕ್ತ ಕಾಯಿಲೆಗಳನ್ನು ತಡೆಗಟ್ಟಬಹುದು. ದನಗಳು ಪಿಟ್ಟೆಪಿಟ್ಟೆಯಾಗಿ ಗಟ್ಟಿ ಸಗಣಿ ಹಾಕುತ್ತಿದ್ದರೆ ಎರಡು ಮೂರು ಹಿಡಿಯಷ್ಟು ಹರಳಿನ ಬೀಜಗಳನ್ನು ರುಬ್ಬಿಕೊಂಡು ಸುಮಾರು ಅರ್ಧ ಲೀಟರ್ ನೀರಿನಲ್ಲಿ ಕಲಸಿ ಕುಡಿಸಿದರೆ ಸರಿಹೋಗುತ್ತದೆ. ಅಥವಾ ಸುಮಾರು ಕಾಲು ಲೀಟರಿಗಿಂತ ಕಮ್ಮಿ ಹರಳೆಣ್ಣೆಯನ್ನೂ ಕುಡಿಸಬಹುದು.

ಹಾಸನ ತಾಲ್ಲೂಕಿನ ಕೆರಗಳ್ಳಿ ಕೊಪ್ಪಲಿನ ಹುಚ್ಚೇಗೌಡರ ಅನುಭವದಂತೆ ಈ ಮುಂದಿನ ನಾಟಿ ಪಶುಸಂಗೋಪನಾ ವಿಧಾನಗಳನ್ನು ಅನುಸರಿಸಬಹುದಾಗಿದೆ.

ಮೂಗಿನಿಂದ ರಕ್ತ ಸೋರುತ್ತಿದ್ದರೆ ಎಂಟು ಬೇವಿನ ಎಲೆಯ ರಸವನ್ನು ಎಂಟು ಹನಿ ಉತ್ತರಾಣಿ ಸೊಪ್ಪಿನ ಎಲೆಯ ರಸದೊಂದಿಗೆ ಮಿಶ್ರಣ ಮಾಡಿ ಮೂಗಿನ ಹೊಳ್ಳೆಗಳೊಳಕ್ಕೆ ಸುರಿದರೆ ರಕ್ತ ಸ್ರಾವ ಕಡಿಮೆಯಾಗುವುದು. ಕಣ್ಣಿನ ತೊಂದರೆಯಿದ್ದಲ್ಲಿ, ಬೆಟ್ಟದ ನೆಲ್ಲಿಕಾಯಿಯ ರಸವನ್ನು ಕಾಡಿಗೆ ಹಚ್ಚುವ ರೀತಿಯಲ್ಲಿ ಕಣ್ಣಿನ ಸುತ್ತಲೂ ದಿನಕ್ಕೆ ಮೂರು ಸಾರಿ ಹಚ್ಚಬೇಕು.

ದನಗಳಲ್ಲಿ ರಾತ್ರಿ ಕುರುಡನ್ನು ಪತ್ತೆಹಚ್ಚಿಕೊಳ್ಳುವುದು ತುಸು ಕಷ್ಟದ ಕೆಲಸವೇ. ಆದರೆ ರೈತರು ತಮ್ಮ ಅನುಭವದ ಪ್ರಕಾರ ದನದ ವರ್ತನೆಗಳನ್ನು ಪದೆ ಪದೇ ಗಮನಿಸಿ ರಾತ್ರಿ ಕುರುಡನ್ನು ಗುರುತಿಸಿ ಕೊಳ್ಳಬಹುದು. ರಾತ್ರಿ ಕುರುಡು ಇರುವ ದನಕ್ಕೆ ಕುಂಬಳಕಾಯಿಯ ಬೀಜವನ್ನು ಸುಟ್ಟು, ಅದರ ಬೂದಿಯೊಂದಿಗೆ, ಎರಡರಷ್ಟು ಪ್ರಮಾಣದಲ್ಲಿ ಹಸುವಿನ ಬೆಣ್ಣೆಯನ್ನು ಕಲೆಸಿ, ಗಂಧ ತೇಯ್ದಂತೆ ತೇಯ್ದು ಕಣ್ಣಿಗೆ ಕಾಡಿಗೆಯಂತೆ ಹಚ್ಚಬೇಕು.

ಹಾಲು ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಕೈಯಂಗನೆ ಸೊಪ್ಪನ್ನು ದಿನಕ್ಕೆ ಹತ್ತು ಎಲೆಯಂತೆ 40 ದಿನದವರೆಗೆ ತಿನ್ನಿಸಬೇಕು. ಅಥವಾ ಅಮೃತಬಳ್ಳಿ ಎಲೆ ಮತ್ತು ಸತಾವರಿ (Asparagus jalcata) ಗಿಡದ ಬೇರಿನ ಕಷಾಯವನ್ನು ಕೊಂಚ ಹಾಲಿನಲ್ಲಿ ಬೆರೆಸಿಕೊಂಡು ಒಂದು ಬಾರಿಗೆ 50 ಮಿಲಿ ಲೀಟರಿನಂತೆ ದಿನಕ್ಕೆರಡು ಬಾರಿ ಕುಡಿಸಬೇಕು.

ದನಗಳಲ್ಲಿ ಮೂತ್ರ ವಿಸರ್ಜನೆ ಕಷ್ಟವಾಗಿದ್ದರೆ ತೆಂಗಿನ ಬೇರನ್ನು ಅರೆದು ಅಕ್ಕಿ ತೊಳೆದ ನೀರಿನಲ್ಲಿ ಮಿಶ್ರಣ ಮಾಡಿ ಕುಡಿಸಬೇಕು.

ಜಾನುವಾರುಗಳಿಗೆ ಗಾಯವಾಗಿ ರಕ್ತ ತೊಟ್ಟಿಕ್ಕುತ್ತಿದರೆ ಲಂಟಾನ (Lantana aculeata) ದ ಎಲೆಗಳ ರಸವನ್ನು ಗಾಯದ ಮೇಲೆ ಹಿಂಡುವುದು. ಅಥವಾ ಗಾಯಕ್ಕೆ ಹರಿಶಿನ ಪುಡಿ ಹಚ್ಚಬಹುದು. ಹರಿಶಿನ ಪುಡಿ ಮತ್ತು ಬೆಣ್ಣೆಯನ್ನು ಮಿಶ್ರ ಮಾಡಿಯೂ ಹಚ್ಚಬಹುದು. ಇದರಿಂದ ರಕ್ತ ಸ್ರಾವ ನಿಲ್ಲುತ್ತದೆ.

ಭೇದಿಯ ಸಮಸ್ಯೆ ಬಂದಾಗ ಜಾಜಿಕಾಯಿ (ಜಾಕಾಯಿ, ಜಾಯಿಕಾಯಿ) (Myristica dactyloides) ಯನ್ನು ಕುಟ್ಟಿಕೊಂಡು ಮಜ್ಜಿಗೆಯೊಂದಿಗೆ ಬೆರಸಿ ಕುಡಿಸಬೇಕು.

ಮಲಬದ್ಧತೆಯಾದಾಗ ಗಂಜಿಗಿಡ (ಕೇಲಾ ಹೂ, ಸರ್ವಜಯ, ಕರೇಗುಲಗಂಜಿ, ಹೂದಿಂಗಣ) (Canna indica) ದ ಸೊಪ್ಪಿನ ರಸವನ್ನು ದಿನಾ ಬೆಳಿಗ್ಗೆ ಮತ್ತು ರಾತ್ರಿ ಸುಮಾರು 300 ಮಿಲಿ ಲೀಟರಿನಷ್ಟು ಕುಡಿಸುವುದು. ಅಥವಾ ನುಗ್ಗೆಗಿಡದ ಚಕ್ಕೆ ಮತ್ತು ಸೊಪ್ಪನ್ನು ಅರೆದು, ರಸ ಮಾಡಿ ದಿನಾ ಬೆಳಿಗ್ಗೆ ಮತ್ತು ರಾತ್ರಿ 300 ಮಿಲಿ ಲೀಟರಿನಷ್ಟು ಕುಡಿಸುವುದು.

ಎಚ್.ವಿ. ಸಜ್ಜನ್, ಹುಲಿಕೆರೆ ಪೋಸ್ಟ್, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರು ಜವಾರಿ ದನಗಳನ್ನು ಸಾಕುತ್ತಾ ಬಂದವರು. ಅವರ ನಾಟಿ ಚಿಕಿತ್ಸಾ ಕ್ರಮಗಳು ಹೀಗಿವೆ.

1. **ಸೆಲೆ ಆದಾಗ:** ನಾಲಿಗೆ ನರ ಬಗೆದು ರಕ್ತ ಸೋರಿಸಿ, ಬೆಳ್ಳುಳ್ಳಿ, ಮೆಣಸು, ನಿಂಬೆ ಹಣ್ಣಿನ ರಸ ಕುಡಿಸಿದರೆ ಸರಿ ಹೋಗುತ್ತದೆ.
2. **ಹೊಟ್ಟೆ ಉಬ್ಬಿದರೆ:** ಹೊಟ್ಟೆ ಉಬ್ಬಿದರೆ ಹಸುಗಳು ಮೆಲುಕು ಹಾಕುವುದಿಲ್ಲ. ಆಗ ಬಜೆ ಉಜ್ಜಿಕೊಂಡು, ಔಡಲೆಣ್ಣೆ ಜತೆಗೆ ಬೆರಸಿ ಕುಡಿಸಬೇಕು.
3. **ಉಣ್ಣೆ ನಿಯಂತ್ರಣಕ್ಕೆ:** ಮೈಮೇಲೆ ಉಣ್ಣೆಗಳಿದ್ದರೆ, ಸೀತಾಫಲ ಸೊಪ್ಪನ್ನು ರುಬ್ಬಿ ಮೈಮೇಲೆಲ್ಲಾ ಸವರಬೇಕು.
4. **ಗಾಯಕ್ಕೆ ಹುಳ ಬಿದ್ದಾಗ:** ತೊಂಡೆ ಸೊಪ್ಪನ್ನು ರುಬ್ಬಿ ಗಾಯದ ಮೇಲೆ ಹಚ್ಚಬೇಕು.

5. ಕಾಲು ಬಾಯಿ ಜ್ವರ: ಇದು ಡಿಸೆಂಬರ್ ತಿಂಗಳಲ್ಲಿ ಬರುವುದು. ಗೇರು ಬೀಜ ಜಜ್ಜಿ ಮುದ್ದೆಯಲ್ಲಿಟ್ಟು ನುಂಗಿಸುವುದು.
6. ಹೆಗಲು ಬಾವಿಗೆ: ಹರಿಶಿನ ಮತ್ತು ಮೊಸರು ಕಲಸಿ ತಿಕ್ಕುವುದು.
7. ಕಾಲು ಮುರಿದಾಗ: ಮುರಿದ ಕಾಲಿನ ಹೊರಮೈ ಮೇಲೆ ಬಂದ್ರಿಕೆ ಸೊಪ್ಪು ಹಾಕಿ ಕಟ್ಟು ಹಾಕುವುದು.
8. ಮೇವು ತಿನ್ನಲಿಕ್ಕೆ: ಸರಳ ಅಜೀರ್ಣತೆಯಿಂದ ದನಗಳು ಬಳಲುತ್ತಿದ್ದರೆ, ಖಿನ್ನತೆ, ಮೇವು ತಿನ್ನದಿರುವುದು, ಮೆಲುಕು ಹಾಕದಿರುವುದು, ಇಂತಹ ಲಕ್ಷಣಗಳು ಕಂಡು ಬರುತ್ತವೆ. ಆಗ ಒಣಮೆಣಸಿನಕಾಯಿ ಮತ್ತು ಬಿಳಿ ಈರುಳ್ಳಿ ರುಬ್ಬಿ ತಿನ್ನಿಸಬೇಕು.
9. ಜ್ವರ ಬಂದಾಗ: ತುಂಬೆ ಸೊಪ್ಪು, ಬೆಳ್ಳುಳ್ಳಿ, ಮೆಣಸು, ರುಬ್ಬಿ ತಿನ್ನಿಸಬೇಕು.
10. ಹಾಲು ಕರೆಯದೆ ಇದ್ದಾಗ: ಈಶ್ವರಿ ಬಳ್ಳಿಯನ್ನು ಮಜ್ಜಿಗೆಯಲ್ಲಿ ರುಬ್ಬಿ ಕರುವಿಗೆ ಹಚ್ಚಿ ನೆಕ್ಕಿಸಿ, ದತ್ತೂರಿಯ ಎರಡು ಎಳೆಯದಾದ ಕಾಯಿಗಳನ್ನು ತಿನ್ನಿಸುವುದರಿಂದ ಕರೆಯದೆ ಇದ್ದ ಆಕಳು ಅಥವಾ ಎಮ್ಮೆ ಹಾಲು ಕರೆಯಲು ಆರಂಭಿಸುತ್ತವೆ.

ಧಾರವಾಡದ ಎತ್ತಿನ ಗುಡ್ಡದ ಶ್ರೀಕಾಂತ್ ತಮ್ಮ ನಾಟಿ ವಿಧಾನಗಳ ಬುತ್ತಿಯನ್ನು ಹೀಗೆ ಬಿಚ್ಚಿಟ್ಟರು.

1. ಕಾಲುಬಾಯಿ ಜ್ವರ: ಈ ಖಾಯಿಲೆಯಲ್ಲಿ ಕಾಲಿನಲ್ಲಿ ಮತ್ತು ಬಾಯಿಯಲ್ಲಿ ಗಾಯಗಳಾಗುತ್ತವೆ. ಆಗ ಸುಡುವ ಉಸುಕಿನಲ್ಲಿ ದನಗಳನ್ನು ನಿಲ್ಲಿಸಿ, ಮಣ್ಣು ಏರಿಸುತ್ತಿದ್ದೆವು. ಈ ಸುಡುವ ಮರಳಿನ ಬಿಸಿಗೆ ಆ ಖಾಯಿಲೆ ಬರಿಸುವ ರೋಗ ಕ್ರಿಮಿಗಳು ಸತ್ತುಹೋಗುತ್ತವೆ. ಆದೇ ಗಾಯಕ್ಕೆ ಹುಳ ಬಿದ್ದರೆ ಚೆಂಡು ಹೂವಿನ ಸೊಪ್ಪು, ರಾಗಿ ಹಿಟ್ಟು, ಚಿಮಣಿ ಎಣ್ಣೆ ಮಿಶ್ರ ಮಾಡಿ ಕಟ್ಟುತ್ತಿದ್ದೆವು. ಬಾಯಿ ಬೇನೆ ಆಗಿ ಬಾಯಿಯಲ್ಲಿ ಗಾಯಗಳಾದರೆ, ಬಾಯಿ ತೊಳೆದು ಕೊತ್ತಂಬರಿ, ಮೆಂತೆ ಸೊಪ್ಪು ತಿನ್ನಿಸುತ್ತಿದ್ದೆವು.
2. ಹೊಟ್ಟೆ ಉಬ್ಬಿದರೆ: ಅಜೀರ್ಣತೆಯಿಂದಾಗಿ ಹೊಟ್ಟೆ ಉಬ್ಬುತ್ತದೆ. ಒಳ್ಳೆ ಎಳ್ಳು, ಮೆಣಸು, ವೀಳ್ಯದೆಲೆ, ಇವುಗಳನ್ನು ಕುಟ್ಟಿ ಪುಡಿಮಾಡಿ ಅದರ ರಸವನ್ನು ಗೊಟ್ಟದಲ್ಲಿ ಹಾಕಿ ಕುಡಿಸುತ್ತೇವೆ.
3. ಗಂಟಲು ಬೇನೆ, ಚಪ್ಪೆ ಬೇನೆ: ಚಪ್ಪೆ ಬೇನೆ ಆದರೆ ಹಿಂಗಾಲುಗಳ ಮಾಂಸ ಖಂಡಗಳು ಊದಿಕೊಳ್ಳುತ್ತವೆ. ಮುಟ್ಟಿದರೆ ಬುರಬುರ ಶಬ್ದ ಬರುತ್ತದೆ. ಆಗ ನಾವು ನರಕ್ಕೆ ಕಾದ ಕಬ್ಬಿಣದ ಸಲಾಖೆಯಿಂದ ಬರೆ ಕೊಡುತ್ತಿದ್ದೆವು.
4. ಹಿಂಡುವ ದನಗಳಿಗೆ ಕೆಚ್ಚಲು ಬೇನೆ: ಇದು ಆದಾಗ ಬಿಸಿ ನೀರಿನಲ್ಲಿ ಉಪ್ಪು ಬೆರೆಸಿ ಕೆಚ್ಚಲಿಗೆ ಉಜ್ಜುತ್ತೇವೆ. ಗಂಜಲ ಕಾಯಿಸಿ ಹೊಡೆಯುತ್ತೇವೆ.

ಮಂಡ್ಯ ಜಿಲ್ಲೆಯ ರೈತ ಗುರುಪ್ರಸಾದ್ ತಮ್ಮ ಅನುಭವವನ್ನು ಹೀಗೆ ಹಂಚಿಕೊಳ್ತಾರೆ.

1. ಹೆಗಲು ಬಾವು ಆದಾಗ ಹುರುಳಿಕಾಳನ್ನು ಚೆನ್ನಾಗಿ ಬಿಸಿ ಮಾಡಿ ಲೋಕಸಾರ (ಲೋಳೆ ಸರ)ದ ಲೋಳೆಯಲ್ಲಿ ಬಿಗಿಯಾಗಿ ಪಟ್ಟಿ ಹಾಕುವುದು.
2. ಕೆಚ್ಚಲು ಬಾವು: ಲೋಕಸಾರವನ್ನು ಕೆಚ್ಚಲಿಗೆ ಲೇಪಿಸುವುದು.
3. ರಕ್ತ ಮಿಶ್ರಿತ ಭೇದಿ ಮತ್ತು ಮೂಗಿನಲ್ಲಿ ರಕ್ತ ಸೋರುವುದು : "ಮುಟ್ಟಿದರೆ ಮುನಿ" ಸೊಪ್ಪನ್ನು ಅರೆದು ರಸವನ್ನು ತಿಳಿಮಜ್ಜಿಗೆಯಲ್ಲಿ ಕುಡಿಸುವುದು.
4. ಸತ್ತೆ ಬೀಳದಿರುವುದು : ಕರು ಹಾಕಿ ಒಂದು ದಿನವಾದರೂ ಸತ್ತೆ ಬೀಳದಿದ್ದರೆ ಬಿದಿರು ಸೊಪ್ಪು, ಕುಂಬಳಸೊಪ್ಪಿನ ಚಿಗುರು, ಬೆಲ್ಲ, ಎಳ್ಳು ಎಲ್ಲಾ ಒಟ್ಟಿಗೆ ಸೇರಿಸಿ ತಿನ್ನಿಸುವುದು.
5. ಗಾಯಗಳು: ಇದ್ದಿಲು ಪುಡಿ, ಹರಿಶಿನ ಪುಡಿಯನ್ನು ಲೇಪಿಸುವುದು.
6. ಕಣ್ಣಿನಲ್ಲಿ ನೀರು : ಅಡಿಗೆ ಉಪ್ಪಿನ ದ್ರಾವಣವನ್ನು ಮಾಡಿ ಬಾಯಿಂದ ಕಣ್ಣಿಗೆ ಉಗುಳುವುದು.
7. ಕೊಂಬು ಗಾಯ : ಕೋಳಿಮೊಟ್ಟೆ ಹಾಗು ಕೆಮ್ಮಣ್ಣು ಮಿಶ್ರಣವನ್ನು ಗಾಯಗೊಂಡ ಕೊಂಬಿಗೆ ಲೇಪಿಸಿ, ಬಟ್ಟೆ ಸುತ್ತುವುದು.
8. ಸೆಲೆ : ವೀಳ್ಯದ ಎಲೆ, ಮೆಣಸು, ಇಂಗು, ಕೋಳಿಮೊಟ್ಟೆ ಹಾಗು ತೆಂಗಿನಕಾಯಿ ಮಿಶ್ರಣವನ್ನು ತಿನ್ನಿಸುವುದು ಅಥವಾ ಬೇವಿನ ಸೊಪ್ಪು ಮತ್ತು ಲಕ್ಕಿ ಸೊಪ್ಪುಗಳನ್ನು ತಿನ್ನಿಸುವುದು.
9. ಅಜೀರ್ಣ: ಹಸಿಶುಂಠಿ, ಇಂಗು, ಎಣ್ಣೆ, ಬಜೆ ಮತ್ತು ದತ್ತೂರಿ ಗೆಡ್ಡೆಯನ್ನು ತಿನ್ನಲು ಕೊಡುವುದು.
10. ಹೇನು/ಉಣ್ಣೆ : ಸೀತಾಫಲದ ಸೊಪ್ಪನ್ನು ನುಣ್ಣಗೆ ಅರೆದು ಮೈಗೆಲ್ಲಾ ಲೇಪಿಸುವುದು ಅಥವಾ ತುಂಬೆರಸವನ್ನು ಲೇಪಿಸುವುದು.

ಚನ್ನಪಟ್ಟಣ ತಾಲ್ಲೂಕು ಅಕ್ಕೂರು ಅಂಚೆಯ ಎಸ್. ಎಂ. ದೊಡ್ಡಿಯ ಮರಿಗೌಡರು ತಮ್ಮ ದನಗಳಿಗೆ ಕೆಚ್ಚಲು ಬಾವು ಆಗಿ ಕೆಚ್ಚಲು ವಿಪರೀತ ಊದಿಕೊಂಡರೆ, ಅದರಿಂದಾಗಿ ದನಕ್ಕೆ ನೋವಾಗುವಂತಿದ್ದರೆ ಹರಶಿನದ ಪುಡಿಯನ್ನು ಅರಳೆಣ್ಣೆಯಲ್ಲಿ ಕಲಸಿ ದಿನಕ್ಕೆರಡು ಸಾರಿ ಕೆಚ್ಚಲಿಗೆ ಹಚ್ಚುತ್ತಾರೆ. ಆಗ ಬಿಗಿದುಕೊಂಡ ಕೆಚ್ಚಲು ಸಡಿಲಗೊಂಡಂತಾಗಿ ಅದರಿಂದ ಹಸು ನರಳುವುದು ತಪ್ಪುತ್ತದೆ ಎನ್ನುತ್ತಾರೆ.

ಆನೇಕಲ್ ತಾಲ್ಲೂಕಿನ ದೊಮ್ಮಸಂದ್ರದ ರತ್ನಮ್ಮ ಅವರ ಪಶುಪಾಲನೆಯ ಅನುಭವದಂತೆ ಕುಂದು ಬಂದರೆ ರಾಲಿ ಸೊಪ್ಪು (ಕಾಡಿನಲ್ಲಿ ತಂತಾನೆ ಬೆಳೆಯುತ್ತದೆ) ಮತ್ತು ಒಳ್ಳೆ ಎಳ್ಳಿನ ಕಡ್ಡಿಗಳ ಹೊಗೆ ಹಾಕಬಹುದು. ಇಲ್ಲವೇ ಆನೆ ಲದ್ದಿಯ ಹೊಗೆಯನ್ನು ಕೂಡ ಹಾಕಬಹುದು.

ಕುಂದು ಬಂದರೆ ಜಾನುವಾರುಗಳಿಗೆ ಉಸಿರು ಆಡುವುದೇ ಕಷ್ಟವಾಗಿ ಸದಾ

ಜೊಲ್ಲು ಸುರಿಸುತ್ತಿರುತ್ತವೆ. ಇದು ತುಂಬಾ ತ್ರಾಸದಾಯಕ ಖಾಯಿಲೆ. ಇದರ ತೀವ್ರತೆ ಎಷ್ಟಿರುತ್ತದೆ ಎಂದರೆ ಕುಂದಿನಿಂದ ನರಳುತ್ತಿರುವ ಜಾನುವಾರುಗಳು, ತನ್ನ ತಾಯಿ ಹಸು ತನ್ನನ್ನು ಗರ್ಭದಲ್ಲಿರುವಾಗಲೇ ಕಂದು ಹಾಕಿದ್ದಿದ್ದರೆ ಇಂದು ನಾನು ಈ ಖಾಯಿಲೆಯಿಂದ ನರಳುವ ಸಂದರ್ಭವೇ ಬರುತ್ತಿರಲಿಲ್ಲವೆಂದು ಯೋಚಿಸುತ್ತವೆ ಎಂಬ ನಂಬಿಕೆ ಪಶುಪಾಲನಾ ರೈತರದ್ದು.

ಕಾಲು ಬಾಯಿ ಜ್ವರ ಆದಾಗ ಬಾಯಿಯಲ್ಲಿ ಹುಣ್ಣುಗಳಾಗಿ ದನಗಳು ಮೇವು ಬಿಡುವುದರಿಂದ ನಾಟಿ ಕೋಳಿ ಮೊಟ್ಟೆಯನ್ನು ತಿನ್ನಿಸುವುದು, ಆಲೂಗಡ್ಡೆ, ಮೂಲಂಗಿ, ಬೆಲ್ಲ ರುಬ್ಬಿಕೊಂಡು ಕುಡಿಸುವುದು, ಗಡ್ಡೆ ಕರ್ಪೂರ ಬಾಳೆ ಹಣ್ಣಿನಲ್ಲಿ ತಿನ್ನಿಸುವುದು ಹಾಗೂ ಜೇನು ತುಪ್ಪವನ್ನು ನಾಲಿಗೆಗೆ ಉಜ್ಜುವುದು. ಇದರಿಂದ ಜಾನುವಾರುಗಳಿಗೆ ಶಕ್ತಿ ತುಂಬಿದಂತಾಗುವುದರ ಜತೆಗೆ ಗಾಯಗಳು ವಾಸಿಯಾಗಲು ಅನುಕೂಲಕರ ವಾತಾವರಣ ಸೃಷ್ಟಿಸಿದಂತಾಗುತ್ತದೆ.

ಕಾಲುಬಾಯಿ ಜ್ವರದಲ್ಲಿ ಕಾಲಿಗೆ ಗಾಯ ಆಗಿ ಹುಳ ಬಿದ್ದರೆ ಹೊಂಗೆ ಎಣ್ಣೆ ಜತೆಗೆ ನುಸಿ ಉಂಡೆಯನ್ನು ಕಲಸಿಕೊಂಡು ಕೋಳಿಯ ರೆಕ್ಕೆಯಲ್ಲಿ ಅದ್ದಿಕೊಂಡು ಗಾಯಕ್ಕೆ ನವುರಾಗಿ ಲೇಪಿಸುವುದು. ಇದರಿಂದ ಬಿದ್ದಿರುವ ಹುಳಗಳು ಸಾಯುತ್ತವೆ.


ಹೊಟ್ಟೆ ಊದಿಕೊಂಡರೆ ಬೆಲ್ಲ, ಈರುಳ್ಳಿ ಮತ್ತು ನುಗ್ಗೆ ಚಕ್ಕೆಯನ್ನು ಅರೆದು ಕುಡಿಸುವುದು. ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಕೊಬ್ಬರಿಯನ್ನು ರುಬ್ಬಿ ಕುಡಿಸುವುದು. ಇದರಿಂದ ಹಾಲಿನಲ್ಲಿ ಕೊಬ್ಬಿನಾಂಶವನ್ನು ಕಾಪಾಡಿಕೊಂಡಂತಾಗುತ್ತದೆ. ಹೆಸರು ಬೇಳೆಯನ್ನು ರುಬ್ಬಿ ತಿನ್ನಿಸಬಹುದು. ಸೋರೆಕಾಯಿ ಬೇಯಿಸಿ ತಿನ್ನಿಸಿದರೆ ಹಾಲು ಉತ್ಪಾದನೆಗೆ ಪೂರಕ ಅಂಶಗಳು ಒದಗಿ ಅಧಿಕ ಹಾಲು ಉತ್ಪಾದನೆಗೆ ಸಹಾಯಕವಾಗುತ್ತದೆ. ಬಾಣಂತಿ ಹೆಂಗಸರೂ ಕೂಡ ಇದೇ ಕಾರಣಕ್ಕೆ ಸೋರೆಕಾಯಿ ಸಾರನ್ನು ಹೆಚ್ಚಾಗಿ ಬಳಸುತ್ತಾರೆ.

ಶಿರಸಿ ತಾಲ್ಲೂಕು ಶೀಗೆಹಳ್ಳಿ ಗ್ರಾಮದ ಗೀತೆಮನೆಯ ಶ್ರೀಕಾಂತ್ ಹೆಗಡೆಯವರು ತಮ್ಮ ಆಕಳುಗಳು ಹಾಗೂ ಎಮ್ಮೆಗಳು ಕಾಲಕಾಲಕ್ಕೆ ಸರಿಯಾಗಿ ಬೆದೆಗೆ ಬಾರದಿದ್ದರೆ, ಅಥವಾ ಬೆದೆಗೆ ಬಂದರೂ ಬೆದೆಯ ಚಿಹ್ನೆಗಳನ್ನು ಸರಿಯಾಗಿ ತೋರಿಸದ್ದರೆ ಕೂಮನ ಗೆಡ್ಡೆ, ಶಿಂಡ್ಲೆ ಕಾಯಿ (ಬುಡುಮ ಕಾಯಿ) ಮತ್ತು ವೆನಿಲ್ಲಾ ಬಳ್ಳಿಯನ್ನು ತಿನ್ನಿಸುತ್ತಾರೆ. ಆಗ ಕಾಲ ಕಾಲಕ್ಕೆ ಆಕಳು ಹಾಗೂ ಎಮ್ಮೆಗಳು ಬೆದೆಗೆ ಬರುತ್ತವೆ. ಬೆದೆಯ ಲಕ್ಷಣಗಳನ್ನು ಗುರುತಿಸಿಕೊಳ್ಳುವುದೂ ಸುಲಭವಾಗುತ್ತದೆ ಎನ್ನುತ್ತಾರೆ.

ಹಾಗೆಯೇ, ಶ್ರೀಕಾಂತ್ ಹೆಗಡೆಯವರು ಕಂಡುಕೊಂಡ ಇತರೆ ನಾಟಿ ಪಶುಚಿಕಿತ್ಸಾ ವಿಧಾನಗಳ ಸರಮಾಲೆಯೇ ಇದೆ. ಜ್ವರ ಬಂದಾಗ ಅಮೃತ ಬಳ್ಳಿಯ ಕಷಾಯ ಮಾಡಿ ಕುಡಿಸಿ ಉಪಶಮನ ಕಂಡುಕೊಂಡಿದ್ದಾರೆ. ಜಂತು ಹುಳುಗಳ ಬಾಧೆಯಾದಾಗ

ಚಹಾ ಮಾಡಿ ಉಳಿದ ಶೇಷವಸ್ತು (ಕೊನೆಗೆ ಉಳಿದ ಚಹಾ ಪುಡಿ) ಮತ್ತು ನಿಂಬೆಹುಳಿ ಬೆರಸಿ ಕುಡಿಸಿ, ಜಂತು ಹುಳುಗಳ ಬಾದೆಯಿಂದ ದನಕರುಗಳನ್ನು ಮುಕ್ತಗೊಳಿಸಿದ್ದಾರೆ. ಕರುಗಳ ಬಾಯಿ ಸುತ್ತಲೂ ಮತ್ತು ಕಾಲುಗಳ ಮೇಲೆ ಕೂದಲು ಉದುರುವುದನ್ನು ಇವರು ಚವಿ ಎಂದು ಕರೆದುಕೊಂಡಿದ್ದಾರೆ. ಹೀಗಾದಾಗ, ಬಿಲ್ವ ಪತ್ರೆ ಸೊಪ್ಪನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಕುಡಿಸಿ ಕೂದಲು ಉದುರುವುದನ್ನು ಕಡಿಮೆ ಮಾಡಿಕೊಂಡಿದ್ದಾರೆ. ನಾಲಗೆಗೆ ಕಪ್ಪೆ ರೋಗವಾದಾಗ (ನಾಗೇರು ಅಂತಲೂ ಕರೆಯುತ್ತಾರೆ) ನಾಲಗೆಗೆ ಉಪ್ಪು ಮತ್ತು ಉಪ್ಪಿನಕಾಯಿಯನ್ನು ತಿಕ್ಕುವುದರಿಂದ ನರಗಳು ಸಕ್ರಿಯವಾಗಿ ಕಾರ್ಯ ನಿರ್ವಹಿಸಿ ಸಮಸ್ಯೆ ಬಗೆಹರಿಯುತ್ತದೆ ಎನ್ನುತ್ತಾರೆ. ಆಕಳುಗಳಲ್ಲಿ ಗರ್ಭ ಕೋಶ ಹೊರಬಂದರೆ ಮುಟ್ಟಿದರೆ ಮುನಿ ಸೊಪ್ಪನ್ನು ತಿನ್ನಿಸುವುದರಿಂದ ರಕ್ತ ಸ್ರಾವ ಕಮ್ಮಿಯಾಗುತ್ತದೆ. ಆಗ, ಮಂಜು ಗಡ್ಡೆಯ ನೀರಿನಲ್ಲಿ ಉಪ್ಪು ಬೆರಸಿ ಗರ್ಭಕೋಶಕ್ಕೆ ಸವರಿದರೆ ಗರ್ಭಕೋಶದ ಗಾತ್ರ ಕಮ್ಮಿಯಾಗುವುದರಿಂದ ಅದನ್ನು ಮೊದಲಿನ ಜಾಗಕ್ಕೆ ಒಳ ನೂಕಲು ಸಹಕಾರಿಯಾಗುತ್ತದೆ. ದನಗಳು ಜಗಳವಾಡಿ ಕೋಡು ಮುರಿದುಕೊಂಡರೆ, ರೋಷಾವೇಷದಿಂದ ನೆಲಕ್ಕೆ ತಲೆಯುಜ್ಜಿ ಕೋಡು ಮುರಿದುಕೊಂಡರೆ, ಹುತ್ತದೊಳಕ್ಕೆ ಕೊಂಬು ಸೇರಿಸಿ ಅದನ್ನು ಮೀಟಲು ಹೋಗಿ ಕೊಂಬು ಮುರಿದುಕೊಂಡರೆ ಹೊನ್ನೆ ಮರದ ಮೇಣವನ್ನು (ಮರದ ತೊಗಟೆ ತೆಗೆದರೆ ರಕ್ತದ ರೀತಿಯಲ್ಲಿಯೇ ಸುರಿಯುವ ಕೆಂಪು ಮೇಣ) ಹಚ್ಚಿದಾಗ ರಕ್ತಸ್ರಾವ ನಿಲ್ಲುತ್ತದೆ.

ಕೋಲಾರ ತಾಲ್ಲೂಕಿನ ತ್ಯಾವನಹಳ್ಳಿಯ ಕೃಷ್ಣಪ್ಪನೋರು ಸಾಕಿಕೊಂಡಿದ್ದ ಐನಾತಿ ಹೋರಿಗೆ ದಿನಕ್ಕೆ ನಾಲ್ಕರಿಂದ ಐದು ಹಸಿ ಕೋಳಿ ಮೊಟ್ಟೆಗಳನ್ನು ಕುಡಿಸುತ್ತಿದ್ದರು. ಮೊಟ್ಟೆಯ ಹಳದಿ ಭಂಡಾರವು ಹೋರಿಯು ಇನ್ನೊಂದಿಷ್ಟು ಕೊಬ್ಬಲು ಸಹಕಾರಿ ಎಂಬುದು ಇದರ ಹಿಂದಿರುವ ಪೋಷಕಾಂಶದ ತರ್ಕ. ಇದೇ ಊರಿನಲ್ಲಿ ಗ್ರಾಮಸ್ಥರೆಲ್ಲಾ ಸೇರಿ, ಜನವರಿಯಿಂದ ಮಾರ್ಚ್ ತಿಂಗಳವರೆಗೆ ಕಾಣಿಸಿಕೊಳ್ಳುವ ಕಾಲು ಬಾಯಿ ಜ್ವರಕ್ಕೆ ತಮ್ಮದೇ ಆದ ಉಪಾಯವನ್ನು ಕಂಡುಕೊಂಡಿದ್ದಾರೆ. ಸುತ್ತಮುತ್ತಲ ಗ್ರಾಮಗಳಲ್ಲಿ ಜಾನುವಾರುಗಳಿಗೆ ಕಾಲು ಬಾಯಿ ಜ್ವರ ಬಂದಿದೆಯೆಂಬ ಸುದ್ದಿ ಹರಡುತ್ತಿದ್ದಂತೆ ಊರ ಬಾಗಿಲ ದಾರಿಯಲ್ಲಿ, ದಾರಿಯಗಲಕ್ಕೂ ಅಗೆದು ಕೆಸರು ಪಾತಿ ಮಾಡಿ ಅದರಲ್ಲಿ ಹತ್ತಾರು ಕಿಲೋ ಗ್ರಾಂಗಳಷ್ಟು ಅಡಿಗೆ ಸೋಡಾ ಬೆರಸಿ ದಿನಾ ಬೆಳಿಗ್ಗೆ ಮತ್ತು ಸಂಜೆ ದನಗಳನ್ನು ಅದರಲ್ಲಿ ನಡೆಸುತ್ತಾರೆ. ಅಡಿಗೆ ಸೋಡಾ ಒಂದು ಕ್ಷಾರೀಯ ವಸ್ತುವಾಗಿರುವುದರಿಂದ ಆಂತಹ ವಾತಾವರಣದಲ್ಲಿ ಸೋಂಕು ತಗುಲಿದ್ದರೂ ಕಾಲು ಬಾಯಿ ಜ್ವರದ ವೈರಾಣುಗಳು ಬದುಕಿ ಉಳಿಯುವುದಿಲ್ಲ. ಇದರಿಂದ ಕಾಲು ಬಾಯಿ ಜ್ವರದ ಸೋಂಕನ್ನು ಸಾಧ್ಯವಾದಷ್ಟು ಮಟ್ಟಿಗೆ ಹತೋಟಿಯಲ್ಲಿಡಬಹುದಾಗಿದೆ. ಊರ ಬಾಗಿಲಲ್ಲೇ ಕೆಸರು ಪಾತಿ ಮಾಡುವುದರಿಂದ ಮೇಯಲು ಹೊರಟ ಎಲ್ಲಾ ದನಗಳು ಅಲ್ಲಿಯೇ ಹಾದು ಹೋಗಬೇಕಾಗುತ್ತದೆ. ❑



ಅಧ್ಯಾಯ – 10

ಸಂದರ್ಶನ–1

ಅನುಭವೀ ರಾಮಯ್ಯನ ಪಶುಪಾಲನಾ ಪರಿಚಯ

ಪಾರಂಪರಿಕ ಕೊಂಡಿಯ ಅನುಭವೀ ವ್ಯಕ್ತಿಯಂತೆ ಕಂಡುಬಂದ ಬೆಂಗಳೂರು ಉತ್ತರ ತಾಲ್ಲೂಕಿನ ಹೊನ್ನೇನಹಳ್ಳಿಯ ರೈತ ಎಂ. ರಾಮಯ್ಯ, ಬೆಂಗಳೂರು ದೊಡ್ಡಬಳ್ಳಾಪುರ ರಸ್ತೆಯ ಅವರ ಊರಿನ ಬಸ್ ಸ್ಟಾಂಡಿನಲ್ಲಿ ಮಕ್ಕಳನ್ನು ತರಕಾರಿ ಮಾರುಕಟ್ಟೆಗೆ ತರಕಾರಿ ಮೂಟೆಯೊಂದಿಗೆ ಕಳಿಸಿಕೊಡಲು ಬಸ್ಸಿಗೆ ಕಾಯುತ್ತಾ ಕುಳಿತಿದ್ದರು. ಅವರೊಂದಿಗೆ ಒಂದು ಪ್ರಶ್ನೋತ್ತರ.

ಪ್ರಶ್ನೆ : ರಾಮಯ್ಯನವರೇ, ಈಗೀಗ ಬದುಕುವ ಕ್ರಮವೇ ಬದಲಾಗಿದೆ, ಅಲ್ಲವೇ?

ಉ : ಈವಾಗ ಹುಟ್ಟಿರೋ ಹುಡುಗರು ವ್ಯವಸಾಯ ಮಾಡಲ್ಲ. ಅವರಿಗೆ ಟ್ರಾಕ್ಟರೇ ಬೇಕು. ಒಬ್ಬರು ದುಡಿದು ಹತ್ತು ಜನರನ್ನ ಸಾಕ್ತಾ ಇದ್ವು, ಈವಾಗ ಹತ್ತು ಜನ ದುಡಿದ್ರೂ ಸಾಕಾಕೆ ಆಗಲ್ಲ. ಖರ್ಚು ಜಾಸ್ತಿ. ಮೊದಲು ಮದುವೆಗೆ ಹೋಗಬೇಕು ಅಂದ್ರೆ ಒಬ್ಬರು ಹೋದ್ರೆ ಸಾಕು. ಈಗ ಎಲ್ಲಾ ಹೋಗ್ಬೇಕು. ಅದಕ್ಕೆ ಹೆಚ್ಚು ಖರ್ಚು. ಕೆಲವರು ಸ್ಕೂಟರು, ಬೈಕು ಇಟ್ಕತಾರೆ. ಕೆಲವರು ಇಂತಹ ಓಡಾಟಕ್ಕೆ ಕಾರು ಇಟ್ಕತಾರೆ.

ಪ್ರ : ದನ ಕಟ್ಟೋದು ಕಮ್ಮಿ ಆಗಿದೆ, ಅಲ್ಲವೇ?

ಉ : ದನ ಕಟ್ಟದೇ ಇರೋದರಿಂದ ಕೊಟ್ಟಿಗೆ ಗೊಬ್ಬರ ಸಿಗೋದು ಕಮ್ಮಿ. ಸೀಮೆ ಗೊಬ್ಬರ ಕೊಳ್ಳಬೇಕು. ಬೇಸಾಯಕ್ಕೆ ಇದರಿಂದ ಖರ್ಚು ಜಾಸ್ತಿ. ನಮ್ಮ ನಾಡ ದನ ಕಟ್ಟೋದು ಬಿಟ್ಟು ಸೀಮೆ ಹಸುಗಳು ಸಾಕ್ತಾ ಇದ್ದೀವಿ. ನಾಲ್ಕು ಹಸು ಇವೆ. ಐದು ಲೀಟರ್ ಹಾಲು ಕೊಡ್ತವೆ. ಹಸುಗಳಿಗೆ ಮೇವು ಕಮ್ಮಿ. ಇದರಲ್ಲಿ ಎರಡು ಹಸು ಕರೆಯುತ್ತಾ ಇವೆ.

ಪ್ರ : ನಾಡ ದನ ಅಂದಿರಿ, ನೀವು ಸಾಕ್ತಾ ಇದ್ದ ಆ ತಳಿಗಳು ಯಾವುವು?

ಉ : ನಾಟಿ ಹಸುಗಳು ಅಂದರೆ ಹಳ್ಳಿಕಾರ್. ಇದರ ಬಣ್ಣ, ಕರೇಬಣ್ಣ, ಬಿಳಿಬಣ್ಣ.

ನಾಟಿ ಔಷಧಿ ನಾವೇ ಕೊಡ್ತಾ ಇದ್ವಿ, ಈಗಿರೋ ಹಸುಗಳಿಗೆ ನಾಟಿ ಔಷಧಿ ಕೆಲಸ ಮಾಡಲ್ಲ. ಡಾಕ್ಟರುಗಳೇ ಬೇಕು.

ಪ್ರ : ನೀವು ಎಷ್ಟು ದನ ಸಾಕಿದ್ರಿ?

ಉ : ಸುಮಾರು 60 ಹಸು ಇತ್ತು. 1958 ರಿಂದ 62ನೇ ಇಸವಿಯಲ್ಲಿ. ಆವಾಗ ಬೇರೆ ಹೋದೆವು. ಒಂದೇ ಕುಟುಂಬ. 180 ಜನ ಇದ್ವಿ, ಅಣ್ಣ ತಮ್ಮಂದಿರು ನಾಲ್ಕು ಜನ, ಬಾಮ್ಮೈದ ಇಬ್ಬರು. ಕೂಡ ಇದ್ದೆವು. ಎಮ್ಮೆಗಳು ಒಂದು 20 ಇದ್ದವು. ಮೇಕೆ 100. ಕುರಿ 100.

ಇವಾಗ ನಾಲ್ಕು ಸೀಮೆ ಹಸು ಅಷ್ಟೆ ಟ್ರಾಕ್ಟರ್ ಸೆಕೆಂಡ್ ಹ್ಯಾಂಡ್ ತಗಂಡಿದ್ದೇವೆ. 500 ರೂಪಾಯಿ ಇದೆ ಒಂದು ಎಕರೆಗೆ ಉಳಲು. ನೆಂಟರಾದರೆ ಡೀಸಲ್ ಹಾಕಿಸಿದ್ರೆ ಸಾಕು. ಉತ್ತು ಕೊಡ್ತೀವಿ, ನಮ್ಮವರೇ ಡ್ರೈವರ್.

ಪ್ರ : ನೀವೇ ಯಾವ್ಯಾವ ಕಾಯಿಲೆಗೆ ಯಾವ್ಯಾವ ಔಷಧಿ ಕೊಡ್ತಾ ಇದ್ದಿರಿ?

ಉ : ಕುಂದು ರೋಗಕ್ಕೆ–ಆನೆಲದ್ದಿ. ಇದನ್ನು ಕಾಡಲ್ಲಿ ಹುಡುಕಿಕೊಂಡು ಹೋಗ್ತಾ ಇದ್ವಿ, ದೂರದಿಂದ ಯಾರಿಗಾದ್ರೂ ಹೇಳಿ ತರಿಸಿಕೊಳ್ತಾ ಇದ್ವಿ, ಆನೆಲದ್ದಿ ಮತ್ತು ಭಂಗಿಸೊಪ್ಪು ಹಾಕಿ ರಸ ಮಾಡಿ ಕುಡಿಸ್ತಾ ಇದ್ವಿ, ಆವಾಗ ಜಪ್ಪಂತ ಹಿಡಕೊಂಡು ಬಿಡ್ತಾ ಇತ್ತು. ಖಾಯಿಲೆ ಮಂಗಮಾಯ ಆಗ್ತಿತ್ತು.

ಗೊರಸಲು (ಕಾಲುಬಾಯಿ ಜ್ವರ) ಆದರೆ ವಾರ್ಜಿಪ್ ಸೊಪ್ಪು, ಹೊಗೆ ಸೊಪ್ಪಿಗೆ ಕರ್ಪೂರ ರಸ ಸೇರಿಸಿ, ಆ ಸೊಪ್ಪುಗಳನ್ನು ಗಾಯದ ಮೇಲೆ ಹಾಕಿ, ಬಟ್ಟೆ ಕಟ್ಟಿದರೆ ಹುಳ ಬಿದ್ದಿದ್ದರೆ ಹೋಗಿ ಬಿಡ್ತಾ ಇದ್ವು, ಗಾಯ ವಾಸಿ ಆಗ್ತಾ ಇತ್ತು.

ಹೊಟ್ಟೆ ಉಬ್ಬರ ಆಗಿದ್ದಾಗ ಚಿತ್ರ ಮೂಲಿಕಾ ಸೊಪ್ಪು ತಂದು ಕುಟ್ಟಿ ರಸ ಕುಡಿಸ್ತಾ ಇದ್ವು, ಜಪ್ಪಂತ ನಿಂತುಹೋಗ್ತಾ ಇತ್ತು. ಆಡು ಮುಟ್ಟದ ಸೊಪ್ಪು (ಗೊಡ್ಡು ಮುಟ್ಟದ ಸೊಪ್ಪು) ಇದೆಯಲ್ಲಾ, ಅದು ಕೂಡ, ಹೊಟ್ಟೆ ಉಬ್ಬರಕ್ಕೆ ಒಳ್ಳೇದು. ಆ ಸೊಪ್ಪಿನ ರಸಕ್ಕೆ ಮೆಣಸು, ಜೀರಿಗೆ, ಬೆಳ್ಳುಳ್ಳಿ ಸೇರಿಸಿ ತಿನ್ನಿಸಬೇಕು.

ಜೋಳದ ಚಿಗುರು ತಿಂದರೆ ಸೊಕ್ಕು ಆಗುತ್ತೆ, ಆವಾಗ ಸುಣ್ಣದ ನೀರು ಮತ್ತು ಬೆಲ್ಲ ಮತ್ತು ಜೀರಿಗೆ, ಬೆಳ್ಳುಳ್ಳಿ ಕುಟ್ಟಿ ಎರಡು ಗೊಟ್ಟ ಕುಡಿಸಬೇಕು.

ಸುಗುದೊಮ್ಮೆ ಆಗುತ್ತಲ್ಲಾ, ಕಬ್ಬಿಣದ ಚೂರುಗೀರು ಮೇವು ಜತೆಗೆ ನುಂಗಿಬಿಟ್ಟರೆ, ಅದು ಹೊಟ್ಟಗೆ ಹೋಗಿ ಹೃದಯಕ್ಕೆ ಚುಚ್ಚಿ, ದಪ್ಪ ಆಗಿ, ಗಂಟಲಿಗೆ ಆತುಕೊಂಡು ಬಿಡುತ್ತದೆ. ಉಸಿರು ನಿಂತುಹೋಗುತ್ತೆ. ಬಿಸಿನೀರು

ಮತ್ತು ಭತ್ತ (ಒಂದು ಪಾವು, ಸುಮಾರು 200 ಗ್ರಾಂ) ಕುಡಿಸಿದರೆ ಅದು ಅಲ್ಲಿಗೆ ಹೋಗಿ ಒದೆಯುತ್ತದೆ. ಆವಾಗ ರವಷ್ಟು ಕಮ್ಮಿ ಬೀಳುತ್ತೆ. ಆವಾಗ ಉಸಿರಾಡುತ್ತೆ. ಇಲ್ಲಾಂದ್ರೆ ಹಾರ್ಟ್ ಅಟ್ಯಾಕ್ ಆದಂಗೆ ಆಗಿ ಸತ್ತು ಹೋಗಿ ಬಿಡ್ತವೆ.

ಸೆತ್ತೆ ಬೀಳದಿದ್ದಾಗ ಬಾಳೆಗೊನೆ ಸೂರ್ಯನ ಕಡೆ ತಿರುಗಿ ಇರಬೇಕು. ಎಲೆ ಕಿತ್ತರೆ, ಪಟ್ಟೆ ಬರುತ್ತೆ. ಅದನ್ನು ತಂದು ಮುಡ್ಡಿ ಮೇಲೆ ಕಟ್ಟಬೇಕು. ಐದಾರು ಹಸುಗೆ ಸೆತ್ತೆ ಬಿದ್ದಿದೆ.

ಪ್ರ : **ನೆರಡಿ ರೋಗ, ದೊಡ್ಡರೋಗ ಬಂದರೆ ಏನು ಮಾಡ್ತಾ ಇದ್ದಿರಿ?**

ಉ : ನೆರಡಿ ರೋಗ ಬಂದು ಸತ್ತರೆ ಗುಣಿ ಹೊಡೆದು ಹೂತು ಬಿಡುತ್ತೀವಿ. ನಾಯಿ ತಿನ್ನಕೂಡದು, ಬೇರೆ ದನ ಅಲ್ಲಿ ಓಡಾಡಕೂಡದು. ಆದ್ದರಿಂದ ಮುಚ್ಚಿಬಿಡ್ತೀವಿ.

ದೊಡ್ಡರೋಗಕ್ಕೆ ಗವರ್ನಮೆಂಟ್ ಔಷಧೀನೆ ಸರಿ. ನಾವೇನೂ ಮಾಡಕ್ಕಾಗಲ್ಲ.

ಪ್ರ : **ದನಗಳ ಖಾಯಿಲೆ ವಾಸಿ ಆಗಲಿ ಅಂಥ ದೀಪಗಳು ಮಾಡ್ತಾ ಇದ್ರಲ್ಲಾ, ಅದರ ಬಗ್ಗೆ ಹೇಳಿ?**

ಉ : ಸಫಲಾಂಭ ದೇವರು ತಂದು ದೀಪಗಳು ಮಾಡ್ತಾ ಇದ್ವಿ. ತಿಂಡ್ಲು ಊರಿನಿಂದ ಸಫಲಾಂಭ ದೇವ್ರನ್ನ ತರ್ತಾ ಇದ್ವಿ. ಇದ್ದಕ್ಕಿದ್ದಂತೆ ಹತ್ತೋ, ಹದಿನೈದೋ ದನ ಸತ್ತರೆ, ಹಿಂಗೆ ಮಾಡ್ತಾ ಇದ್ವಿ.

ಪ್ರ : **ಇದು ನಂಬಿಕೆ ಅಲ್ಲವೆ.**

ಉ : ಹೌದು.

ಪ್ರ : **ಮರದ ನೇಗಿಲನ್ನು ಹೇಗೆ ತಯಾರಿಸಿ ಕೊಳ್ತಾ ಇದ್ದಿರಿ?**

ಉ : ಮರದ ನೇಗಿಲಿಗೆ ಜಾಲಿ, ಹೊಂಗೆ, ಸರ್ವೆ, ನೀಲಗಿರಿ ಮರ ಬಳಸಿ ಮಾಡ್ತಾ ಇದ್ವಿ. ನೊಗ ಮಾಡಕ್ಕೆ ನೀರುವಂಜಿ (ನೀರು ನಕ್ಕಲಿ) ಮರ ಚಂದ, ಇದು ಹಗುರ. ನುಣುಪಾಗಿ ಇರುತ್ತೆ. ಕೊಂಡ ಮಾವು ಮರ ಎಲ್ಲಕ್ಕಿಂತ ಒಳ್ಳೇದು. ತಂಪು ಕೂಡ ಇದು.

ಪ್ರ : **ಕುಕ್ಕೆ ಯಾವಾಗ ಯಾವಾಗ ಹಾಕ್ತಾ ಇದ್ದಿರಿ?**

ಉ : ಕುಂಟೆ ಹಾಕುವಾಗ ಪೈರು ಮೇಯ್ತಾವೆ ಅಂತ. ಮೇಯಾಕ ಅಂತ ತಲೆ ಬಗ್ಗಿಸಿದ್ರೆ, ಕುಂಟೆ ಕಡುದು ಆಗುತ್ತೆ. ಕುಂಟೆ ಹಾಕಾಕ ಆಗಲ್ಲ. ಅದಕ್ಕೆ ಕುಕ್ಕೆ ಹಾಕ್ತಾ ಇದ್ವು.

ಪ್ರ : **ದನಗಳನ್ನು ಪಾಲಿಗೆ ಕೊಡ್ತಾ ಇದ್ರಲ್ಲಾ. ಯಾಕಾಗಿ?**

ಉ : ಪಾಲಿಗೆ ಕೊಡೋದು ಅಂದರೆ, ಒಂದು ಸೂಲು ಮೇಯಿಸುವವರಿಗೆ,

ಒಂದು ಸೂಲು ನಮ್ಮದು. ಅವರೂ ಚಂದಾಗಿ ಉದ್ಧಾರ ಆಗವರೆ. ಅವರೂ ಬದುಕಲಿ, ನಾವೂ ಬದುಕೋಣ ಅಂತ.

ಪ್ರ : **ಬೇಸಾಯ ಮಾಡೋವಾಗ ಏನೇನು ಪರಿಕರ ಬೇಕಾಗುತ್ತೆ. ಉದಾಹರಣೆಗೆ, ಪಟ್ಟಡಿ, ಮುಂತಾಗಿ.... ?**

ಉ : ಪಟ್ಟಡಿ (ಜೊತ್ತಿಗೆ), ಇದಕ್ಕೆ ಬೆಲ್ಟ್ ಪೇಟೆಯಿಂದ ತರಿಸ್ತಾ ಇದ್ವಿ, ಒಂದೊಂದು ಸಾರಿ ನಾವೇನೇ ಹೆಣೆದುಕೊಳ್ಳೇವಿ. ಇವು ಹತ್ತು – ಹದಿನೈದು ವರ್ಷ ಇರ್ತವೆ.

ಮೂಗುದಾರಕ್ಕೆ ಪೇಟೆಯಿಂದ ನೂಲು ತಂದೋ, ಇಲ್ಲಾಂದ್ರೆ ಕತ್ತಾಳೆ ಪಟ್ಟೆಯನ್ನ ನೀರಲ್ಲಿ 20 ದಿನ ಕುಲ್ಲೋದಕ್ಕೆ ಹಾಕಿ, ಬಟ್ಟೆ ಒಗೆದಂಗೆ ಒಗೆದು, ಒಣಗಿಸಿ, ಕತ್ತಾಳೆ ಹಗ್ಗ ಮಾಡಿಕೊಳ್ತಾ ಇದ್ವಿ, ಇದು ನೂಲಿಗಿಂತ ಒಳ್ಳೇದು.

ಎತ್ತಿನ ಗಾಡಿಗೆ ಘಂಟೆ ಕಟ್ಟೋದು, ಎತ್ತುಗಳಿಗೆ ಗಂಟೆ ಕಟ್ಟೋದು ಒಳ್ಳೇದು. ಜನರ ಟ್ರಾಫಿಕ್ ಇರೋವಾಗ ಪಕ್ಕಕ್ಕೆ ಹೋಗಲಿ ಅಂತಾ. ನಾವು ಹಾರ್ನ್ ಹೊಡೆದಂಗೆ ಅದು. ಕರುವಿಗೆ ಗೆಜ್ಜೆ ಕಟ್ಟೋದು, ಅದೊಂದು ಖುಷಿ. ಮಕ್ಕಳಿಗೆ ಬೊಂಬೆ ಕಟ್ಟಿದ್ದಂಗೆ.

ಬಿದಿರಲ್ಲಿ ಗೊಟ್ಟ ತಯಾರಿಸಿಕೊಳ್ತಾ ಇದ್ದೆವು. ಕುಕ್ಕೆ ಮಾರೋದಿಕ್ಕೆ ಹಳ್ಳಿಗಳ ಮೇಲೆ ಬರ್ತಾರೆ. ಎಂದೂ ಮಾಡದವರು ಕುಕ್ಕೆ ಮಾಡಿದ್ರೆ, ಪೋಲೀಸರು ಬೇಡಿ ಹಾಕಿದಂಗೆ ಇರುತ್ತೆ. ಮೊದಲ ಕಾಲದಿಂದ ಮಾಡಿದವರೇ, ಅವರಿಗೆ ಹತ್ತಿ ಬಂದಿರುತ್ತೆ. ಹಳೇ ಕಾಲದವರೇ ಅವನ್ನ ಮಾಡಿದ್ರೆ ಚಂದ. ಈಗನವರು ಕಲಿಯಲ್ಲ. ಖಾಯಷ್ ಬಿದ್ದು ಕಲಿತರೆ ಒಳ್ಳೇದು.

ಕೋಡು ಕಳಸ ಹಾಕೋದು ಒಂಥರಾ ಖಾಯಷ್‌ಗೆ. ಹಾಯದಿರಲಿ ಅಂಥಾನೂ ಕೂಡ ಹಾಕ್ತಾರೆ. ಕಂಚು, ಸಿಲವಾರದ ಕೋಡು ಕಳಸ ಮಾಮೂಲಿ. ಕಂಚಿನ ಕೋಡು ಕಳಸವನ್ನು ಒಂದಿಷ್ಟು ಹುಣಸೆಹಣ್ಣು, ಇಟ್ಟಿಗೆಪುಡಿ ಸೇರಿಸಿ, ಉಜ್ಜಿ ತೊಳೆದರೆ ಬಂಗಾರದಂಗೆ ಮಿರಮಿರ ಮಿಂಚುತ್ತೆ. ಅಂತಹ ದನಗಳನ್ನು ನೋಡೋದೆ ಒಂದು ಚಂದ.

ಕಾಲು ಬಂಧ ಹಾಕಿ ದ್ರಾಕ್ಷಿ ತೋಟದಲ್ಲಿ ಮೇಯುವಾಗ ಕೆಳಗೇ ಮೇಯಲಿ ಅಂತ ಬಿಡ್ತಿದ್ದೆವು. ಮೇಲಕ್ಕೆ ತಲೆ ಎತ್ತಿ ದ್ರಾಕ್ಷಿ ಬಳ್ಳಿ ತಿನ್ನದಿರಲಿ ಅಂತ.

ಪ್ರ : **ಜಗಳ ಗಂಟಿ ಮರ ಅಂದ್ರೆ ಹೆದರಿಕೆ ಯಾಕೆ?**


ಉ : ಜಗಳಗಂಟಿ ಮರಕ್ಕೆ ಮುಳ್ಳು ಇರುತ್ತೆ. ಅದರ ತೊಗಟೆ ಬಲಿತರೆ ಕೆಂಪಾಗಿರುತ್ತೆ. ಬೆಳ್ಳಗಿರುತ್ತೆ. ಮನೆಯೊಳಕ್ಕೆ ತರಲ್ಲ. ಊರಿನ ಒಳಕ್ಕೆ ತರಲ್ಲ. ಮನೆಯೊಳಗೆ

ಚೂರು - ಪಾರು ಇದ್ದರೆ ಯಾವಾಗಲೂ ಜಗಳ. ಇದು ಅನುಭವಕ್ಕೆ ಬಂದಿರೋದು.

ಪ್ರ : **ನಾಟಿ ವೈದ್ಯದ ವಿಚಾರದಲ್ಲಿ ಒಂದು ರೋಮಾಂಚಕ ಘಟನೆ ಹೇಳ್ತೀರಾ?**

ಉ : "ಒಂದು ಸಾರಿ ಒಂದು ಎತ್ತಿಗೆ ಗಂಜಲು ಹುಯ್ಯೋದಕ್ಕೆ ಆಗದೆ ಹೋಯ್ತು. ಮೂತ್ರ ದ್ವಾರದ ಹಿಂದೆ ಎಲ್ಲೋ ಒಳಗೆ ಕಲ್ಲು ಆಗಿ ನಾಳ ಕಟ್ಟಿಕೊಂಡು ಬಿಟ್ಟಿತ್ತೇನೋ? ಅಲ್ಲಿ ತಡವಿ ನೋಡಿದರೆ ದಪ್ಪಗೆ ಇತ್ತು. ಏನು ಮಾಡಿದ್ರೂ ವಾಸಿ ಮಾಡಕ್ಕೆ ಆಗಲಿಲ್ಲ. ಕೊನೆಗೆ ವೈಟ್‌ಫೀಲ್ಡ್‌ನಲ್ಲಿ ಒಬ್ಬ ನಾಟಿ ವೈದ್ಯ ಇದ್ದ. ನಾವು ಒಂದಷ್ಟು ಜನ ಹೋಗಿ ಅವನ್ನ ಕರ್ಕಂಡು ಬಂದಿವಿ. ಅವನು ಏನೋ ಒಂದು ಸೊಪ್ಪು ತಂದು ಕುಟ್ಟಿ ರಸ ಮಾಡಿ ಕುಡಿಸಿದ. ಆ ರಸಕ್ಕೆ ಏನು ಪವರ್ ಇತ್ತೋ ದಪ್ಪಗೆ ಇದ್ದುದ್ದು ಎಲ್ಲಾ ಊತ ಇಳಿದು ಹೋಯ್ತು. ಆದರೆ, ಗಂಜಲ ಅಟ್ಟಾಕೆ ಆ ಎತ್ತಿಗೆ ಸಾಧ್ಯ ಆಗಲಿಲ್ಲ. ಸತ್ತು ಹೋಯ್ತು. ಇನ್ನೂ ಮೊದ್ಲೇ ನಾಟಿ ವೈದ್ಯನನ್ನ ಕರ್ಕಂಡು ಬಂದಿದ್ರೆ ವಾಸಿ ಮಾಡ್ತಿದ್ದ ಅನ್ನಿಸ್ತು. ಏನ್ಮಾಡಾಕಾಗುತ್ತೆ? ಎತ್ತಿನ ಟೈಮು ಮೀರಿ ಹೋಗಿತ್ತು. ಅದೇನು ಸೊಪ್ಪು ಬಳಸಿದೆ ಅಂತ ಕೇಳಿದ್ರೆ ಹೇಳಲಿಲ್ಲ ಅವನು. ಅದು ಅವನ ವೈದಿಕದ ಗುಟ್ಟು ಇರಬೇಕು. ಜಾಸ್ತಿ ಜನ ವೈದಿಕರು ಗುಟ್ಟು ಬಿಟ್ಟುಕೊಡಲ್ಲ. ಹೆಂಗಾದ್ರೂ ಮಾಡಿ ತಿಳ್ಕಂಬೇಕು ಅಂತ ವೈಟ್ ಫೀಲ್ಡ್‌ಗೆ ತಿರುಗಾ ಹೋಗಿ ಅವನ್ನ ಮಾತಾಡಿಸ್ತಾ ಅವನು ನಾಟಿ ವೈದಿಕದ ಬಗ್ಗೆ ಬರೆದಿಟ್ಟಿದ್ದ ಪುಸ್ತಕಾನ ಅವನನ್ನ ಯಾಮಾರಿಸಿ ಎತ್ತಿಕೊಂಡು ಬರೋದಿಕ್ಕೆ ಪ್ರಯತ್ನ ಮಾಡಿದ್ವಿ. ನಮ್ಮ ಪ್ರಯತ್ನ ಸಫಲ ಆಗಲಿಲ್ಲ. ಆಮೇಲೆ ಅವನೂ ತೀರಿಕೊಂಡು ಬಿಟ್ಟ." ಎಂದು ರೋಚಕ ಚಿಕಿತ್ಸೆಯೊಂದಕ್ಕೆ ಏದುಸುರಿನ ವಿರಾಮ ಹಾಕುತ್ತಾ ನಾಟಿ ವೈದ್ಯದ ಬಗ್ಗೆ ಇದ್ದ ಕೂತೂಹಲವನ್ನು ಮೆಲುಕು ಹಾಕಿದರು ರಾಮಯ್ಯನವರು.

❑



ಸಂದರ್ಶನ - 2

ಹೋರಿ ನರಸಿಂಹಯ್ಯನವರ ದೇಸಿ ದನ ಸಾಕಣೆ

ಬೆಂಗಳೂರು ಉತ್ತರ ತಾಲ್ಲೂಕಿನ ಅರಕೆರೆ ಎಂಬ ಸುಮಾರು 50 ಮನೆಗಳ ಒಂದು ಕುಗ್ರಾಮದ ಒಬ್ಬ ದೊಡ್ಡ ರೈತ ನರಸಿಂಹಯ್ಯನಿಗೆ ಇರುವ ಹೆಸರು ಹೋರಿ ನರಸಿಂಹಯ್ಯ. ಇವರ ದನ ಸಾಕುವ ಕೌಶಲ್ಯ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಜಿಲ್ಲೆಗಳಲ್ಲೆಲ್ಲಾ ಹೆಸರುವಾಸಿಯಾಗಿದ್ದ ಕಾಲವೊಂದಿತ್ತು.

ದನಗಳ ಜಾತ್ರೆಯಲ್ಲಿ ಚಾಂಪಿಯನ್ ಬಹುಮಾನಗಳನ್ನು ಪಡೆದಿರುವ ಇವರು ರೇಡಿಯೋ ಕಾರ್ಯಕ್ರಮಗಳಲ್ಲೂ ಹಲವಾರು ಸಾರಿ ಮಾತನಾಡಿದ್ದಾರೆ. ಹಳೇತಲೆಮಾರಿನ ಇಂತಹ ವ್ಯಕ್ತಿಯ ದೇಸಿ ದನ ಸಾಕಣೆಯ ಕೌಶಲ್ಯವನ್ನು ದಾಖಲೆ ಮಾಡುವ ಪ್ರಯತ್ನವಾಗಿ ಹೋರಿ ನರಸಿಂಹಯ್ಯನವರನ್ನು ಮಾತಿಗೆಳೆಯಲಾಯಿತು.

ಪ್ರ : ತಾವು ಸಾಕುತ್ತಿದ್ದ ಹೋರಿಗಳಿಗೆ ಹಾಗು ಎತ್ತುಗಳಿಗೆ ಯಾವ ತರಹದ ಆಹಾರ ಕ್ರಮವನ್ನು ಅನುಸರಿಸುತ್ತಿದ್ದಿರಿ?

ಉ : ಹಸಿರುಮೇವು, ಒಣಮೇವು ಜೊತೆಗೆ ಹುಳಿ, ಹಾಲು, ಭತ್ತದ ಕ್ಯಾಸಕ್ಕಿ (ಕೆಂಪು ಪೊರೆ ಇರುವ ಅಕ್ಕಿ)ಯ ಜೊತೆಗೆ ಕೊಬ್ಬರಿ ಮತ್ತು ಬೆಲ್ಲ ಸೇರಿಸಿ ರುಬ್ಬಿ ಕೊಡುತ್ತೇವೆ.

ಪ್ರ : ನೀವು ಸಾಕುತ್ತಿದ್ದ ದನಗಳಿಗೆ ಬಂದಿದ್ದಂತಹ ಕಾಯಿಲೆಗಳು ಯಾವುವು?

ಉ : ಆ ಭಗವಂತನೇ ಕಾಪಾಡಿದನೋ ಏನೋ? ಅಂತಹ ಹೇಳಿಕೊಳ್ಳುವಂತಹ ಯಾವ ಕಾಯಿಲೆಗಳೂ ನಾನು ಸಾಕಿದ ಹೋರಿಗಳಿಗೆ, ಎತ್ತುಗಳಿಗೆ ಬರಲಿಲ್ಲ.

ಪ್ರ : ನಿಮ್ಮಲ್ಲಿ ಸದಾ ಎಷ್ಟು ಜೋಡಿ ಎತ್ತುಗಳಿರುತ್ತಿದ್ದವು?

ಉ : ನಾಲ್ಕು ಜೋಡಿ ಎತ್ತುಗಳು ಯಾವಾಗಲೂ ಇರುತ್ತಿತ್ತು. ನಮಗಿದ್ದ ಜಮೀನನ್ನು ಉತ್ತುಕೊಳ್ಳೋದಿಕ್ಕೆ ನಾಲ್ಕು ಜೋಡಿ ಬೇಕಾಗಿತ್ತು. ಎಲ್ಲಾ ಹಳ್ಳಿಕಾರ್ ಎತ್ತುಗಳೇ, ಇವು ಒಂಥರಾ ಸುಂದರ ದನಗಳು. ಇವುಗಳ ಬಣ್ಣ ಬಿಳಿ ಮೈಲು ಬಣ್ಣ,

ಅಂದರೆ ಬಿಳಿ ಮೋಡದಂತಹ ಬಣ್ಣ. ನೀಟು ಕೊಂಬು ಇರ್ತವೆ. ಇವುಗಳ ನಡಿಗೆ ಚಂದ. ಶರತ್ತು ಜಾಸ್ತಿ, ಕುತ್ತಿಗೆ ಉದ್ದ ಜಾಸ್ತಿ. ಇದೇ ತರ ಅಮೃತ್ ಮಹಲ್ ತಳಿ ಕೂಡ ಇದಾವೆ. ಅವುಗಳ ಬಣ್ಣ ಬಿಳಿ. ಅವಕ್ಕೂ ಶರತ್ತು ಜಾಸ್ತಿ.

ಹಳ್ಳೀಕಾರ್ ಎತ್ತುಗಳನ್ನು ನಾನು ಮೈಸೂರಿನಿಂದಾಚೆ ಇರುವ ಬೆಟ್ಟದಪುರ, ಅಲ್ಲಿಂದ ಕೊಂಡು ತರ್‍ತಾ ಇದ್ದೆ ಅಲ್ಲಿ ಅಪ್ಪಟ ಹಳ್ಳೀಕಾರ್ ದನ ಸಿಕ್ತಾ ಇತ್ತು.

ಅಲ್ಲಿ ಕೊಂಡು, ಅಲ್ಲಿಂದ ನಾಲ್ಕು ದಿನಗಳ ಕಾಲ ನಡೆದುಕೊಂಡು ದನಗಳನ್ನು ಸಾಗಿಸಿಕೊಂಡು ಬರ್‍ತಾ ಇದ್ದೆ. ಆಗ ಲಾರಿ, ಟೆಂಪೋ ಇವೆಲ್ಲಾ ಇರ್‍ಲಿಲ್ಲ. ಇದೆಲ್ಲಾ ಸುಮಾರು 1950ನೇ ಇಸವಿ ಸುಮಾರಿಗೆ.

ನಮ್ಮನೆಯಲ್ಲಿ ದೇಸಿ ಎಮ್ಮೆಗಳನ್ನೂ ಕೂಡ ಸಾಕಿದ್ದೆವು ಮನೆಗೆ ಬೇಕಾದ ಹಾಲು ಮೊಸರಿಗೆ ಅಂತ ಎಮ್ಮೆಗಳ ಸಾಕಣೆ ನಡೀತಾ ಇತ್ತು. ಒಳ್ಳೊಳ್ಳೆ ಕುರಿ, ಟಗರುಗಳೂ ಇದ್ದವು. ಬನ್ನೂರು ಕುರಿ ತಳೀನಾ ಸಾಕ್ತಾ ಇದ್ದೆ. ಮೇಕೆ ಸಾಕಲಿಲ್ಲ.

ಪ್ರ : **ದನ ಸಾಕೋರು ಒಂದು ಸ್ವಲ್ಪ ಸುಳಿಗಳ ಲೆಕ್ಕಾಚಾರ ಹಾಕ್ತಾರಲ್ಲಾ ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು?**

ಉ : ಮನೆಯಲ್ಲೇ ಹುಟ್ಟಿದ್ರೆ ಯಾವ್ಯಾವದೋ ಸುಳಿ ಇದ್ರೆ ಏನೂ ಮಾಡಕ್ಕಾಗಲ್ಲ, ನಡೆಯುತ್ತೆ. ಆದರೆ ಕೊಂಡು ತರಬೇಕಾದರೆ ಸ್ವಲ್ಪ ಲೆಕ್ಕಾಚಾರ ಹಾಕ್ತಾರೆ. ಇದರಲ್ಲಿ ಒಬ್ಬೊಬ್ಬರಿಗೆ ಒಂದೊಂದು ತರಹದ ಅನುಭವ ಆಗಿದೆ. ಹಿಂಗೇ ಆಗುತ್ತೆ ಅಂಥ ಹೇಳಕ್ಕೆ ಆಗಲ್ಲ. ಅದೆಲ್ಲಾ ಅವರವರ ಅನುಭವಕ್ಕೆ ಬಂದಿದ್ದು. ಕೆಲವರು ನಂಬ್ತಾರೆ, ಕೆಲವರು ನಂಬಲ್ಲ.

ಒಳ್ಳೇ ಸುಳಿಗಳೂ ಇರ್‍ತಾವೆ, ಕೆಟ್ಟ ಸುಳಿಗಳೂ ಇರ್‍ತಾವೆ.

ಪ್ರ : **ಯಾವ್ಯಾವ ತರಹದ ಸುಳಿ ಇದಾವೆ ವಿವರಣೆ ಹೇಳ್ತೀರಾ?**

ಉ : ಮುಖದ ಮೇಲೆ ಎರಡು ಸುಳಿ ಇದ್ದರೆ ಅದನ್ನು ಛತ್ರ ಸುಳಿ ಅಂತಾರೆ. ಮುಖದ ಮೇಲೆ ಮೂರು ಸುಳಿ ಇದ್ರೆ ಮುಕ್ಕಣ್ಣ ಸುಳಿ ಅಂತಾರೆ. ಬೆನ್ನಿನ ಮೇಲೆ ಎರಡು ಸುಳಿ ಇದ್ದರೆ ದಾವಣಿ ಸುಳಿ ಅಂತಾರೆ. ಕೀಲು ಪಕ್ಕದಲ್ಲಿ ಅರ್ಧ ಅಡಿಗಿಂತ ಒಳಪಟ್ಟಿದ್ದರೆ ಅದನ್ನ ಕೀಲು ಸುಳಿ ಅನ್ನುತ್ತೇವೆ. ಬಾಲದ ತುದಿಯಲ್ಲಿದ್ದರೆ ಅದನ್ನು ಪೊರಕೆ ಸುಳಿ ಅಂತಾರೆ. ಮುಂಗಾಲಲ್ಲಿ ಮೊಳಕಾಲಿಂದ ಕೆಳಭಾಗದಲ್ಲಿದ್ದರೆ ಸಂಕಾಲೆ ಸುಳಿ ಅಂತಾರೆ. ಕೊರಳಿನ ಪಕ್ಕ ಎರಡೂ ಕಡೆ ಸುಳಿ ಇದ್ದರೆ ಪಟ್ಟಡಿ ಸುಳಿ. ಕೊರಳಿನ ಎಡಭಾಗದಲ್ಲಿದ್ದರೆ ರೋಮ ಸುಳಿ, ಬಲಭಾಗದಲ್ಲಿ ಒಂದೇ ಕಡೆ ಇದ್ದರೆ ಅದು ಕಾಡು ಸುಳಿ.

ಗೋಪುರದ ತುದಿಯಲ್ಲಿ ಅಥವಾ ಪಕ್ಕದಲ್ಲಿ ಇದ್ದರೆ ಅದು ರಾಶಿ ಸುಳಿ ಅಂತಾರೆ. ರಾಶಿ ಸುಳಿ ಇದ್ದರೆ ಜನ ತುಂಬಾ ಇಷ್ಟ ಪಡ್ತಾರೆ. ಅದು ಅಭಿವೃದ್ಧಿ ಸಂಕೇತ ಇದ್ದಂಗೆ. ರಾಶಿ ಸುಳಿ ಇರೋ ದನಗಳು ಹೊಕ್ಕ ಮನೆ ಉದ್ಧಾರ ಆಗುತ್ತೆ ಅನ್ನೋ ನಂಬಿಕೆ. ನಾನು ಕೂಡ ರಾಶಿ ಸುಳಿ ದನಗಳನ್ನು ಕಟ್ಟಿದ್ದೇನೆ. ಕೆಟ್ಟ ಸುಳಿಗಳು ಅಂದರೆ ಛತ್ರದ ಸುಳಿ, ಪೊರಕೆ ಸುಳಿ, ಸಂಕಾಲೆ ಸುಳಿ.

ದೇಹದ ಮೇಲೆಲ್ಲಾ ಒಂದೇ ಒಂದು ಸುಳಿ ಇದ್ದರೆ ಆ ದನ ಕೂಡ ಅತ್ಯುತ್ತಮ ಸುಳಿ. ಮೋಟು ಬಗ್ಗರಿ ಸುಳಿ ಎಡಭಾಗದಲ್ಲಿದ್ರೆ ಅಂತ ದನಗಳನ್ನು ಬೇಡ ಅಂತಾರೆ.

ಪ್ರ : **ದನಗಳ ಹಬ್ಬಗಳ ಬಗ್ಗೆ ಒಂದು ಸ್ವಲ್ಪ ಹೇಳ್ತಿರಾ?**

ಉ : ಸಂಕ್ರಾಂತಿ ಹಬ್ಬ. ಈ ಹಬ್ಬದಲ್ಲಿ ದನಗಳ ಮೈ ತೊಳೆದು ಸಿಂಗಾರ ಮಾಡಿ ಊರ ಬೀದಿಯಲ್ಲಿ ಬೆಂಕಿ ಹಾಕಿ ಕಿಚ್ಚು ಹಾಯಿಸುವುದು. ಹಿಂಗೆ ಕಿಚ್ಚು ಹಾಯಿಸೋದ್ರಿಂದ ದನಗಳ ಹೊಟ್ಟೆ ತಳ ಬಾಗದಲ್ಲಿರೋ ಉಣ್ಣೆ ಚಿಗಟಗಳು ಹೋಗ್ತಾವೆ. ಅಂತ ಕೆಲವರು ಹೇಳ್ತಾರೆ ಆದ್ರೆ ಇದನ್ನು ನಾನು ಅಷ್ಟಾಗಿ ಒಪ್ಪೋದಿಲ್ಲ. ಯಾಕಂದ್ರೆ ಕಿವಿ ಹಿಂಭಾಗದಲ್ಲಿರೋ ಉಣ್ಣೆ ಅವೆಲ್ಲಾ ಅಂಗೇ ಇರ್ತಾವಲ್ಲಾ? ಆಮೇಲೆ ಅವೇ ಹಬ್ಬಿಕೊಳ್ತಾವಲ್ಲಾ?

ಪ್ರ : **ಒಳ್ಳೊಳ್ಳೆ ಹೋರಿಗಳನ್ನು, ಎತ್ತುಗಳನ್ನು ಸಾಕಿದ್ರಿಂದ ನಿಮಗೆ ಹಲವಾರು ಬಹುಮಾನ ಬಂದಿದೆ ಅಂತ ಕೇಳಿದ್ದೀನಿ.....?**

ಉ : ನಮ್ಮೂರಿಗೆ ಹತ್ರ ಇರೋ ಅಂತ ಘಾಟಿಸುಬ್ರಮಣ್ಯ ಜಾತ್ರೆಗೆ ನಾನು ಎಷ್ಟು ವರ್ಷ ಹೋಗಿದ್ದೆನೋ ಅಷ್ಟೂ ವರ್ಷ ನನಗೇ ಮೊದಲ ಬಹುಮಾನ, ಜೊತೆಗೆ ಚಾಂಪಿಯನ್ ಅನ್ನೋ ಬಹುಮಾನ ಕೂಡ ನನ್ನದೇ. ಸತತವಾಗಿ ಹದಿನೈದು ವರ್ಷ ಆ ಜಾತ್ರೇಲಿ ಬಹುಮಾನ ತೆಗಂಡಿದ್ದೆ.

1950 ರಿಂದ 60ರ ಸುಮಾರಿನಲ್ಲಿ ಘಾಟಿಸುಬ್ರಮಣ್ಯ ಜಾತ್ರೆಯಲ್ಲಿ ನನ್ನ ದನಗಳಿಗೆ ಪೆಂಡಾಲ್ ಹಾಕಿಸ್ತಾ ಇದ್ದೆ, ಎಲೆಕ್ಟ್ರಿಕ್ ಲೈಟೂ ಹಾಕಿಸ್ತಿದ್ದೆ. ನಾಲ್ಕು ಜೊತೆ ಜೋಡಿ ಎತ್ತುಗಳಿಗೆ ಈ ಬಾಬತ್ತಿಗೆ ಆ ಕಾಲದಲ್ಲೇ ಮೂರು ಸಾವಿರ ರೂಪಾಯಿ ಖರ್ಚು ಮಾಡಿಸ್ತಿದ್ದೆ. ಬೇರೆ ಯಾರೂ ಇಷ್ಟು ಖರ್ಚು ಮಾಡುತ್ತಿರಲಿಲ್ಲ. ಒಂದು ಸಾರಿ ಅಂತೂ ಬಹುಮಾನವನ್ನು ಮೈಸೂರು ಮಹಾರಾಜರು, ಜಯಚಾಮರಾಜೇಂದ್ರ ಒಡೆಯರ್ ಅವರು ಬಂದಿದ್ರು, ಅವರೇ ಕೊಟ್ರು, ಕೊಟ್ಟಮೇಲೆ ಭಾಷಣ ಮಾಡ್ತಾ ಹೇಳಿದ್ರು, ನರಸಿಂಹಯ್ಯನ ಮನೆ ದನಗಳು ರೈತನ ಮನೆ ದನಗಳ ತರ ಕಾಣ್ತಾ ಇಲ್ಲ ಅವು ರಾಜ

ಮನೆತನದ ದನಗಳ ತರಹ ಇವೆ. ಹಾಗಂತ ಹೊಗಳಿದ್ರು, ಅಲ್ಲಿಗೆ ಸಾರ್ಥಕ ಆಯ್ತು ನೋಡಿ ನಾನು ದನ ಸಾಕಿದ್ದು.

ಈಗ್ಲೂನೂ ಘಾಟಿಸುಬ್ರಮಣ್ಯದಲ್ಲಿ ಜಾತ್ರೆ ಸೇರುತ್ತೆ. ಆದ್ರೆ ಅದು ದೊಡ್ಡದಾಗಿರೋದಿಲ್ಲ. ನಾನೂ ಎತ್ತು ಕಟ್ಟೋದು ನಿಲ್ಸಿದ್ದೀನಿ, ವಯಸ್ಸಾಯ್ತು. ಈಗ 90 ವರ್ಷ. ನಾನು ಹುಟ್ಟಿದ್ದು 1918 ರಲ್ಲಿ. ಓದಿದ್ದು ನಾಲ್ಕನೇ ತರಗತಿ ಮಾತ್ರ, ಮುಂದಕ್ಕೆ ಓದೋಣ ಅಂದ್ರೆ ಬೇರೆ ಊರಿಗೆ ಹೋಗ್ಬೇಕಿತ್ತು. ನಮ್ಮಪ್ಪ ಬ್ಯಾಡ ಅಂದ್ರು, ಇರೋ ಜಮೀನು, ದನಗಳನ್ನು ನೋಡ್ಕೋ ಅಂದ್ರು.

ಘಾಟಿಸುಬ್ರಮಣ್ಯ ಜಾತ್ರೆ ನೋಡೋದಿಕ್ಕೆ ಈಗ್ಲೂ ಹೋಗ್ತೀನಿ. ದನ ನೋಡ್ಲಿಕ್ಕೆ ಅಂತ್ಲೇ ಹೋಗ್ತೀನಿ. ಜಾತ್ರೆ ಕೂಡಿ ಮುಗಿಯೋದ್ರೊಳಗೆ ಎರಡು ಸಾರಿ ಹೋಗಿ ಬರ್ತೀನಿ. ಆದ್ರೆ ನಾನೇ ದನ ಹೊಡೆದುಕೊಂಡು ಹೋಗ್ತಾ ಇದ್ದಾಗ ಹತ್ತು ಹನ್ನೆರಡು ದಿನ ಆದ ಮೇಲೆ ಮನೆಗೆ ಬರ್ತಾ ಇದ್ದೆ. ಜಾತ್ರೆಯ ಕೊನೆಯ ದಿನಗಳಲ್ಲಿ ಕಮಿಟಿ ಮೀಟಿಂಗ್ ಅಂತ ಮಾಡ್ತಿದ್ರು, ಆ ಕಮಿಟಿ ಮುಗಿಸಿಕೊಂಡೇ ಬರ್ತಾ ಇದ್ದೆ.

ಪ್ರ : ದನಗಳ ಜಾತ್ರೆಗಳಿಂದ ಕಾಯಿಲೆಗಳು ಹರಡುತ್ತೆ ಅಂಥ ಹೇಳ್ತಾರಲ್ಲಾ?

ಉ : ಕಾಲುಬಾಯಿ ಜ್ವರ ಇದ್ರೆ ಒಂದು ಸ್ವಲ್ಪ ಹರಡುತ್ತೆ. ಆದ್ರೆ ಅದು ಅಂತ ದೊಡ್ಡ ಕಾಯಿಲೆ ಅಲ್ಲ. ಬೇರೆ ಯಾವುದೇ ದೊಡ್ಡ ಅಂಟು ಕಾಯಿಲೆಗಳು ಅಷ್ಟಾಗಿ ಹರಡೋದಿಲ್ಲ. ಕಾಯಿಲೆ ಬರುತ್ತೆ ಅಂತ ಜಾತ್ರೆ ನಿಲ್ಲಿಸೋದು ಸರಿಯಲ್ಲ.

ಪ್ರ : ಬೇರೆ ಯಾವ್ಯಾವ ಜಾತ್ರೆಗೆ ಹೋಗಿದ್ರೀ?

ಉ : ಮೊದಲು ಶುರುವಾಗುವ ಜಾತ್ರೆ ಅಂದರೆ ಅಡ್ಡರೋಟ್ ಜಾತ್ರೆ, ಚಿಂತಾಮಣಿ ಹತ್ರ ಇದೆಯಲ್ಲಾ ಹೆಚ್ ಕ್ರಾಸ್, ಅದನ್ನೇ ಅಡ್ಡರೋಟ್ ಅನ್ನೋದು. ಅಲ್ಲಿಗೆ ಹೋಗಿದ್ದೇನೆ. ಕೊನೆ ಜಾತ್ರೆ ಅಂದ್ರೆ ಶಿವಗಂಗಾ ಜಾತ್ರೆ, ಈ ಮಧ್ಯೆ ನಡೆಯುವಂತಹ ಇಲ್ಲಾ ಜಾತ್ರೆಗಳಿಗೂ ಹೋಗಿದ್ದೀನಿ. ನನಗೆ ಅದೊಂದು ಆಸಕ್ತಿ, ಹವ್ಯಾಸ. ದನಗಳನ್ನ ಹೆಂಗೆಂಗೆ ಸಾಕಿರ್ತಾರೆ ಅನ್ನೋದನ್ನ ನೋಡಕ್ಕೇ ಹೋಗ್ತಿದ್ದೆ. ಮಾಗಡಿ ಹತ್ರ ನಡೆಯುವ ಸುಗ್ಗನಹಳ್ಳಿ ಜಾತ್ರೆಗೆ, ಸಿದ್ಧಗಂಗಾ, ನೆಲಮಂಗಲ ಹತ್ರ ನಡೆಯುವ ಮಹಿಮಾರಂಗ ಪರಿಷೆ, ಮಾಕಳಿ ಪರಿಷೆ, ಜಿನ್ನಾಗರ ಪರಿಷೆ, ಉಪ್ಪಾರಹಳ್ಳಿ ಪರಿಷೆ, ಕೋಲಾರದ ವಕ್ಕಲೇರಿ, ಹೀಗೆ ಸುತ್ತಾ ಮುತ್ತಾ ನಡೆಯೋ ಎಲ್ಲಾ ಜಾತ್ರೆಗೆ ಮತ್ತೆ ಮತ್ತೆ ಹೋಗಿದ್ದೇನೆ. ಈ ಜಾತ್ರೆಗಳು ಅಂದ್ರೆ ನನಗೆ ಹಬ್ಬಗಳಿಗಿಂತಾ ಮಿಗಿಲು.

ಈ ಜಾತ್ರೆಗಳಲ್ಲಿ ಐಬು ಇರುವ ದನಗಳನ್ನು ಮೋಸ ಹೋಗಿ ಯಾರಾದರು ಕೊಂಡು ಕೊಂಡುಬಿಟ್ಟಿದ್ದರೆ ಅವನ್ನ ಈ ಜಾತ್ರೆಗಳ ಸರಮಾಲೆಯಲ್ಲೇ ಕೊನೆಯ ಜಾತ್ರೆಯಾದ ಶಿವಗಂಗಾ ಜಾತ್ರೆಯಲ್ಲಿ ಜನ ನಷ್ಟದ ಬೆಲೆಗೆ ಮಾರಿಕೊಳ್ತಾ ಇದ್ರು.

ಪ್ರ : **ದನಗಳಿಗೆ ಬೇಕಾಗುವ ಪರಿಕರಗಳು, ಹಾಗಯೇ ವ್ಯವಸಾಯಕ್ಕೆ ಬೇಕಾಗುವ ಪರಿಕರಗಳನ್ನು ಹೇಗೆ ಮಾಡಿಕೊಳ್ತಾ ಇದ್ರಿ?**

ಉ : ಕುಕ್ಕೆಯನ್ನು ನಾನೇ ಹೆಣೀತಿದ್ದೆ. ಇಪ್ಪತ್ತು ಮುವ್ವತ್ತು ವರ್ಷದ ಹಿಂದೆ ಹೆಣೆದಿರುವ ಕುಕ್ಕೆಯನ್ನು ಇನ್ನೂ ಇಟ್ಟಿದ್ದೀನಿ (ನರಸಿಂಹಯ್ಯನವರೇ ಎದ್ದು ಹೋಗಿ ಕುಕ್ಕೆ ತಂದು ತೋರಿಸಿದರು). ಬಿದಿರು ದಬ್ಬೆ, ನಸೆಹುಲ್ಲು, ಸಣ್ಣ ಕಂಬಿ ಬಳಸಿ ಕುಕ್ಕೆ ಹೆಣೀತಿದ್ದೆ. ಬಿದಿರು ಬೊಂಬಿನಲ್ಲಿ ಗೊಟ್ಟ ಮಾಡ್ತಾರೆ ಅದರಲ್ಲಿ ಸಿಬುರುಗಳು ಇದ್ರೆ ಗೊಟ್ಟ ಎತ್ತಿದಾಗ ನಾಲಿಗೆಗೆ ಗಾಯ ಆಗಬಹುದು. ಆವಾಗ ಮೇವು ತಿನ್ನಾಕೆ ಕಷ್ಟ ಅಂತ ನಾನು ಸುಮಾರು ಬಿದಿರು ಭೊಂಬಿನ ಗಾತ್ರದಷ್ಟಿರುವ ಪ್ಲಾಸ್ಟಿಕ್ ಪೈಪನ್ನ ಬಳಸಿ ಅದರ ತಳವನ್ನು ಸುಟ್ಟೂ ಸುಟ್ಟು ಮುಚ್ಚಿಕೊಂಡು ಗೊಟ್ಟದ ಆಕಾರಕ್ಕೆ ತಂದುಕೊಂಡೆ. ಇದು ತುಂಬಾ ಸರ್ವೀಸ್ ಕೊಟ್ಟಿದೆ. ಬೇರೆಯವರು ಈಗಲೂ ಇದನ್ನು ತಗೊಂಡು ಹೋಗ್ತಾರೆ. ಅದೂ ಕೂಡ ಇದೆ ನೋಡಿ (ಮಗನಿಗೆ ಹೇಳಿ ಗೊಟ್ಟ ತರಿಸಿ ತೋರಿಸಿದರು).

ಕುಪ್ಪೆ (ಕೊಂಬುಕುಪ್ಪಿ)ಯನ್ನು ಹಾಯುವ ಎತ್ತಿಗೆ ಹಾಕ್ತೀವಿ. ಅಂದ ಚಂದಕ್ಕೆ ಕೂಡ ಕುಪ್ಪಿ ಹಾಕ್ತೀವೆ. ಗಾಡಿ ಹೊಡೆಯುವ ಎತ್ತುಗಳಿಗೆ ಕುಪ್ಪಿ ತುದಿಯಲ್ಲಿರುವ ರಂಧ್ರಗಳಿಗೆ ಗೆಜ್ಜೆ ಕಟ್ಟಿ, ಹೆಜ್ಜೆ ಹಾಕಿದಂಗೆಲ್ಲಾ ಘಲ್ ಘಲ್ ಶಬ್ಧ ಬರೋಹಾಗೆ ಮಾಡ್ತಾ ಇದ್ವಿ.

ನೊಗವನ್ನು ನೀರುವಂಜಿ ಮರದಿಂದ ಮಾಡಿಕೊಳ್ತೇವೆ. ಯಾಕೆ ಅಂದ್ರೆ ಇದು ಗಟ್ಟಿ ಜಾಸ್ತಿ, ತೂಕ ಕಮ್ಮಿ. ನೀರುವಂಜಿ ಮರ ಖಾನೆಗಳಲ್ಲಿ ನೀರು ನಿಲ್ಲುವ ಜಾಗದಲ್ಲಿ ಮತ್ತು ಕಾಲುವೆಗಳ ಪಕ್ಕ ಸಾಮಾನ್ಯವಾಗಿ ಬೆಳೆಯುತ್ತೆ.

ಮರದ ನೇಗಿಲನ್ನು ಕಗ್ಗಲೀ ಮರ, ಜಾಲಿಮರ ಅಥವಾ ಸರ್ವೇ ಮರದಲ್ಲಿ ಮಾಡಿಕೊಳ್ತೇವೆ.

ಪ್ರ : **ಹಿರಿಯರು ದನಗಳಿಗೆ ಅಂತ ಗೋಕಲ್ಲು ನೆಡುತ್ತಾ ಇದ್ರು, ಗೋಕುಂಟೆ ಕಟ್ಟಿಸ್ತಿದ್ರು ಇದರ ಬಗ್ಗೆ ಸ್ವಲ್ಪ ಹೇಳಿ?**

ಉ : ನಮ್ಮೂರಲ್ಲಿ ಊರ ಮಧ್ಯೆ ಉದ್ದವಾಗಿ ನೆಟ್ಟಿರೋ ಎರಡು ಕಲ್ಲುಗಳು ಈಗಲೂ ಇದ್ದಾವೆ. ಇವೇ ಗೋಕಲ್ಲುಗಳು. ಮಂದೆ ಮಂದೆ ದನ ಇದ್ರೆ ಅವಕ್ಕೆಲ್ಲಾ ನಾವೇ ಮೈ ಉಜ್ಜೋಕೆ ಆಗ್ತಾ ಇರ್ಲಿಲ್ಲ. ಗೋವುಗಳು ನೀರಲ್ಲಿ ಬಿದ್ದ ಮೇಲೆ ಅವೇ ಬಂದು ಈ ಗೋಕಲ್ಲುಗಳಿಗೆ ಮೈ ಉಜ್ಜಿಕೊಳ್ತಾವೆ.

ನಮ್ಮನೇಲಿ ನೂರು ದನ ಇತ್ತು. ಇವುಗಳನ್ನು ಗೊಬ್ಬರಕ್ಕಾಗಿ ಸಾಕ್ತಾ ಇದ್ವಿ. ಇವನ್ನೆಲ್ಲಾ ಒಂದೇ ಕೊಟ್ಟಿಗೆಯಲ್ಲಿ ಕೂಡಿ ಹಾಕ್ತಾ ಇದ್ವಿ. ಇವಕ್ಕೆ ಹಗ್ಗ ಗಿಗ್ಗಾ ಕಟ್ತಾ ಇರ್ಲಿಲ್ಲ. ಅದಕ್ಕೆ ಇವನ್ನ 'ಕೂಡು ಕೊಟ್ಟಿಗೆ ದನ' ಅಂತ ಕರೀತಾ ಇದ್ವಿ. ಕೊಟ್ಟಿಗೆಯಿಂದ ಆಚೆ ಬಿಟ್ರೆ ಇವು ಮೈ ಮುರಿದುಕೊಂಡು ಗೋಕಲ್ಲುಗಳಿಗೆ ಮೈ ಉಜ್ಜಿಕೊಂಡು ಮೇಯೋದಿಕ್ಕೆ ಹೋಗ್ತಾ ಇದ್ವು.

ಇನ್ನು ಗೋಕುಂಟೆ ಬಗ್ಗೆ ಕೇಳಿದ್ರಿ. ದನಗಳು ನೀರು ಕುಡಿಯಾಕೆ ಅಂತ ಗೋಮಾಳದಲ್ಲಿ ಒಂದು ಕುಂಟೆ ಮಾಡ್ತಿದ್ವು. ಗೋಮಾಳದಲ್ಲಿ ಮೇದ ದನಗಳು ಅಲ್ಲಿ ನೀರು ಕುಡೀತಾವೆ. ನಮ್ಮೂರ ಹತ್ತಿರ ಈಗಲೂ ದಾಸಯ್ಯನ ಕುಂಟೆ ಅಂತ ಇದೆ. ಅದೇ ಗೋಕುಂಟೆ.

ಪ್ರ : **ಮೈಸೂರು ಮಹಾರಾಜರನ್ನ ಬಿಟ್ರೆ ಬೇರೆ ಯಾರ್‍ಯಾರು ನಿಮ್ಮ ದನ ಸಾಕೋ ಕೌಶಲ್ಯವನ್ನು ಹಾಡಿ ಹೊಗಳಿದ್ದಾರೆ?**

ಉ : ಎಂ.ವಿ. ಕೃಷ್ಣಪ್ಪನವರು. ಇವರು ಪಶುಪಾಲನಾ ಮಂತ್ರಿಗಳಾಗಿದ್ದರು. ಇವರು ಯಾವುದೇ ಜಾತ್ರೆಗೆ ಹೋದ್ರೂ ಅಲ್ಲಿ ಭಾಷಣದಲ್ಲಿ ನನ್ನ ಬಗ್ಗೆ ಹೇಳ್ತಾ ಇದ್ರು. ಬೆಂಗಳೂರು ಉತ್ತರ ತಾಲ್ಲೂಕಿನ ಅರಕೆರೆಗೆ ಹೋಗಿ ನರಸಿಂಹಯ್ಯನವರ ದನ ನೋಡಿ ಬನ್ನಿರಿ ಅಂತಿದ್ದರು.

ಡಾ. ಎಂ. ನಾರಾಯಣಸ್ವಾಮಿ ಅಂತ, ನಿಮ್ಮೆಸರಿನವರೇ ಪಶುಪಾಲನಾ ಇಲಾಖೆಯ ನಿರ್ದೇಶಕರಾಗಿದ್ದರು. ಅವರೂ ಕೂಡ ತುಂಬಾ ಮೆಚ್ಚಿ ಕೊಂಡಿದ್ದರು.

ಚಿಕ್ಕೇಗೌಡ್ರು, ಹೊಸಕೋಟೆಯವರು. ಇವರೂ ಮಂತ್ರಿಯಾಗಿದ್ದರು. ಇವರೂ ಕೂಡ ನನ್ನ ಪಶುಪಾಲನೆಯನ್ನು ತುಂಬಾ ಮೆಚ್ಚಿಕೊಂಡಿದ್ದರು. ಇವರ ಊರು ಗಟ್ಟಿಗನ ಹಬ್ಬಿ. ತುಂಬಾ ದೊಡ್ಡ ಮನುಷ್ಯರು. ನನಗೆ ಪಶುಪಾಲನೆ ಬಗ್ಗೆ ಇದ್ದ ಆಸಕ್ತಿಯಿಂದಾಗಿ ನನ್ನ ಮಗ ಹನುಮೇಗೌಡನನ್ನ ದನಗಳ ಡಾಕ್ಟ್ರು ಮಾಡಿಸ್ಬೇಕು ಅಂತ ಚಿಕ್ಕೇಗೌಡ್ರ ಹತ್ತಿರ, ಹೆಬ್ಬಾಳದ ವೆಟರಿನರಿ ಕಾಲೇಜಲ್ಲಿ ಸೀಟು ಕೊಡ್ಸಿ ಅಂತ ಕೇಳಾಕೆ ಹೋಗಿದ್ದೆ. ಮಂತ್ರಿ ಆಗಿದ್ರೂ ಕೂಡ ಗಟ್ಟಿಗನ ಹಬ್ಬಿಯ ಅವರ ಮನೆಯಲ್ಲಿ ಅವರು ಕೋಲು ಊರಿಕೊಂಡು ರಾಗಿ ತೆನೆ ತುಳೀತಾ ಇದ್ರು. ಅದನ್ನು ನೋಡಿ ನಾನು ಬೆಚ್ಚಿ ಬೆರಗಾದೆ. ಆಮೇಲೆ ನಮ್ಮ ಮಗನಿಗೆ ಸೀಟು ಕೊಡಿಸಿದರು ಅನ್ನಿ. ಈಗ ನನ್ನ ಮಗ ಪಶುವೈದ್ಯನಾಗಿ ನಿವೃತ್ತಿ ಕೂಡ ಆಗಿದ್ದಾನೆ.

ಇನ್ನು ನನ್ನ ದನ ನೋಡಾಕೆ ಅಂತ ಒಬ್ರು ದೊಡ್ಡ ರೈತರು ಬೈಯಣ್ಣ ರೆಡ್ಡಿ ಅಂತ. ಶ್ರೀನಿವಾಸಪುರದ ಹತ್ರ ಗೌನೀಪಲ್ಲಿಯವರು. ಆಗಾಗ ಬರ್ತಾ ಇದ್ರು ಅವ್ರ ದನ ನೋಡಾಕೆ ನಾನೂ ಹೋಗ್ತಾ ಇದ್ದೆ.

ಪ್ರ : **ಇಷ್ಟೆಲ್ಲಾ ದನ ಸಾಕಿರೋ ನೀವು ಅವುಗಳ ಸಿಟ್ಟಿನ ಸ್ವಭಾವವನ್ನು ಹೇಗೆ ಕಮ್ಮಿ ಮಾಡ್ತಾ ಇದ್ರಿ?**

ಉ : ಹಾಯುವ ದನಗಳಿಗೆ ತೆಂಗಿನ ಮೂಗುದಾರ ಹಾಕ್ತಾ ಇದ್ವು. ತೆಂಗಿನ ಹಗ್ಗವನ್ನು ಬೆಂಕಿಯಲ್ಲಿ ನವುರಾಗಿ ಸೀದುಕೊಂಡು ಮುಳ್ಳಿನ ತರ ಚುಚ್ಚೋ ಹಾಗೆ ಮಾಡಿಕೊಂಡು ಹಾಕ್ತಾ ಇದ್ವು. ಹಾಯೋಕೆ ಬಂದಾಗ ನಾವು ಹಗ್ಗ ಎಳೆದರೆ ಅವುಗಳ ಮೂಗಿಗೆ ಈ ತೆಂಗಿನ ಮೂಗು ದಾರ ಚುಚ್ಚಿ ಸಿರ್ ಅಂತ ಬಾಯಿ ತೆಗೆದು ಅವೇ ಹೆದರಿ ತಲೆ ಬಗ್ಗಿಸ್ತಿದ್ವು. ಆ ತರ ಹಾಯೋ ದನಗಳನ್ನ ಪಳಗಿಸ್ತಿದ್ವಿ. ಬೆಲ್ಲ ಕೊಟ್ಟು, ಹಿಂಡಿ ಕಲೆಸಿ ಕೊಟ್ಟು ಪಳಗಿಸಿಕೊಳ್ತಾ ಇದ್ವಿ.

ಪ್ರ : **ದನಗಳ ಬೆದೆ ಚಿಹ್ನೆಗಳನ್ನು ಹೇಗೆ ಗುರುತಿಸಿಕೊಳ್ತಾ ಇದ್ರಿ?**

ಉ : ಬೆದೆ ದನಗಳು ಬೇರೆ ಹಸುಗಳ ಮೇಲೆ ದಾಟುತ್ತಾ ಇದ್ವು, ನಮ್ಮ ಮೇಲೇನೇ ದಾಟೋದಿಕ್ಕೆ ಬರ್ತಾ ಇದ್ವು. ಅವುಗಳ ಮಡಿಲಲ್ಲಿ ಬಿಳಿ ಲೋಳೆ ಆಡ್ತಾ ಇರ್ತಿತ್ತು. ಅರಚೋದಂತೂ ತುಂಬಾ ಜಾಸ್ತಿ.

ಪ್ರ : **ದನಗಳಿಗೆ ಸಾಮಾನ್ಯವಾಗಿ ಏನೇನು ಮೇವು ಬೆಳೆದುಕೋಳ್ತಾ ಇದ್ರಿ?**

ಉ : ರಾಗಿ ಹೊಲದ ಜೋಳದ ಕಡ್ಡಿ, ಅವರೇ ಗಿಡದ ಅಂಬು, ಅವರೆ ತರಳು ಕಿತ್ತ ಮೇಲೆ ಅವರೆ ಗಿಡ, ಹುಚ್ಚೆಳ್ಳು ಗಿಡ, ರಾಗಿ ಒಣ ಹುಲ್ಲು ಬಳಸ್ತೀವಿ. ಜೊತೆಗೆ ಜೋಳದ ಒಟ್ಲು ಹಾಕಿ ಅದರ ಜೊತೆ ಹುರಳಿ ಹಾಕಿದ್ರೆ ಹುರಳಿ ಬಳ್ಳಿ ಬಂದು ಕಾಯಿ ಬಿಡ್ತಾ ಇತ್ತು. ಒಂದು ಹದಾ ನೋಡಿ ಕೊಯ್ದು ಹಾಕ್ತಾ ಇದ್ವು.

ಹೆಜ್ಜಾಮೆ ಒಟ್ಲು, ಸಾಮೆ ಒಟ್ಲು ಹಾಕ್ತಾ ಇದ್ವು. ಗೌರ್ನಮೆಂಟ್ ಹುಲ್ಲು, ಅದೇ ಎನ್.ಬಿ. 21 ಅಂತಾರಲ್ಲಾ ಅದು ಬಂದ ಮೇಲೆ ಕೂಡ ಜೋಳದ ಒಟ್ಲೇ ಹಾಕ್ತೀವಿ. ಯಾಕಂದ್ರೆ ಗೌರ್ನಮೆಂಟ್ ಹುಲ್ಲಿಗೆ ಜಾಸ್ತಿ ನೀರು ಬೇಕು.

ಇವೆಲ್ಲಾ ಏನೇ ಇರ್ಲಿ. ಕಳೇ ಗಿಡ, ಕಳೆ ಹುಲ್ಲು ದನಗಳಿಗೆ ಅರ್ಧದಷ್ಟು ಆಹಾರವನ್ನು ಒದಗಿಸಿ ಬಿಡುತ್ತವೆ.

ಪ್ರ : **ಬೇಸಾಯಕ್ಕೆ ದನಗಳನ್ನ ಹೇಗೆ ಪಳಗಿಸಿಕೊಳ್ತಾ ಇದ್ರಿ?**

ಉ : ಅದು ಕಷ್ಟ ಅಂತ ನಮ್ಗೆ ಅನ್ನಿಸ್ಲಿಲ್ಲ. ಹೊಸ ದನಗಳನ್ನ ನೇಗಿಲಿಗೆ ಕಟ್ಟಿ ಆ ನೇಗಿಲನ್ನ ಪಳಗಿಸಿರೋ ದನ ಎಳೀತಾ ಇರೋ ಮುಂದಿನ ನೇಗಿಲಿನ ಹಿಂದೆ ಬಿಟ್ಟು ಹೊಡೆದರೆ ಪ್ರಾರಂಭದಲ್ಲಿ ಸ್ವಲ್ಪ ಗಲಾಟೆ ಮಾಡ್ತಾ ಇದ್ವು. ಕತ್ತನ್ನ ನೊಗದಿಂದ ಆಚೆ ತೆಗೆದು ಕಾಡೇ ಹಾಕಿಕೊಳ್ತಾ ಇದ್ವು. ಆಮೇಲಾಮೇಲೆ ಎಲ್ಲಾ ಸರಿ ಹೋಗ್ತಾ ಇತ್ತು. 'ಆರಂಭ ಅನ್ನೋದು ಆರಂಭ ಆಗ್ತಾ ಇದ್ದಿದ್ದೇ ಹೀಗೆ ನೋಡಿ' ಎಂದು ನಕ್ಕರು.

ಪ್ರ : ನಿಮ್ಮ ಕಾಲದಲ್ಲಿ ಒಂದು ಜೋಡಿ ಎತ್ತುಗಳ ಬೆಲೆ ಎಷ್ಟಿತ್ತು? ಈಗೆಷ್ಟಿದೆ?

ಉ : ನಮ್ಮ ಕಾಲದಲ್ಲಿ ಒಂದು ಜೋಡಿ ಎತ್ತುಗಳನ್ನ ಮೂರು ಸಾವಿರ ರೂಪಾಯಿಗೆ ಮಾರಿದರೆ ಅಬ್ಬಬ್ಬಾ ಅನ್ನುತ್ತಾ ಇದ್ವು. ಈಗ ಕೆಲವರು ಒಂದು ಲಕ್ಷಕ್ಕೆ ಮಾರಿದೆವು ಅಂತಾರೆ. 90 ಸಾವಿರ ರೂಪಾಯಿಗೆ ಕೊಟ್ಟಿದ್ದನ್ನ ನಾನೆ ನೋಡಿದ್ದೇನೆ. ಅದಕ್ಕೇ ಹೇಳೋದು "ಎತ್ತಿಗೂ ಮುತ್ತಿಗೂ ಬೆಲೆ ಇಲ್ಲ" ಅಂತ. ಅಂದರೆ, ಎತ್ತು ಮತ್ತು ಮುತ್ತಿನ ಬೆಲೆ ಅದಷ್ಟಕ್ಕೆ ಅದೇ ಮೇಲಕ್ಕೆ ಹೋಗ್ತಾ ಇರ್ತದೆ.

ಪ್ರ : ತಮ್ಮ ದನಗಳಿಗೆ ಕಾಯಿಲೆ ಬಂದಾಗ ನೀವೇ ಯಾವ್ಯಾವ ನಾಟಿ ವೈದ್ಯ ಮಾಡಿಕೊಳ್ತಾ ಇದ್ದಿರಿ?

ಉ : ಸೆಲೆ ಬಂದಾಗ ದನಗಳಿಗೆ ಜ್ವರ ಬರ್ತಿತ್ತು. ಕಾಲು ನೋವು ಆಗ್ತಿತ್ತು, ಕಾಲು ಕುಂಟು ಆಗ್ತಿತ್ತು. ಆಗ ಅನೆ ಲದ್ದಿ ತಂದು ಕಲೆಸಿ ಕುಡಿಸ್ತಾ ಇದ್ದೆವು.

ರಕ್ತ ಪಿಂಜರಿ ಕಾಯಿಲೆ ಬಂದರೆ ಸಗಣಿಯಲ್ಲಿ ರಕ್ತ ಬರ್ತಿತ್ತು. ಆಗ ಸಗಣಿ ತುಂಬಾ ವಾಸನೆ. ಕೋಳಿ ಪಿಳ್ಳೆಯನ್ನು (ಕೋಳಿಮರಿ) ಅರಳೆಣ್ಣೆಯಲ್ಲಿ ಅದ್ದಿ ತಿನ್ನಿಸಿದರೆ ಗುಣ ಆಗ್ತಿತ್ತು.

ಅಜೀರ್ಣತೆ ಆದಾಗ ವೀಳ್ಯೆದೆಲೆ ಮತ್ತು ಬೆಲ್ಲ ತಿನ್ನಿಸ್ತಾ ಇದ್ದೆವು. ಮಜ್ಜಿಗೆ ಸಾರು ಮಾಡಿ ಗೊಟ್ಟದಲ್ಲಿ ಎತ್ತಿದರೆ ವಾಸಿ ಆಗ್ತಿತ್ತು. ಚಪ್ಪೆ ರೋಗ ಬಂದಾಗ ಹಿಂಗಾಲುಗಳ ಚಪ್ಪೆ (ಮಾಂಸಖಂಡ)ಗಳು ಊತ ಆಗಿ ಮುಟ್ಟಿದರೆ ಬುರಬುರ ಅಂತ ಶಬ್ಧ ಬರ್ತದೆ. ಆಗ ಬರೆ ಹಾಕ್ತಾ ಇದ್ದೆವು. ವಾಸಿ ಆಗ್ತಿತ್ತು.

ಕಾಲುಬಾಯಿ ಜ್ವರ ಬಂದಾಗ ಬಿಸಿಲಿನಲ್ಲಿ ಕಾದ ಮರಳಲ್ಲಿ ನಡೆಸ್ತಾ ಇದ್ದೆವು. ಆ ಹದವಾದ ಬಿಸಿಗೆ ಕಾಲುಗಳ ಗಾಯ ವಾಸಿ ಆಗ್ತಿತ್ತು. ಈರುಳ್ಳಿ ಹೂವನ್ನು ಕೂಡ ತಿನ್ನಿಸ್ತಾ ಇದ್ದೆವು.

ಕರು ಹಾಕಿದ ನಂತರ ಸೆತ್ತೆ ಬೀಳಲು ಎರಡು ಹಿಡಿ ಬಿದಿರು ಸೊಪ್ಪು ತಿನ್ನಿಸ್ತಾ ಇದ್ದೆವು. ಕರು ಹಾಕಿದಾಗ ಲೋಳೆ ಕಿತ್ತು ಕರು ಮೈಗೆಲ್ಲಾ ಹಚ್ಚಿದರೆ, ಕರುವಿನ ಮೈಯನ್ನು ಹಸು ನೆಕ್ಕುತ್ತದೆ. ಆದರಿಂದ ಕರುವಿಗೆ ಶಕ್ತಿ ಬಂದಂತಾಗಿ ಕರು ತಾನಾಗೇ ಎದ್ದು ಓಡಾಡುತ್ತೆ.

ಸಿಡಿಗಾಲು ಆದರೆ ನರ ಸೇದಿಕೊಳ್ಳೋದು. ಇದಕ್ಕೆ ನಾಟಿ ವೈದ್ಯ ಏನೂ ಇಲ್ಲ. ಆಪರೇಷನ್ ಮಾಡೋದೇ ಸರಿ. ಆ ಸೇದುಹೋದ ನರವನ್ನು (ಲಿಗಮೆಂಟ್) ನಾವೇ ಕುಯ್ದರೆ ಕಾಲೇ ಹೋಗಿಬಿಡುತ್ತೆ.

ಪ್ರ : ಸಗಣಿಯನ್ನು ವಿವಿಧ ರೀತಿಯಲ್ಲಿ ಹೇಗೆ ಬಳಸುತ್ತಾ ಇದ್ದಿರಿ?

ಉ : ಹೊಲ-ಗದ್ದೆ, ತೋಟಗಳಿಗೆ ಗೊಬ್ಬರಕ್ಕಾಗಿ ಸಗಣಿ ಬಳಸುತ್ತೇವೆ. ಬೆರಣಿ ಮಾಡಲು, ಗೋಬರ್ ಗ್ಯಾಸ್‌ಗೆ ಸಗಣಿ ಬೇಕು. ಮನೆ ಸಾರಿಸಲು ಗೋವಿನ ಸಗಣಿ ಶ್ರೇಷ್ಠವಾದದ್ದು.

ಕೊಟ್ಟಿಗೆಯಲ್ಲಿ ಎತ್ತುಗಳ ಕೆಳಗೆ ಮೆತ್ತನೆಯ ಹಾಸು ಹಾಸಲು ಸಗಣಿಯನ್ನು ಹಿಚುಕಿ, ಪುಡಿಮಾಡಿ, ಒಣಗಿಸಿ, ಗೊಬ್ಬರ ಮಾಡಿ ಬಳಸಲಾಗ್ತಾ ಇದೆ. ಇದು ಶುಚಿತ್ವಕ್ಕೆ, ದನಗಳ ಉತ್ತಮ ಆರೋಗ್ಯಕ್ಕೆ ಹಾಗೂ ಒಳ್ಳೆಯ ಬೆಳವಣಿಗೆಗೆ ಅಗತ್ಯ.

ಆದರೆ ಈಗ ಕಾಲ ಬದಲಾಗ್ತಾ ಇದೆ. ಬೆಂಗಳೂರು ಸುತ್ತ ಮುತ್ತ ಭೂಮಿ ಕಮ್ಮಿ ಆಗ್ತಾ ಇದೆ. ವ್ಯವಸಾಯ ಕಮ್ಮಿ ಆಗ್ತಾ ಇದೆ. ಕೂಲಿ ಆಳುಗಳು ಸಿಕ್ತಾ ಇಲ್ಲ. ದನ ಕಟ್ಟುವವರ ಸಂಖ್ಯೆ ಕಮ್ಮಿ ಆಗ್ತಾ ಇದೆ. ಕೃಷಿ ಕೆಲಸಗಳಿಗೆ ಟ್ರಾಕ್ಟರ್ ಇಟ್ಟುಕೊಳ್ತಾರೆ. ನಮ್ಮದೂ ಒಂದು ಟ್ರಾಕ್ಟರ್ ಇದೆ. ಸಂಪಾದನೆಗೆ, ಹಾಲು ಉತ್ಪಾದನೆಗೆ ಅಂತ ಮಿಶ್ರ ತಳಿ ಹಸುಗಳನ್ನು ಕಟ್ಟುವುದು ಜಾಸ್ತಿ ಆಗ್ತಾ ಇದೆ. ಇದೆಲ್ಲದರ ಮಧ್ಯೆ ನಮ್ಮ ದೇಸಿ ದನಗಳನ್ನೂ ಕಾಪಾಡಿಕೊಳ್ಳ ಬೇಕಾಗ್ತದೆ. ದೇಸಿ ದನ ಸಾಕೋ ಪ್ರೀತಿ ನನಗಂತೂ ಈಗಲೂ, ಈ ವಯಸ್ಸಲ್ಲೂ ಇದೆ.

▲▲▲▲▲

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೋಳ / ಬೂಮ್ತಾಯಿ
ಎದ್ದೊಂದು ಗಳಿಗೆ ನೆನದೇನ

ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಹಸಿರುಕ್ರಾಂತಿಯ ಹೆಸರಿನಲ್ಲಿ ಭೂಮಿಯ ಜೈವಿಕಸತ್ವವನ್ನು ಮನುಷ್ಯ ನಾಶಮಾಡಿದ್ದಾನೆ.

ಆಧುನಿಕತೆಯ ಹೆಸರಿನಲ್ಲಿ ಭೂಮಿಯ ಮೇಲೆ ಅತ್ಯಾಚಾರ ನಡೆದಿದೆ. ಆದರೆ, ನಮ್ಮ ಪೂರ್ವಿಕರು ಎಂದೂ ನಿಸರ್ಗಧರ್ಮಕ್ಕೆ ವಿರುದ್ಧವಾಗಿ ಬದುಕನ್ನು ಕಟ್ಟಿಕೊಂಡವರಲ್ಲ.

ಬಿತ್ತುವ ಬೀಜ, ಬಳಸುವ ಗೊಬ್ಬರ, ಉಪಕರಣ, ಕೃಷಿ ಮಾಡುವ ವಿಧಾನ, ಕಾಲಮಾನ-ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ, ಇದು ದೇಸೀ ವಿಜ್ಞಾನ, ಇದು ಮಾತ್ರ ಜೀವ ಸಂಕುಲವನ್ನು, ನಿಸರ್ಗವನ್ನು ಬಾಳಿಸುವ ಕೃಷಿಪದ್ಧತಿ.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು